ಸಂಪುಟ: 05 ಸಂಚಿಕೆ: 126 ಪುಟಗಳು: 08 ಶನಿವಾರ 19 ಜುಲೈ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಮನುಷ್ಯನು ಅವನ ನಂಬಿಕೆಗಳಿಂದ ಮಾಡಲ್ಪಟ್ಟಿದ್ದಾನೆ. ಅವನ ನಂಬಿಕೆಯಂತೆ. ಆದ್ದರಿಂದ ಅವನು ಆಗುತ್ತಾನೆ.


# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ಜುಲೈ 30ಕ್ಕೆ ಪ್ರಜ್ವಲ್ ರೇವಣ್ಣ ಜಾಮೀನು ಭವಿಷ್ಯ!

• ಉದಯವಾಹಿನಿ, ಬೆಂಗಳೂರು

ಪ್ರಜ್ವಲ್ ರೇವಣ್ಣ ವಿರುದ್ಧ ದಾಖಲಾಗಿರುವ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ವಿಚಾರಣೆಯನ್ನು ಮುಕ್ತಾಯಗೊಳಿಸಿದೆ. ಹಾಸನದ ಹೊಳೆನರಸೀಪುರದ ಮನೆ ಕೆಲಸದಾಕೆಯೊಬ್ಬರು ಸಲ್ಲಿಸಿದ ದೂರಿನ ಆಧಾರದ ಮೇಲೆ ದಾಖಲಾದ ಈ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಇನ್ನೂ ಜೈಲುವಾಸದಲ್ಲಿದ್ದಾರೆ. ಅಲ್ಲದೇ ಜಾಮೀನಿಗಾಗಿ ಅರ್ಜಿ ಸಲ್ಲಿಸುತ್ತಲೇ ಇದ್ದರು. ಇದೀಗ ಕೊನೆಗೂ ನ್ಯಾಯಾಲಯ ಈ ಪ್ರಕರಣಕ್ಕೆ ಸಂಬಂಧಿಸಿದ ಅಂತಿಮ ತೀರ್ಪನ್ನು ಜುಲೈ 30, 2025ಕ್ಕೆ ಕಾಯ್ದಿರಿಸಿದೆ. ಪ್ರಜ್ವಲ್ ರೇವಣ್ಣ ವಿರುದ್ಧ ಒಟ್ಟು ನಾಲ್ಕು ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ, ಮನೆ ಕೆಲಸದಾಕೆಯೊಬ್ಬರು ತಮ್ಮ ಮೇಲೆ ಅತ್ಯಾಚಾರ ನಡೆದಿದೆ ಎಂದು ಆರೋಪಿಸಿ ಸಲ್ಲಿಸಿದ ದೂರಿನ ಆಧಾರದ ಮೇಲೆ ಈ ಪ್ರಕರಣವು ವಿಶೇಷ ತಿರುವು ಪಡೆದಿತ್ತು. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಈ ಪ್ರಕರಣದ ವಿಚಾರಣೆಯನ್ನು ಗಂಭೀರವಾಗಿ ನಡೆಸಿತು. ಆರೋಪಿ ಪ್ರಜ್ವಲ್ ರೇವಣ್ಣ ಹಾಗೂ 26 ಸಾಕ್ಷಿಗಳನ್ನು ವಿಚಾರಣೆಗೆ ಈಗಾಗಲೇ ಒಳಪಡಿಸಲಾಯಿತು. ಚಾರ್ಜ್‌ಶೀಟ್‌ನ ಅಂಶಗಳ ಕುರಿತು ಎರಡೂ ಕಡೆಯ ವಕೀಲರು ತಮ್ಮ ವಾದ-ಪ್ರತಿವಾದಗಳನ್ನು ಮಂಡಿಸಿದರು.

## ನೂತನ ಡಿಸಿಪಿ ನಾರಾಯಣ ಭರಮನಿ ಅಧಿಕಾರ ಸ್ವೀಕಾರ

• ಉದಯವಾಹಿನಿ, ಬೆಳಗಾವಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತುಂಬಿದ ಸಭೆಯಲ್ಲಿ ತಮ್ಮ ಮೇಲೆ ಕೈ ಮಾಡಲು ಮುಂದಾಗಿದ್ದ ಘಟನೆ ಬಳಿಕ ಮನನೊಂದು ಸ್ವಯಂ ನಿವೃತ್ತಿಗೆ ಮುಂದಾಗಿ ಸುದ್ದಿಯಾಗಿದ್ದ ನಾರಾಯಣ ಭರಮನಿ ಇಂದು ಬೆಳಗಾವಿ ನಗರದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ನೂತನ ಡಿಸಿಪಿಯಾಗಿ ಅಧಿಕಾರ ಸ್ವೀಕರಿಸಿದರು. ಧಾರವಾಡ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ನಾರಾಯಣ ಭರಮನಿ ಅವರಿಗೆ ರಾಜ್ಯ ಸರ್ಕಾರ ಬೆಳಗಾವಿ ಡಿಸಿಪಿಯಾಗಿ ನೇಮಕ ಮಾಡಿ ನಿನ್ನೆಯಷ್ಟೇ ಆದೇಶ ಹೊರಡಿಸಿತ್ತು. ಹಾಗಾಗಿ, ಇಂದು ಬೆಳಗಾವಿ ನಗರ ಪೊಲೀಸ್ ಆಯುಕ್ತರ ಕಚೇರಿಗೆ ಆಗಮಿಸಿದ ಅವರನ್ನು ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ನಿರಂಜನ ರಾಜೆ ಅರಸ ಹೂಗುಚ್ಛ ನೀಡಿ ಸ್ವಾಗತಿಸಿದರು. ಬಳಿಕ ನೂತನ ಡಿಸಿಪಿ ಆಗಿ ಭರಮನಿ ಅಧಿಕಾರ ಸ್ವೀಕರಿಸಿದರು. ಹಿಂದೆ ಡಿಸಿಪಿ ಆಗಿದ್ದ ರೋಹನ್ ಜಗದೀಶ ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಗಿ ಬಡ್ತಿ ಪಡೆದಿದ್ದಾರೆ.

## ನವೆಂಬರ್ ನಲ್ಲಿ ರಾಜಕೀಯ ಬದಲಾವಣೆ ನಿಶ್ಚಿತ ಎಂದ ಬಿವೈವಿ

• ಉದಯವಾಹಿನಿ, ಬೆಂಗಳೂರು

ತಂತ್ರ-ಕುತಂತ್ರಕ್ಕೂ ಒಂದು ಮಿತಿಯಿದೆ. ರಾಜ್ಯ ರಾಜಕೀಯದಲ್ಲಿ ಬದಲಾವಣೆ ಖಚಿತ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ. ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿ.ವೈ.ವಿಜಯೇಂದ್ರ, ರಾಜ್ಯ ರಾಜಕೀಯದಲ್ಲಿ ನವೆಂಬರ್‌ನಲ್ಲಿ ಬದಲಾವಣೆ ನಿಶ್ಚಿತ. ಬಿಜೆಪಿ ವಿಪಕ್ಷವಾಗಿ ತನ್ನ ಕೆಲಸ ಮಾಡುತ್ತದೆ. ಸಿಎಂ ಬದಲವಣೆಯಾಗುವುದು ಖಚಿತವಾಗಿದೆ ಎಂದರು. ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕೊಡುವ ಸಮಯ ಬಂದಿದೆ. ಹಾಗಾಗಿ ಹೈಕಮಾಂಡ್ ಬೆದರಿಸಲು ಸಮಾವೇಶಗಳನ್ನು ಮಾಡುತ್ತಿದ್ದಾರೆ. ಸಿಎಂ ಸ್ಥಾನ ಅಲ್ಲಾಡುತ್ತಿರುವುದರಿಂದಲೇ ಈ ರೀತಿ ಸಮಾವೇಶಗಳನ್ನು ಮಾಡಿ ಶಕ್ತಿ ಪ್ರದರ್ಶನ ಮಾಡುತ್ತಿದ್ದಾರೆ. ದೆಹಲಿಯಲ್ಲಿ ಸಿದ್ದರಾಮಯ್ಯನವರಿಗೆ ರಾಹುಲ್ ಗಾಂಧಿ ಭೇಟಿಗೂ ಅವಕಾಶವನ್ನು ನೀಡಿಲ್ಲ ಎಂದು ಹೇಳಿದ್ದಾರೆ. ಸಾಧನಾ ಸಮಾವೇಶದ ಹೆಸರಲ್ಲಿ ಸಮಾವೇಶಗಳನ್ನು ಮಾಡುತ್ತಿದ್ದಾರೆ. ಏನು ಸಾಧನೆಗಳನ್ನು ಮಾಡಿದ್ದಾರೆ ಎಂದು ಸಮಾವೇಶ. ಯಾವ ಸಮಾವೇಶಗಳೂ ಈ ಬಾರಿ ಕೆಲಸ ಮಾಡುವುದಿಲ್ಲ. ರಾಜ್ಯದಲ್ಲಿ ರಾಜಕೀಯವಾಗಿ ಬೆಳವಣಿಗೆಗಳು ಆಗುತ್ತಿವೆ. ನವೆಂಬರ್ ಬದಲಾವಣೆ ನಿಶ್ಚಿತ ಎಂದು ಹೇಳಿದರು.

## ಮನೆ ಮನೆಗೆ ಪೊಲೀಸ್' ಕಾರ್ಯಕ್ರಮಕ್ಕೆ ಸಾಂಕೇತಿಕ ಚಾಲನೆ

• ಉದಯವಾಹಿನಿ, ಬೆಂಗಳೂರು


ರಾಜ್ಯ ಪೊಲೀಸ್ ವತಿಯಿಂದ ಆರಂಭಿಸಿರುವ 'ಮನೆ-ಮನೆಗೆ ಪೊಲೀಸ್' ಕಾರ್ಯಕ್ರಮಕ್ಕೆ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಬೆಂಗಳೂರಿನ ಗೋವಿಂದರಾಜ ನಗರದಲ್ಲಿ ಚಾಲನೆ ನೀಡಿದರು. ದೇಶದಲ್ಲಿ ಪ್ರಥಮ ಬಾರಿಗೆ ಈ ಯೋಜನೆಯನ್ನ ಆರಂಭಿಸಲಾಗಿದ್ದು, ಇದರ ಯಶಸ್ಸು ದೇಶವ್ಯಾಪಿ ತಲುಪಲಿದೆ ಎಂದು ಗೃಹ ಸಚಿವರು ಭರವಸೆ ವ್ಯಕಪಡಿಸಿದರು. ಅಪರಾಧ ನಿಯಂತ್ರಣ, ನಾಗರಿಕರಿಗೆ ಸುರಕ್ಷಿತ ವಾತಾವರಣ ಕಲ್ಪಿಸಲು 'ಮನೆ ಮನೆಗೆ ಪೊಲೀಸ್' ವ್ಯವಸ್ಥೆ ಜಾರಿಗೊಳಿಸಲಾಗಿದೆ. ಈ ವ್ಯವಸ್ಥೆಯ ಮೂಲಕ ಆಯಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಂಚಿಕೆ ಮಾಡಲಾಗಿರುವ ಪೊಲೀಸ್ ಗಸ್ತು ಪ್ರಕ್ರಿಯೆ ಇನ್ನಷ್ಟು ಗಟ್ಟಿಗೊಳಿಸಲಾಗುತ್ತದೆ. ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯ ಸರಹದ್ದನ್ನು ಬೀಟ್‌ಗಳಾಗಿ ವಿಂಗಡಿಸಿದ್ದಾರೆ.

# ಎಸ್ಮಾ ಜಾರಿ ಮುಷ್ಕರ ಬಿಡಿ

**ಮುಷ್ಕರಕ್ಕೆ ಮುಂದಾಗಿದ್ದ ಸಾರಿಗೆ ನೌಕರರು**

**ESMA ಜಾರಿ, ಪ್ರತಿಭಟನೆಗೆ 6 ತಿಂಗಳ ನಿಷೇಧ**

**ಆಗಸ್ಟ್ 5ರ ಮುಷ್ಕರಕ್ಕೆ ತಡೆ ನೀಡಿದ ಕಾರ್ಮಿಕ ಇಲಾಖೆ**




**ಸಾರಿಗೆ ನೌಕರರಿಗೆ ಶಾಕ್!**

• ಉದಯವಾಹಿನಿ, ಬೆಂಗಳೂರು

ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆಗೆ ಮುಂದಾಗಿದ್ದ ಸಾರಿಗೆ ನೌಕರರಿಗೆ ಎಸ್ಮಾ ಜಾರಿ ಮೂಲಕ ರಾಜ್ಯ ಸರ್ಕಾರ ಶಾಕ್ ನೀಡಿದೆ. ಕೆಎಸ್‌ಆರ್‌ಟಿಸಿ ಸಾರಿಗೆ ನೌಕರರು ಪ್ರತಿಭಟನೆ ನಡೆಸದಂತೆ ಎಸ್ಮಾ ಜಾರಿ ಮಾಡಲಾಗಿದ್ದು, ಮುಂದಿನ ಆರು ತಿಂಗಳು ಎಸ್ಮಾ ಜಾರಿ ಹಿನ್ನೆಲೆ ಯಾವುದೇ ರೀತಿಯ ಮುಷ್ಕರವನ್ನು ನಿಷೇಧಿಸಲಾಗಿದೆ. ಸಾರಿಗೆ ನೌಕರರಿಗೆ 38 ತಿಂಗಳಿನಿಂದ ಭತ್ಯೆ ಮತ್ತು ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ರಾಜ್ಯ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆ.5ರಂದು ಬೆಳಗ್ಗೆ 6 ಗಂಟೆಯಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದು, ಇದರಂತೆ ರಾಜ್ಯದ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಗಳ ನೌಕರರು ಮುಷ್ಕರಕ್ಕೆ ಮುಂದಾಗಿದ್ದರು. ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಮುಖಂಡ ಅನಂತ ಸುಬ್ಬರಾವ್ ನೇತೃತ್ವದಲ್ಲಿ ಮುಷ್ಕರ ನಡೆಸಲು ಮುಂದೂಡಲಾಗಿತ್ತು.ಈ ಬಗ್ಗೆ ಸುಬ್ಬರಾವ್ ಅವರು, ಸಾರಿಗೆ ಮುಷ್ಕರದ ಬಗ್ಗೆ ಸಿಎಂ ಸಿದ್ದರಾಮಯ್ಯಗೆ ಇ-ಮೇಲ್ ಮೂಲಕ ಮುಷ್ಕರದ ನೋಟಿಸ್ ಕಳಿಸಿದ್ದೇವೆ ಎಂದು ತಿಳಿಸಿದ್ದರು.

ಎಸ್ಮಾ ಎಂದರೆ, ಅಗತ್ಯ ಸೇವೆ ನಿರ್ವಹಣೆ ಕಾಯ್ದೆ ಎಂದರ್ಥ ಸರ್ಕಾರಿ ನೌಕರನನ್ನು ನಿಯಂತ್ರಣ ಮಾಡುವ ಕಾಯ್ದೆ 1968ರಿಂದ ಜಾಲ್ತಿಯಲ್ಲಿದ್ದು, ಕರ್ನಾಟಕದಲ್ಲಿ ಎಸ್ಮಾ ಕುರಿತು 1994ರಲ್ಲಿ ಕಾನೂನಿನ ಮೊದಲ ರೂಪುರೇಷೆ ತಯಾರಾಯಿತು. 2013ರ ಜೂನ್‌ನಿಂದ ರಾಜ್ಯದಲ್ಲಿ ಕಾನೂನಾಗಿ ಮಾರ್ಪಾಡಾಯಿತು. ನಂತರ 2015ರಲ್ಲಿ ಸರ್ಕಾರ ಕೆಲ ತಿದ್ದುಪಡಿ ಮಾಡಿದೆ. ಸರ್ಕಾರಿ ನೌಕರರು ಸಾಮೂಹಿಕ ಪ್ರತಿಭಟನೆ ನಡೆಸಿ ಪರಿಸ್ಥಿತಿ ನಿಯಂತ್ರಣ ತಪ್ಪುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದರೆ ಎಸ್ಮಾ ಜಾರಿ ಮಾಡಲು ಮುಂದಾಗುತ್ತದೆ. ಮೂಲ ಸೌಕರ್ಯಗಳಾದ ಆಹಾರ, ಭದ್ರತೆ, ಶಿಕ್ಷಣ, ಆರೋಗ್ಯ, ಪೊಲೀಸ್ ವ್ಯವಸ್ಥೆಗೆ ಮುಖಭಂಗ ಬರುವ ಹಂತಕ್ಕೆ ಪ್ರತಿಭಟನೆಗಳು ಬಂದಾಗ ರಾಜ್ಯ ಸರ್ಕಾರ ಎಸ್ಮಾ ಜಾರಿ ಮಾಡುವ ಅಧಿಕಾರವಿದೆ. ಎಸ್ಮಾ ಎಂದರೆ ಕಡ್ಡಾಯ ಕೆಲಸ. ಸಂವಿಧಾನದಲ್ಲಿ ತಿಳಿಸಿರುವಂತೆ, 7ರಲ್ಲಿನ 2ನೇ ಪಟ್ಟಿಯಲ್ಲಿರುವ 'ಸಾರ್ವಜನಿಕ ಸುವ್ಯವಸ್ಥೆ' ಮತ್ತು 'ಪೊಲೀಸ್' ಸಂಬಂಧಿಸಿದ ಎಲ್ಲಾ ಸೇವೆಗಳ ಕುರಿತು ರಾಜ್ಯ ಶಾಸಕಾಂಗವು ಕಾನೂನು ರೂಪಿಸುವ ಅಧಿಕಾರ ಹೊಂದಿರುತ್ತದೆ. ಎಸ್ಮಾ ಕಾಯ್ದೆ ಉಲ್ಲಂಘನೆ ಮಾಡಿದರೆ ವಾರಂಟ್ ಇಲ್ಲದೇ ಬಂಧನ ಮಾಡಬಹುದು. ಅಲ್ಲದೆ 6 ತಿಂಗಳು ಜೈಲು ವಾಸ ಶಿಕ್ಷೆ ನೀಡುವ ಸಾಧ್ಯತೆಯೂ ಇರುತ್ತದೆ ಎಂಬ ಉಲ್ಲೇಖವಿದೆ. ಎಸ್ಮಾ ಜಾರಿಯಲ್ಲಿದ್ದ ಮೇಲೆ ಅದನ್ನು ಧಿಕ್ಕರಿಸಿ ಉದ್ಯೋಗಿ ಪ್ರತಿಭಟನೆಯಲ್ಲಿ ಪಾಲ್ಗೊಂಡರೆ ಆತನ ವೇತನ, ಭತ್ಯೆ, ಬಡ್ತಿ ಮತ್ತು ಇತರ ಸವಲತ್ತುಗಳ ಮೇಲೆ ಪರಿಣಾಮ ಉಂಟಾಗುತ್ತದೆ. ಈ ಕಾರಣಕ್ಕೆ ರಾಜ್ಯ ಸರ್ಕಾರಗಳು ಉದ್ಯೋಗಿಗಳು ಹಠ ಮುಂದುವರಿಸಿದರೆ ಕೊನೆಯ ಅಸ್ತ್ರವಾಗಿ ಎಸ್ಮಾ ಜಾರಿಗೊಳಿಸುತ್ತದೆ.



### ನೌಕರರ ಬೇಡಿಕೆಗಳೇನು...:

- ಕೆಎಸ್‌ಆರ್‌ಟಿಸಿ ಮತ್ತು ಇತರ ಸಾರಿಗೆ ನಿಗಮಗಳ ನೌಕರರು ಹಲವು ವರ್ಷಗಳಿಂದ ತಮ್ಮ ಬೇಡಿಕೆಗಳಿಗಾಗಿ ಸರ್ಕಾರದ ಮೊರೆ ಹೋಗಿದ್ದಾರೆ.
- ಕಳೆದ 38 ತಿಂಗಳಿಂದ ಬಾಕಿಯಿರುವ ವೇತನವನ್ನು ತಕ್ಷಣ ಬಿಡುಗಡೆ ಮಾಡಬೇಕು.
- ವೇತನ ಪರಿಷ್ಕರಣೆ: ಸರ್ಕಾರಿ ನೌಕರರ ವೇತನಕ್ಕೆ ಸಮಾನವಾದ ವೇತನ ಪರಿಷ್ಕರಣೆ.
- ಕ್ಯಾಂಟೀನ್ ವ್ಯವಸ್ಥೆ: ಕೆಲಸದ ಸ್ಥಳದಲ್ಲಿ ಕ್ಯಾಂಟೀನ್ ಸೌಲಭ್ಯ ಕಲ್ಪಿಸಬೇಕು.
- ಆರೋಗ್ಯ ಸೇವೆ: ನಗದು ರಹಿತ ಆರೋಗ್ಯ ಸೇವೆ ಒದಗಿಸಬೇಕು.
- ರಜೆಗಳ ಹಕ್ಕು: ನೌಕರರಿಗೆ ರಜೆಗಳ ಹಕ್ಕನ್ನು ಖಾತರಿಪಡಿಸಬೇಕು.

1 ಆ.5ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ!

2 ಜೂನ್ 4 ರಂದು ಸಿಎಂ ಜೊತೆ ನೌಕರ ಮುಖಂಡರ ಸಭೆ


3 ಆಗಸ್ಟ್ 4 ರವರೆಗೆ ಸರ್ಕಾರಕ್ಕೆ ಡೆಡ್ ಲೈನ್

4 ನೌಕರರಿಗೆ ಮುಷ್ಕರ ನಡೆಸದಂತೆ 'ಎಸ್ಮಾ' ಕಾಯ್ದೆ ಜಾರಿ

5 ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ

### ಕಾನೂನುಬಾಹಿರ ಮುಷ್ಕರ

ಒಂದು ವೇಳೆ ನೌಕರರು ಅಥವಾ ಸಂಘಟನೆ ಕಾನೂನುಬಾಹಿರ ಮುಷ್ಕರ ನಡೆಸಿದರೆ 1 ವರ್ಷ ಶಿಕ್ಷೆ ಹಾಗೂ 5 ಸಾವಿರ ರೂ ದಂಡ ವಿಧಿಸುವ ಅವಕಾಶವಿರುತ್ತದೆ. ಅಷ್ಟೇ ಅಲ್ಲದೆ ಇಂತಹ ಕಾನೂನುಬಾಹಿರ ಮುಷ್ಕರಕ್ಕೆ ಪ್ರೇರಣೆ ಅಥವಾ ಪ್ರಚೋದನೆ ನೀಡುವುದು ಕೂಡ ಅಪರಾಧ ಆಗಿದ್ದು, ಸೆಕ್ಷನ್ 5ರ ಪ್ರಕಾರ 1 ವರ್ಷ ಶಿಕ್ಷೆ ಮತ್ತು 5 ಸಾವಿರ ರೂ. ದಂಡ ವಿಧಿಸಬಹುದಾಗಿದೆ.




### ಮುಷ್ಕರ ಮಾಡುವಂತಿಲ್ಲ ಎಂಬುದು ತಪ್ಪು

ಸಾರಿಗೆ ನೌಕರರು ಮುಷ್ಕರ ಮಾಡುವಂತಿಲ್ಲ ಎಂಬುದು ಒಂದು ಸಾಮಾನ್ಯ ತಪ್ಪು ಕಲ್ಪನೆ. ಸಾರಿಗೆ ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಷ್ಕರ ಹೂಡಲು ಹಕ್ಕನ್ನು ಹೊಂದಿದ್ದಾರೆ. ಆದರೆ, ಕೆಲವು ಸಂದರ್ಭಗಳಲ್ಲಿ, ಸಾರಿಗೆಯಂತಹ ಅತ್ಯಗತ್ಯ ಸೇವೆಗಳಲ್ಲಿ ಮುಷ್ಕರವನ್ನು ನಿಷೇಧಿಸಲು ಸರ್ಕಾರ ನಿರ್ದಿಷ್ಟ ಕಾನೂನುಗಳನ್ನು ಜಾರಿಗೊಳಿಸಬಹುದು.ಆದರೆ, ಎಸ್ಮಾ ಜಾರಿ ಮಾಡುವುದಕ್ಕೆ ಸೂಕ್ತ ಕಾರಣಗಳನ್ನು ಕೂಡ ಕೊಡಬೇಕು. ಜತೆಗೆ ನೌಕರರ ಮೂಲಭೂತ ಹಕ್ಕುಗಳಲ್ಲಿ ಒಂದಾದ ವೇತನ ಹೆಚ್ಚಳವನ್ನು ಕಾಲಕಾಲಕ್ಕೆ ಮಾಡುತ್ತಿರಬೇಕು. ಅದನ್ನು ನಿರ್ಲಕ್ಷ್ಯ ಮಾಡುವಂತಿಲ್ಲ. ಒಂದು ವೇಳೆ ನಿರ್ಲಕ್ಷ್ಯ ಮಾಡಿದರೆ ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಷ್ಕರ ಮಾಡುವ ಹಕ್ಕನ್ನು ಹೊಂದಿದ್ದಾರೆ. ಸರ್ಕಾರ ನೌಕರರನ್ನು ಹೆದುರಿಸುವ ನಿಟ್ಟಿನಲ್ಲಿ ಎಸ್ಮಾ ಜಾರಿ ಮಾಡಿದರೆ ಅದಕ್ಕೆ ಭಯ ಬೀಳುವ ಅಗತ್ಯಲ್ಲ. ನೌಕರರು ಮುಷ್ಕರ ಮಾಡುವುದಕ್ಕೂ 15 ದಿನಗಳು ಮುಂಚಿತವಾಗಿ ತಮ್ಮ ಬೇಡಿಕೆಗಳ ಈಡೇರಿಸಿಕೊಳ್ಳುವುದಕ್ಕೆ ನಾವು ಈ ದಿನಾಂಕದಿಂದ ಹೋರಾಟ ಮಾಡುತ್ತಿದ್ದೇವೆ.

## ಯಡಿಯೂರಪ್ಪ, ಕುಮಾರಸ್ವಾಮಿಯ 29 ಡಿನೋಟಿಫಿಕೇಶನ್ ರದ್ದು

• ಉದಯವಾಹಿನಿ, ಬೆಂಗಳೂರು

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಮತ್ತು ಹೆಚ್.ಡಿ. ಕುಮಾರಸ್ವಾಮಿ ಅವರ ಸರ್ಕಾರದ ಅವಧಿಯಲ್ಲಿ ನಡೆದಿದ್ದ ಒಟ್ಟು 29 ಪ್ರಕರಣಗಳಲ್ಲಿ ಬಿಡಿಎ ಡಿನೋಟಿಫಿಕೇಶನ್‌ಗಳನ್ನು ರದ್ದು ಮಾಡುವ ಬಗ್ಗೆ ರಾಜ್ಯ ಸಚಿವ ಸಂಪುಟ ಸಭೆ ಮಹತ್ವದ ತೀರ್ಮಾನ ಕೈಗೊಂಡಿದೆ. ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ತೀರ್ಮಾನದ ಬಗ್ಗೆ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಸಚಿವ ಹೆಚ್.ಕೆ. ಪಾಟೀಲ್, ಈ ಪ್ರಕರಣಗಳಲ್ಲಿ ನಿಯಮಬಾಹಿರವಾಗಿ ಮಾಡಿರುವ ಭೂಸ್ವಾಧೀನದಿಂದ ಕೈಬಿಡಲು ಕಾರಣವಾಗಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆಯೂ ಸಂಪುಟ ಸಭೆ ನಿರ್ಣಯ



ಕೈಗೊಂಡಿದೆ ಎಂದು ತಿಳಿಸಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ವಶ ಪಡಿಸಿಕೊಂಡು ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆ ಹೊರಡಿಸಿದ ಜಮೀನುಗಳನ್ನು ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಲು ಕಾನೂನಿನಲ್ಲಿ ಅವಕಾಶವಿಲ್ಲ. ಆದರೂ ಒಟ್ಟು 29 ಪ್ರಕರಣಗಳಲ್ಲಿ ಭೂಸ್ವಾಧೀನ ಕೈ ಬಿಡಲಾಗಿದೆ. ಈ ಪ್ರಕರಣಗಳಲ್ಲಿ ಎಲ್ಲಾ ಸಂಬಂಧಿಸಿದ ಬಾಧಿತ ವ್ಯಕ್ತಿಗಳಿಗೆ ನೋಟಿಸ್ ನೀಡಿ ವಿವರಣೆ ಪಡೆದುಕೊಂಡು ನಿಯಮಬಾಹಿರವಾಗಿ ಡಿನೋಟಿಫೈ ಮಾಡಿರುವ ಅಧಿಸೂಚನೆಗಳನ್ನು ಹಿಂಪಡೆಯಲು ಸಂಪುಟ ಸಭೆ ನಿರ್ಧರಿಸಿದೆ ಎಂದು ಹೇಳಿದ್ದಾರೆ. 2007 ರಿಂದ 2010ರ ಅವಧಿಯಲ್ಲಿ ನಡೆದ ಈ ಡಿನೋಟಿಫಿಕೇಶನ್ ಪ್ರಕರಣಗಳಲ್ಲಿ ಸುಮಾರು 50 ಎಕರೆಗೂ ಹೆಚ್ಚು ಭೂಮಿಯನ್ನು ಬಿಡಿಎ ಸ್ವಾಧೀನದಿಂದ ಕೈ ಬಿಡಲಾಗಿದೆ. ಈ ಕಾನೂನು ಉಲ್ಲಂಘನೆಗಾಗಿ ಸಂಬಂಧಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧವೂ ಶಿಸ್ತು ಕ್ರಮ ಜರುಗಿಸಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

**ಅಧಿಕಾರಿಗಳ ವಿರುದ್ಧವೂ ಶಿಸ್ತು ಕ್ರಮ**

## ರಾಜ್ಯದಲ್ಲಿ 1 ವಾರ ಭಾರಿ ಮಳೆ

### ರೆಡ್, ಆರೆಂಜ್, ಯೆಲ್ಲೋ ಅಲರ್ಟ್ ಘೋಷಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ 1 ವಾರ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದ್ದು, ಕೆಲವು ಜಿಲ್ಲೆಗಳಿಗೆ ರೆಡ್, ಆರೆಂಜ್ ಅಲರ್ಟ್ ಘೋಷಣೆ ಮಾಡಲಾಗಿದೆ. ಹೌದು. 1 ಜಿಲ್ಲೆಗೆ ರೆಡ್ ಅಲರ್ಟ್ ಹಾಗೂ 7 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಣೆ ಮಾಡಲಾಗಿದೆ.

ಕೊಡಗು ಜಿಲ್ಲೆಗೆ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದ್ದು, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಮೈಸೂರು ಜಿಲ್ಲೆಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ,



ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಬೆಳಗಾವಿ ಜಿಲ್ಲೆಗಳಿಗೆ ಇದೀಗ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಅದೇ ರೀತಿ, ಮೈಸೂರು, ಮಂಡ್ಯ, ಶಿವಮೊಗ್ಗ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಚಾಮರಾಜನಗರ ಜಿಲ್ಲೆಗಳಿಗೂ ಸಹ ಯೆಲ್ಲೋ ಅಲರ್ಟ್ ನೀಡಲಾಗಿದೆ.

# ಏನಿದು ಧರ್ಮಸ್ಥಳ ಕೇಸ್ ಶನಿವಾರ ಎಲ್ಲಾ ಗೊತ್ತಾಗಲಿದೆ ಎಂದ ಸಿಎಂ

**● ಧರ್ಮಸ್ಥಳ ಗ್ರಾಮದಲ್ಲಿ ಸರಣಿ ಹತ್ಯೆ, ಅತ್ಯಾಚಾರ ಪ್ರಕರಣಗಳು ನಿಗೂಢ ಸಾಕ್ಷಿ ದೂರುದಾರನಿಂದ ದೂರು**

• ಉದಯವಾಹಿನಿ, ಬೆಂಗಳೂರು

ಧರ್ಮಸ್ಥಳ ಹೆಸರು ಮತ್ತೆ ಸುದ್ದಿಯಲ್ಲಿದೆ. ಈ ಬಾರಿ ಇಡೀ ದೇಶದಲ್ಲೆಡೆ ಭಾರೀ ಸದ್ದು ಮಾಡ್ತಿದೆ. ಯೂಟ್ಯೂಬ್, ಇಂಟರ್ನೆಟ್ ತುಂಬಾ ಅದೇ ಸುದ್ದಿ.

ಅದಕ್ಕೆ ಕಾರಣ ಓರ್ವ ನಿಗೂಢ ಸಾಕ್ಷಿ ದೂರುದಾರ. ಆತ ನೀಡಿದ ದೂರಿನಿಂದ ಶುರುವಾದ ಈ ಸದ್ದು, ಎಸ್‌ಐಟಿ ತನಿಖೆಗೆ ಬೇಡಿಕೆಯಿಂದ ಹಿಡಿದು, ಸುಪ್ರೀಂ ಕೋರ್ಟ್ ಕದ ತಟ್ಟಲಾರಂಭಿಸಿದೆ.

**ಎಸ್‌ಐಟಿ ತನಿಖೆಗೆ ಹೆಚ್ಚಿದ ಆಗ್ರಹ**

ಒಂದೆಡೆ ಈ ಬೆಳವಣಿಗೆಗಳು ನಡೆಯುತ್ತಿದ್ದರೆ, ಜುಲೈ 16ರಂದೇ ಸಂಜೆ ಧರ್ಮಸ್ಥಳ ಪ್ರಕರಣದ ಕುರಿತಂತೆ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ತನಿಖೆ ನಡೆಸುವಂತೆ ಹಿರಿಯ ನ್ಯಾಯವಾದಿಗಳಾದ ಬಾಲನ್ ಹಾಗೂ ಸಿಎಸ್ ದ್ವಾರಕಾನಾಥ್ ನೇತೃತ್ವದಲ್ಲಿ ವಕೀಲರ ನಿಯೋಗ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿತ್ತು.

ಈ ಪ್ರಕರಣದ ಬಗ್ಗೆ ಸಮಗ್ರ ತನಿಖೆ ಆಗಬೇಕು. ಅತ್ಯಾಚಾರ ಮತ್ತು ಕೊಲೆಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ತನಿಖೆ ಪ್ರಕ್ರಿಯೆ ಅತ್ಯಂತ ಪಾರದರ್ಶಕವಾಗಿ ನಡೆಯಬೇಕು ಎಂದು ಆಗ್ರಹಿಸಿದ್ದಲ್ಲದೆ, ವಿಚಾರಣೆ ಪ್ರಕ್ರಿಯೆಯನ್ನು ಸಂಪೂರ್ಣ ವಿಡಿಯೋ ದಾಖಲೆ ಮಾಡಬೇಕು ಎಂದು ಬೇಡಿಕೆ ಸಲ್ಲಿಸಿತ್ತು.

ಬಳಿಕ ಜುಲೈ 17ರಂದು ಪತ್ರಿಕಾಗೋಷ್ಠಿ ನಡೆಸಿದ್ದ ಇವರುಗಳು, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ ಗೋಪಾಲ್ ಗೌಡ ಅವರು ಗಂಭೀರ ಆರೋಪಗಳನ್ನು ಮಾಡಿದ್ದರು.

ಅನಾಮಧೇಯ ವ್ಯಕ್ತಿಯೊಬ್ಬ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಪ್ರಕರಣದ ಪ್ರಮುಖ ಸಾಕ್ಷಿಯಾಗಿ ತನ್ನ ಹೇಳಿಕೆ ದಾಖಲಿಸಿದ ನಂತರವೂ ತನಿಖೆ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ದೂರಿದ್ದ ಅವರು, ಮೃತದೇಹಗಳನ್ನು ಎಲ್ಲಿ ಹೂಳಲಾಗಿದೆ ಎಂಬುದನ್ನು ಖಾಲಿ ಕಾಗದದ ಮೇಲೆ ಗುರುತು ಮಾಡಿಕೊಡುವಂತೆ ದೂರುದಾರನ ಮೇಲೆ ಪೊಲೀಸರು ಒತ್ತಡ ಹೇರುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದರು.

ಆತನ ಹೇಳಿಕೆಯನ್ನು ಸೋರಿಕೆ ಮಾಡುತ್ತಿದ್ದಾರೆ ಎಂಬ ಆರೋಪವೂ ಕೇಳಿಬರುತ್ತಿವೆ. ಕೂಡಲೇ ಸರಕಾರ ಮಧ್ಯಪ್ರವೇಶಿಸಿ ಇದನ್ನು ತಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಇನ್ನೊಂದೆಡೆ ಸುಪ್ರೀಂ ಕೋರ್ಟ್



### ಒಂದು ಲಕ್ಷ ಸಹಿ ಸಂಗ್ರಹ ಅಭಿಯಾನ

**ಸೌಜನ್ಯ ಹತ್ಯೆ ಮತ್ತು ಧರ್ಮಸ್ಥಳದಲ್ಲಿ ದಶಕಗಳಿಂದ ಆದ ನಿಗೂಢ ಸಾವುಗಳ ಬಗ್ಗೆ, 'ಸುಪ್ರೀಂಕೋರ್ಟಿನ ಹಾಲಿ/ ನಿವೃತ್ತ ನ್ಯಾಯಾಧೀಶರ ಉಸ್ತುವಾರಿಯಲ್ಲಿ ಎಸ್‌ಐಟಿ ತನಿಖೆ ಆಗಬೇಕು. ಕೋರ್ಟ್ ಈಗಾಗಲೇ ನೀಡಿರುವ ಆದೇಶದಂತೆ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ಆಗಬೇಕು' ಎಂದು ಆಗ್ರಹಿಸಿ 1 ಲಕ್ಷ ಸಹಿ ಸಂಗ್ರಹ ಅಭಿಯಾನ ಆರಂಭಗೊಂಡಿದೆ. ಈ ಸಂಬಂಧ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳನ್ನು ಈ ಕುರಿತು ಒತ್ತಾಯಿಸುವ change.orgನಲ್ಲಿನ ಅಭಿಯಾನ ಸಹಿ ಹಾಕಲು ಬಹುಭಾಷಾ ನಟ ಪ್ರಕಾಶ್ ರೈ, ಸಾಹಿತಿಗಳಾದ ದೇವನೂರು ಮಹಾದೇವ, ಬಾನು ಮುಷ್ತಾಕ್ ಮೊದಲಾದವರು ಆಗ್ರಹಿಸಿದ್ದಾರೆ.**

ವಕೀಲ ಕೆ.ವಿ. ಧನಂಜಯ್ ಅವರು, ಕೇರಳ ಸರ್ಕಾರಕ್ಕೂ ಪತ್ರ ಬರೆದಿದ್ದಾರೆ. ಧರ್ಮಸ್ಥಳದಲ್ಲಿ ಮೃತಪಟ್ಟವರು, ಹೂತುಹಾಕಲ್ಪಟ್ಟವರ ಪೈಕಿ ಕೇರಳದವರು ಇರಬಹುದು. ಹಾಗಾಗಿ ಈ ತನಿಖೆಯಲ್ಲಿ ಕೇರಳ ಸರಕಾರವು ಭಾಗಿಯಾಗಬೇಕು ಎಂದಿದ್ದ ಅವರು,ಕೇರಳ ಪೊಲೀಸರಿಗೆ ಈಗ ನಡೆಯುತ್ತಿರುವ ತನಿಖೆಯಲ್ಲಿ ನೆರವಾಗಲು ಅವಕಾಶ ನೀಡಬೇಕು. ಕೇರಳ ಸರ್ಕಾರವು ಸುಪ್ರೀಂ ಕೋರ್ಟ್ ಅನ್ನು ಸಂಪರ್ಕಿಸಬೇಕು ಎಂದು ಒತ್ತಾಯಿಸಿದ್ದರು.

**ಸೂಕ್ತ ರಕ್ಷಣೆ ಕೋರಿ ಸುಪ್ರೀಂ ಕೋರ್ಟ್‌ಗೆ ಮನವಿ:** ಈ ಎಲ್ಲಾ ಬೆಳವಣಿಗೆಗಳ ನಡುವೆ ತನ್ನ ಸುರಕ್ಷತೆಗಾಗಿ ಮನವಿ ಮಾಡಿ, ತನಿಖಾಧಿಕಾರಿಗೆ ನೀಡಿದ ಹೇಳಿಕೆಯನ್ನು ಪೊಲೀಸರು ಸೋರಿಕೆ ಮಾಡಿದ್ದಾರೆ ಎಂದು ಆರೋಪಿಸಿ ಸಾಕ್ಷಿ ದೂರುದಾರರು ಭಾರತದ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರ ಬರೆದಿದ್ದಾರೆ. ಹೇಳಿಕೆ ಸೋರಿಕೆ ಬಗ್ಗೆ ತಕ್ಷಣ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಮನವಿ ಮಾಡಿದ್ದಾರೆ.

**ಶನಿವಾರದೊಳಗೆ ಎಲ್ಲಾ ಗೊತ್ತಾಗಲಿದೆ:** ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಸರಣಿ ಕೊಲೆ ಪ್ರಕರಣಗಳ ಆರೋಪ ಸಂಬಂಧ ಎಸ್‌ಐಟಿ ರಚಿಸುವಂತೆ ಯಾರೇ ಒತ್ತಡ ಹಾಕಿದರೂ, ಯಾರ ಮಾತುಗಳನ್ನೂ ನಾವು ಕೇಳುವುದಿಲ್ಲ. ಎಲ್ಲವನ್ನೂ ಕಾನೂನು ಪ್ರಕಾರವೇ ಮಾಡುತ್ತೇವೆ ಎಂದು ಸಿಎಂ ಸಿದ್ದರಾಮಯ್ಯ ಶುಕ್ರವಾರ ಸ್ಪಷ್ಟಪಡಿಸಿದ್ದು, 'ತನಿಖೆಗೆ ಎಸ್‌ಐಟಿ ರಚಿಸುವಂತೆ ಪೊಲೀಸ್ ಇಲಾಖೆಯವರು ಹೇಳಿದರೆ ಮಾಡುತ್ತೇವೆ' ಎಂದಿದ್ದಾರೆ.

ಮುಂದುವರಿದು, ಪೊಲೀಸ್ ಇಲಾಖೆಯವರು ತನಿಖೆ ನಡೆಸುತ್ತಿದ್ದು, ವರದಿ ಸಲ್ಲಿಸಲಿದ್ದಾರೆ. ಅವರು ನೀಡುವ ವರದಿ ಮೇಲೆ ಎಸ್ ಐಟಿ ಮಾಡಬೇಕೆಂಬ ಶಿಫಾರಸು ಬಂದರೆ ರಚಿಸುತ್ತೇವೆ. ಎಲ್ಲವೂ ಶನಿವಾರದೊಳಗೆ ಗೊತ್ತಾಗಲಿದೆ ಎಂದು ಹೇಳಿದ್ದಾರೆ. ಈ ಮೂಲಕ ಶನಿವಾರದ ಕುತೂಹಲವನ್ನು ಉಳಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,938/Gram24ct ₹9,110/Gram22ct ಬೆಳ್ಳಿ: ₹113.90/Gram


# ಬೆಂಗಳೂರಿನ ಸುಮಾರು 50 ಶಾಲೆಗಳಿಗೆ ಬಾಂಬ್ ಬೆದರಿಕೆ ಇಮೇಲ್!

• ಉದಯವಾಹಿನಿ, ಬೆಂಗಳೂರು

ಶುಕ್ರವಾರ ಬೆಳಿಗ್ಗೆ ಬೆಂಗಳೂರಿನ ಸುಮಾರು 50 ಶಾಲೆಗಳಿಗೆ ಬಾಂಬ್ ಬೆದರಿಕೆ ಇಮೇಲ್‌ಗಳು ಬಂದಿದ್ದು, ಅದು ಹುಸಿ ಬಾಂಬ್ ಇಮೇಲ್ ಎಂದು ಪೊಲೀಸರು ತಿಳಿಸಿದ್ದಾರೆ. 'ಶಾಲೆಯೊಳಗೆ ಬಾಂಬ್‌ಗಳು' ಎಂಬ ಶೀರ್ಷಿಕೆಯ ಒಂದೇ ರೀತಿಯ ಇಮೇಲ್ ಅನ್ನು ಬೆಳಿಗ್ಗೆ 7.24ಕ್ಕೆ ವಿವಿಧ ಶಾಲೆಗಳ ಸುಮಾರು 50 ಇಮೇಲ್ ಐಡಿಗಳಿಗೆ ಕಳುಹಿಸಲಾಗಿದೆ. ಸಂದೇಶವನ್ನು roadkill333@atomicmail.io ಎಂಬ ಬಳಕೆದಾರರು ಕಳುಹಿಸಿದ್ದಾರೆ ಎಂದು ಅವರು ಹೇಳಿದರು. '

ನಮಸ್ಕಾರ ನಾನು ಶಾಲಾ ತರಗತಿಗಳಲ್ಲಿ ಹಲವಾರು ಸ್ಫೋಟಕ ಸಾಧನಗಳನ್ನು (ಟ್ರಿನಿಟ್ರೋಟೊಲುಯೆನ್) ಇರಿಸಿದ್ದೇನೆ ಎಂದು ನಿಮಗೆ ತಿಳಿಸಲು ನಾನು ಬರೆಯುತ್ತಿದ್ದೇನೆ. ಸ್ಫೋಟಕಗಳನ್ನು ಕಪ್ಪು ಪ್ಲಾಸ್ಟಿಕ್ ಚೀಲಗಳಲ್ಲಿ ಕೌಶಲ್ಯದಿಂದ ಮರೆಮಾಡಲಾಗಿದೆ' ಎಂದು ಹೇಳಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಹಲವಾರು ಶಾಲಾ ಆಡಳಿತ ಮಂಡಳಿ ಅಧಿಕಾರಿಗಳು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದು, ಬಾಂಬ್ ನಿಷ್ಕ್ರಿಯ ದಳ ಮತ್ತು ವಿಧ್ವಂಸಕ ಕೃತ್ಯ ತಡೆ ತಂಡಗಳೊಂದಿಗೆ ಸಂಬಂಧಪಟ್ಟ ಶಾಲೆಗಳನ್ನು ತಲುಪಿದರು. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯನ್ನು ತಕ್ಷಣವೇ ಶಾಲಾ ಆವರಣದಿಂದ ಸ್ಥಳಾಂತರಿಸಲಾಯಿತು ಎಂದು ಅವರು ಹೇಳಿದರು. ಪರಿಶೀಲನೆ ನಡೆಸಲಾಗಿದ್ದು, ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಿಗ್ಗೆ ಕೇಂದ್ರ ವಿಭಾಗದ (ಬೆಂಗಳೂರು ಪೊಲೀಸ್) ವ್ಯಾಪ್ತಿಯಲ್ಲಿ ಕನಿಷ್ಠ ನಾಲ್ಕು ಶಾಲೆಗಳಿಗೆ ಬಾಂಬ್ ಬೆದರಿಕೆ ಇಮೇಲ್ ಬಂದಿದ್ದು, ಆತಂಕ ಮೂಡಿಸಿದೆ. ಶಿಷ್ಟಾಚಾರದ ಪ್ರಕಾರ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅನುಮಾನಾಸ್ಪದವಾಗಿ ಯಾವುದೇ ವಸ್ತು ಕಂಡುಬಂದಿಲ್ಲ ಮತ್ತು ಅದು ಹುಸಿ ಇಮೇಲ್ ಎಂದು ತಿಳಿದುಬಂದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದಲ್ಲದೆ, ಕೇಂದ್ರ ವಿಭಾಗದ ಪ್ರಕಾರ, ಬೆಂಗಳೂರು ನಗರ ಪೊಲೀಸರ ಇತರ ಪೊಲೀಸ್ ವಿಭಾಗಗಳಲ್ಲಿರುವ ಶಾಲೆಗಳಿಗೂ ಹುಸಿ ಬಾಂಬ್ ಬೆದರಿಕೆ ಇಮೇಲ್‌ಗಳು ಬಂದಿವೆ. ಆದರೆ, ನಿಖರವಾದ


ಉದಯವಾಹಿನಿ ಚಿತ್ರ

ಶಾಲೆಗಳ ಸಂಖ್ಯೆಯನ್ನು ಪೊಲೀಸರು ಇನ್ನೂ ದೃಢಪಡಿಸಿಲ್ಲ. ಸಿದ್ದರಾಮಯ್ಯ ಅವರು ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ, 'ಶಾಲೆಗಳಿಗೆ ಬಾಂಬ್ ಬೆದರಿಕೆ ಬಂದಿರುವ ಬಗ್ಗೆ ನನಗೆ ಮಾಹಿತಿ ಸಿಕ್ಕಿತು. ಅದು ಹುಸಿ ಬಾಂಬ್ ಬೆದರಿಕೆಯೇ ಎಂದು ಪರಿಶೀಲಿಸಲು ನಾನು ಅಧಿಕಾರಿಗಳಿಗೆ ಕೇಳಿದ್ದೇನೆ. ನಕಲಿ ಸುದ್ದಿ, ಸುಳ್ಳು ಮಾಹಿತಿ ನೀಡುವುದು, ಪ್ರಚೋದನೆ ಸೇರಿದಂತೆ ಇತರರ ವಿರುದ್ಧ ನಾವು ಕಾನೂನನ್ನು ತರುತ್ತಿದ್ದೇವೆ' ಎಂದು ಹೇಳಿದರು.

ಗೃಹ ಸಚಿವ ಜಿ ಪರಮೇಶ್ವರ ಮಾತನಾಡಿ, ಬೆಂಗಳೂರು ಮತ್ತು ರಾಜ್ಯದ ಇತರ ಭಾಗಗಳಲ್ಲಿ ಬಾಂಬ್ ಬೆದರಿಕೆ ಕರೆಗಳು ಮತ್ತು ಮೇಲ್‌ಗಳು ಮೊದಲೇ ಬಂದಿವೆ. ಈಗಲೂ ಅದೇ ರೀತಿಯಲ್ಲಿ ಬರುತ್ತಿವೆ. ಯಾವ ಶಾಲೆಗಳಿಗೆ ಕರೆಗಳು ಮತ್ತು ಇಮೇಲ್‌ಗಳು ಬಂದಿವೆ ಎಂಬುದನ್ನು ನಾವು ಪರಿಶೀಲಿಸುತ್ತೇವೆ. ನಾವು ಯಾವುದನ್ನೂ ಹಗುರವಾಗಿ ಪರಿಗಣಿಸುವುದಿಲ್ಲ, ಎಲ್ಲವನ್ನೂ ಪರಿಶೀಲಿಸುತ್ತೇವೆ' ಎಂದು ಅವರು ಹೇಳಿದರು. ಈಮಧ್ಯೆ, ಶುಕ್ರವಾರ ದೆಹಲಿಯ 20ಕ್ಕೂ ಹೆಚ್ಚು ಶಾಲೆಗಳಿಗೆ ಬಾಂಬ್ ಬೆದರಿಕೆ ಪತ್ರಗಳು ಬಂದಿದ್ದು, ವಿದ್ಯಾರ್ಥಿಗಳು ಮತ್ತು ಅವರ ಪೋಷಕರಲ್ಲಿ ಆತಂಕ ಮೂಡಿಸಿದೆ.

# ತಾಯಿ ಹಾಲು ವಂಚಿತ ಮಕ್ಕಳಿಗೆ ಆಸರೆ

## ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಎದೆಹಾಲು ಸಂಸ್ಕರಣಾ ಕೇಂದ್ರ, ಅಸ್ವಸ್ಥ ಶಿಶುಗಳಿಗೆ ಅಗತ್ಯಾನುಸಾರ ಹಾಲು ವಿತರಣೆ

• ಉದಯವಾಹಿನಿ, ಬೆಂಗಳೂರು

ಅಗತ್ಯ ಪ್ರಮಾಣದಲ್ಲಿ ಎದೆ ಹಾಲು ಸಿಗದ, ಅಸ್ವಸ್ಥಗೊಂಡ ರೋಗ ಪೀಡಿತ ಮಕ್ಕಳಿಗೆ ಇಲ್ಲಿನ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಆಸರೆ ಎದೆಹಾಲು ಸಂಸ್ಕರಣಾ ಕೇಂದ್ರ ನೆರವಾಗುತ್ತಿದ್ದು. ಈ ಕೇಂದ್ರದಲ್ಲಿ ಎದೆ ಹಾಲಿಗೆ ಭಾರಿ ಬೇಡಿಕೆ ಉಂಟಾಗಿದೆ. ಈ ಸ್ವಾಯತ್ತ ಸಂಸ್ಥೆಯು ಮಕ್ಕಳ ಚಿಕಿತ್ಸೆಗೆ ಹೆಸರಾಗಿದ್ದು, ರಾಜ್ಯದ ವಿವಿಧೆಡೆಯಿಂದ ಚಿಕಿತ್ಸೆಗೆ ಇಲ್ಲಿಗೆ ಬರುತ್ತಾರೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸಂಸ್ಥೆಯಲ್ಲಿ ಎದೆಹಾಲು ಸಂಸ್ಕರಣಾ ಕೇಂದ್ರವನ್ನು ನಿರ್ಮಿಸಲಾಗಿದೆ. ಚಿಕಿತ್ಸೆಗಾಗಿ ಮಕ್ಕಳನ್ನು ಕರೆತರುವ ತಾಯಂದಿರಿಂದಲೇ ಹೆಚ್ಚುವರಿ ಎದೆ ಹಾಲನ್ನು ದಾನವಾಗಿ ಪಡೆದು, ಸಂಸ್ಥೆಯಲ್ಲಿ ಅಗತ್ಯವಿರುವ ಮಕ್ಕಳಿಗೆ ವೈದ್ಯರ ಶಿಫಾರಸು ಅನುಸಾರ ಒದಗಿಸಲಾಗುತ್ತಿದೆ. ಈ ಕೇಂದ್ರ ಒಂದೂವರೆ ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದು, ಈವರೆಗೆ 54 ಲೀ. ಎದೆ ಹಾಲು ಸಂಗ್ರಹಿಸಿ, ವಿತರಿಸಲಾಗಿದೆ. ನೂರಕ್ಕೂ ಅಧಿಕ ಮಕ್ಕಳು ಈ ಕೇಂದ್ರದ ನೆರವಿನಿಂದ ನಿಯಮಿತವಾಗಿ ಎದೆಹಾಲು ಪಡೆದು, ಚೇತರಿಸಿಕೊಂಡಿದ್ದಾರೆ.

ಮಕ್ಕಳ ಚಿಕಿತ್ಸೆಗಾಗಿ ಸಂಸ್ಥೆಗೆ ಭೇಟಿ ನೀಡುವತಾಯಂದಿರಲ್ಲಿ ಪ್ರತಿನಿತ್ಯ ಸರಾಸರಿ 10ರಿಂದ 15 ತಾಯಂದಿರು ಈ ಕೇಂದ್ರಕ್ಕೆ ಭೇಟಿ ನೀಡುತ್ತಾರೆ. ಎದೆಹಾಲು ಪಂಪ್ ಮಾಡುವ ಐದು


ಉದಯವಾಹಿನಿ ಚಿತ್ರ

**ಎದೆ ಹಾಲು ಸಂಗ್ರಹ**

ಯಂತ್ರಗಳು ಇಲ್ಲಿದ್ದು, ಇದರ ಸಹಾಯದಿಂದ ಎದೆ ಹಾಲನ್ನು ಪಡೆಯಲಾಗುತ್ತದೆ. ಪ್ರತಿನಿತ್ಯ ಸರಾಸರಿ ನಾಲ್ಕರಿಂದ ಐದು ತಾಯಂದಿರು ಮಾತ್ರ ಹೆಚ್ಚುವರಿ ಎದೆ ಹಾಲನ್ನು ದಾನವಾಗಿ ನೀಡಿದರೆ, ಉಳಿದ ತಾಯಂದಿರು ಯಂತ್ರದ ಸಹಾಯದಿಂದ ಸಂಗ್ರಹಿಸಿದ ಹಾಲನ್ನು ತಮ್ಮ ಮಗುವಿಗೆ ಕೊಂಡೊಯ್ಯುತ್ತಿದ್ದಾರೆ.

**ತಾಯಂದಿರಿಗೆ ಸಮಾಲೋಚನೆ:** ಕೇಂದ್ರಕ್ಕೆ ಭೇಟಿ ನೀಡುವ ತಾಯಂದಿರಿಗೆ ಮೊದಲು ಸಮಾಲೋಚನೆ ನಡೆಸಲಾಗುತ್ತದೆ.

ಎದೆಹಾಲು ದಾನದ ಪ್ರಕ್ರಿಯೆ, ಮಹತ್ವ ಹಾಗೂ ವಿಧಾನದ ಬಗ್ಗೆ ತಿಳಿಸಿಕೊಡಲು ಟಿ.ವಿ. ಪರದೆಯಲ್ಲಿ ವಿಡಿಯೋಗಳನ್ನೂ ಪ್ರಸಾರ ಮಾಡಲಾಗುತ್ತದೆ. ಎದೆ ಹಾಲು ಸಂಗ್ರಹ, ಶೇಖರಣೆಗೆ ಪ್ರತ್ಯೇಕ ಕೊಠಡಿಗಳಿವೆ.

> ಎದೆ ಹಾಲು ದಾನದ ಬಗ್ಗೆ ಜಾಗೃತಿ ಕೊರತೆಯಿಂದ ಕೆಲ ತಾಯಂದಿರು ಹಿಂದೇಟು ಹಾಕುತ್ತಾರೆ. ಹೆಚ್ಚುವರಿ ಹಾಲನ್ನು ಮಾತ್ರ ದಾನವಾಗಿ ಪಡೆದು ಅಗತ್ಯವಿರುವ ಮಕ್ಕಳಿಗೆ ಒದಗಿಸಲಾಗುತ್ತದೆ
>
> ಡಾ. ಸಂಜಯ್ ಕೆ.ಎಸ್. ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

ಹಾಲನ್ನು ದಾನವಾಗಿ ಪಡೆದ ಬಳಿಕ ಅಗತ್ಯ ಪರೀಕ್ಷೆಗಳನ್ನೂ ನಡೆಸಿ, ಶೇಖರಿಸಿ ಇಡಲಾಗುತ್ತದೆ. ವೈದ್ಯರಿಂದ ಶಿಫಾರಸು ಪತ್ರ ತಂದವರಿಗೆ ಎದೆಹಾಲು ಒದಗಿಸಲಾಗುತ್ತದೆ. ಆಸ್ಪತ್ರೆಗೆ ಚಿಕಿತ್ಸೆಗೆ ಬರುವ ಬಹುತೇಕ ಮಕ್ಕಳು ಅಸ್ವಸ್ಥರಾಗಿರುವುದು, ವಿವಿಧ ರೋಗಗಳಿಂದ ಬಳಲುತ್ತಿರುವ ಕಾರಣ, ತಾಯಂದಿರಿಂದ ಅಧಿಕ ಹಾಲನ್ನು ದಾನವಾಗಿ ಪಡೆಯಲು ಸಾಧ್ಯವಾಗುತ್ತಿಲ್ಲ. ಬದಲಾಗಿ, ಪ್ರತಿನಿತ್ಯ ಹಾಲಿಗೆ ಸಲ್ಲಿಸುತ್ತಿರುವ ಬೇಡಿಕೆ ಪತ್ರ ಹೆಚ್ಚುತ್ತಿದೆ. ಸದ್ಯ 2 ಲೀ. ಹಾಲನ್ನು ಶೇಖರಿಸಿಟ್ಟುಕೊಳ್ಳಲಾಗಿದೆ.

ಎದೆ ಹಾಲಿನಿಂದ ವಂಚಿತರಾಗಿರುವ ಶಿಶುಗಳಿಗೆ ಈ ಕೇಂದ್ರದ ಮೂಲಕ ಎದೆ ಹಾಲು ಪೂರೈಸಲಾಗುತ್ತದೆ. ಎದೆ ಹಾಲನ್ನು ಪಡೆಯುವಾಗ ಅಗತ್ಯ ಪರೀಕ್ಷೆ ಮಾಡಲಾಗುತ್ತದೆ. ಆರೋಗ್ಯವಂತ ತಾಯಿಯಿಂದ ಮಾತ್ರ ಎದೆ ಹಾಲನ್ನು ಪಡೆಯಲಾಗುತ್ತದೆ' ಎಂದು ಕೇಂದ್ರದ ನಿರ್ವಾಹಕಿ ಡೈಸಿ ತಿಳಿಸಿದರು.

### 6 ತಿಂಗಳು ಶೇಖರಣೆ ಸಾಧ್ಯ

ಕೇಂದ್ರದಲ್ಲಿ ಸಂಗ್ರಹಿಸಿದ ಹಾಲನ್ನು ಪಾಶ್ಚರೀಕರಿಸಿದ ಬಳಿಕ ಪ್ಯಾಕ್ ಮಾಡಿ 120 ಡಿಗ್ರಿ ಸೆಲ್ಸಿಯಸ್‌ನಲ್ಲಿ ಸಂರಕ್ಷಿಸಿ ಇಡಲಾಗುತ್ತದೆ. ಮಗುವಿಗೆ ಕುಡಿಸುವಾಗ ಅದನ್ನು ಸಾಮಾನ್ಯ ಉಷ್ಣಾಂಶಕ್ಕೆ ತರಲಾಗುತ್ತದೆ. ಇದನ್ನು ಆರು ತಿಂಗಳವರೆಗೂ ಶೇಖರಿಸಿಡಲು ಸಾಧ್ಯ. ಕೇಂದ್ರಕ್ಕೆ ಭಾನುವಾರ ಮಾತ್ರ ರಜೆ ಇರಲಿದ್ದು ಉಳಿದ ದಿನಗಳಲ್ಲಿ ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಕಾರ್ಯನಿರ್ವಹಿಸಲಿದೆ' ಎಂದು ಕೇಂದ್ರದ ಶುಶ್ರೂಷಕರು ತಿಳಿಸಿದರು. ಅವಧಿ ಪೂರ್ವ ಜನಿಸಿದ ಶಿಶುಗಳು ಅಸ್ವಸ್ಥ ಶಿಶುಗಳು ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವ ಶಿಶುಗಳು ಎದೆ ಹಾಲು ಉತ್ಪಾದನೆ ಆಗದಿರುವ ತಾಯಂದಿರ ಶಿಶುಗಳಿಗೆ ಈ ಕೇಂದ್ರದಿಂದ ಎದೆ ಹಾಲನ್ನು ನೀಡಲಾಗುತ್ತಿದೆ' ಎಂದು ಹೇಳಿದರು.

# ರಸ್ತೆ ಬದಿ ಹೋಟೆಲ್‌ಗೆ ಬಿಎಂಟಿಸಿ ಬಸ್ ಡಿಕ್ಕಿ; ಓರ್ವ ಸಾವು, ನಾಲ್ವರಿಗೆ ಗಾಯ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ (ಬಿಎಂಟಿಸಿ) ಬಸ್ ರಸ್ತೆಬದಿಯ ಹೊಟೆಲ್‌ಗೆ ಡಿಕ್ಕಿ ಹೊಡೆದ ಪರಿಣಾಮ, ಒಬ್ಬ ವ್ಯಕ್ತಿ ಸಾವನ್ನಪ್ಪಿದ್ದು, ಇತರ ಐದು ಮಂದಿ ಗಾಯಗೊಂಡಿರುವ ಘಟನೆ ಬೆಂಗಳೂರಿನ ಪೀಣ್ಯದಲ್ಲಿ ನಡೆದಿದೆ.

ಅಪಘಾತಕ್ಕೆ ಕಾರಣವೇನೆಂದು ಪೊಲೀಸರು ಇನ್ನೂ ಖಚಿತ ಪಡಿಸಿಲ್ಲ. ಇತ್ತೀಚಿನ ದಿನಗಳಲ್ಲಿ ಬಿಎಂಟಿಸಿ ಬಸ್ ಅಪಘಾತಗಳು ಹೆಚ್ಚುಚ್ಚಿವೆ. ಜುಲೈ 2 ರಂದು ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ಬಳಿಯ ಜಿಗಣಿಯಲ್ಲಿ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದು ಶಾಲಾ ಬಾಲಕನೊಬ್ಬ ಗಂಭೀರವಾಗಿ ಗಾಯಗೊಂಡಿದ್ದ. ಮುಖ್ಯ ರಸ್ತೆಯಿಂದ ಮಕ್ಕಳನ್ನು ಕರೆದುಕೊಂಡು ಹೋಗಲು ಶಾಲಾ ಬಸ್ ನಿಂತಿದ್ದಾಗ ಈ ಘಟನೆ ಸಂಭವಿಸಿತ್ತು. ಇಂತಹ ದುರಂತ ಘಟನೆಗಳು ಮರುಕಳಿಸದಂತೆ ಬಿಎಂಟಿಸಿ ಮತ್ತು ಸಂಚಾರ ಇಲಾಖೆಯವರು ಎಚ್ಚರಿಕೆ ವಹಿಸಬೇಕಾಗಿದೆ.

# ಎಸ್ಮಾ ಜಾರಿ, 6 ತಿಂಗಳು ಪ್ರತಿಭಟನೆಗೆ ನಿಷೇಧ

• ಉದಯವಾಹಿನಿ, ಬೆಂಗಳೂರು

ಬಂದ್‌ಗೆ ಮುಂದಾಗಿದ್ದ ಸಾರಿಗೆ ಸಂಘಟನೆಗಳಿಗೆ ಶಾಕ್ ಎದುರಾಗಿದೆ. ಪ್ರತಿಭಟನೆ ನಿಷೇಧಿಸಿ ಕಾರ್ಮಿಕ ಇಲಾಖೆ ಎಸ್ಮಾ ಜಾರಿ ಮಾಡಿದೆ.

ಮುಷ್ಕರ ನಡೆಸದಂತೆ ನೌಕರರಿಗೆ ತಾಕೀತು ಮಾಡಲಾಗಿದೆ. ಆ.5 ರಂದು ಬಸ್ ನಿಲ್ಲಿಸಿ ಪ್ರತಿಭಟಿಸಲು ಸಾರಿಗೆ ಸಂಘಟನೆಗಳು ಮುಂದಾಗಿದ್ದವು. ಜನಸಾಮಾನ್ಯರಿಗೆ ಸಾರಿಗೆ ಸೇವೆ ಒದಗಿಸೋದು ಅಗತ್ಯ ಸೇವೆ. ಈ ಹಿನ್ನೆಲೆ ಕರ್ನಾಟಕ ಅಗತ್ಯ ಸೇವಾ ನಿರ್ವಹಣಾ ಕಾಯಿದೆ 2013 ರಡಿ ಎಸ್ಮಾ ಜಾರಿ ಮಾಡಲಾಗಿದೆ. ಇಂದಿನಿಂದ 6 ತಿಂಗಳು ನೌಕರರು ಯಾವುದೇ ಮುಷ್ಕರದಲ್ಲಿ ಭಾಗಿಯಾಗದಂತೆ ಎಸ್ಮಾ ಜಾರಿಗೊಳಿಸಲಾಗಿದೆ. ಜು.1 ರಿಂದ ಡಿ.31ರ ವರೆಗೆ ನಿಗಮದಲ್ಲಿ ಮುಷ್ಕರ ನಿರ್ಬಂಧಿಸಿ ಕೆಎಸ್‌ಆರ್‌ಟಿಸಿ ಕಾರ್ಮಿಕ ಇಲಾಖೆ ಅಧಿಸೂಚನೆ ಹೊರಡಿಸಲಾಗಿದೆ. ಸರ್ಕಾರದ ಅಧಿಸೂಚನೆಯ ಪ್ರತಿಯನ್ನು ಎಲ್ಲಾ ಘಟಕ, ಕಾರ್ಯಾಗಾರ, ಕಚೇರಿ ಮತ್ತು ಬಸ್ ನಿಲ್ದಾಣಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಆ ಮೂಲಕ ಈ ವಿಚಾರವನ್ನು ಎಲ್ಲಾ ನೌಕರರ ಗಮನಕ್ಕೆ ತರಲಾಗುವುದು ಎಂದು ಇಲಾಖೆ ತಿಳಿಸಿದೆ.

# ರಾಜ್ಯದಲ್ಲಿ ಮಳೆ ಅಬ್ಬರ : ಕೊಡಗಿಗೆ ರೆಡ್, 7 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಣೆ

• ಉದಯವಾಹಿನಿ, ಬೆಂಗಳೂರು

ಕಳೆದ ಕೆಲವು ದಿನಗಳಿಂದ ಬಿಡುವು ನೀಡಿದ್ದ ಮಳೆ ಇದೀಗ ಮತ್ತೆ ಶುರುವಾಗಿದೆ. ಹವಾಮಾನ ಇಲಾಖೆ ರಾಜ್ಯದ ಹಲವು ಜಿಲ್ಲೆಗಳಿಗೆ ಮಳೆ ಮುನ್ಸೂಚನೆ ನೀಡಿದೆ. ಕೊಡಗು ಜಿಲ್ಲೆಯಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿರುವುದಿಂದ ರೆಡ್ ಅಲರ್ಟ್ ಘೋಷಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಮೈಸೂರು ಜಿಲ್ಲೆಗಳಲ್ಲಿ ಗಾಳಿಯೂ 40-50ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದ್ದು, ಆರೆಂಜ್ ಅಲರ್ಟ್ ಘೋಷಿಸಿದೆ. ಜೊತೆಗೆ ಕರಾವಳಿ ಭಾಗದಲ್ಲಿ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಿದೆ. ಬೆಂಗಳೂರು, ಮಂಡ್ಯ, ರಾಮನಗರ ಸೇರಿದಂತೆ ಇನ್ನುಳಿದ ಎಲ್ಲಾ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

# ಘನತ್ಯಾಜ್ಯ ನಿರ್ವಹಣೆಗೆ ಪಿಪಿಪಿ ಮಾದರಿ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ವ್ಯಾಪ್ತಿ ಸೇರಿದಂತೆ ನಗರ ಜಿಲ್ಲೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಸಮಗ್ರ ಘನತ್ಯಾಜ್ಯ ನಿರ್ವಹಣೆ ಮಾಡಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ನಿರ್ಧರಿಸಿದೆ.

ನಗರ ಜಿಲ್ಲೆಯನ್ನು ಎರಡು ಪ್ಯಾಕೇಜ್‌ಗಳಾಗಿ ವಿಂಗಡಿಸಿ, ತ್ಯಾಜ್ಯ ಸಂಗ್ರಹ, ಸಾಗಣೆ, ವಿಲೇವಾರಿ, ಸಂಸ್ಕರಣೆಯವರಿಗೆ ಎಲ್ಲಾ ಕಾರ್ಯವನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಲಾಗುತ್ತದೆ. ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ವರ್ಗಾವಣೆ (ಡಿಬಿಎಫ್‌ಒಟಿ) ಮಾದರಿಯಲ್ಲಿ ಗುತ್ತಿಗೆ ಪಡೆದ ಸಂಸ್ಥೆ ಕಾರ್ಯನಿರ್ವಹಿಸಬೇಕಿದೆ. ಸಮಗ್ರ ಘನತ್ಯಾಜ್ಯ ನಿರ್ವಹಣೆಗಾಗಿ ಈ ಹಿಂದೆ ನಾಲ್ಕು ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆಯಲಾಗಿತ್ತು.

ಅದನ್ನು ಬದಲಿಸಿ ಎರಡು ಪ್ಯಾಕೇಜ್‌ಗಳಲ್ಲಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಮೂಲಸೌಕರ್ಯ ಅಭಿವೃದ್ಧಿಗೆ ಒಂದು ಬಾರಿ ಬಂಡವಾಳ ಹೂಡಿಕೆಯ ಅಂದಾಜು ಮೊತ್ತ ನಿರ್ಧರಿಸಿ, ಟಿಪ್ಪಿಂಗ್ ಆಧಾರದಲ್ಲಿ ವಿಲೇವಾರಿ ಸಂಸ್ಕರಣೆ ಮಾಡಲು ಟೆಂಡರ್ ಆಹ್ವಾನಿಸಿದ್ದು, ಆಗಸ್ಟ್ 14ರವರೆಗೆ ಬಿಡ್ ಸಲ್ಲಿಸಲು ಅವಕಾಶ ನೀಡಲಾಗಿದೆ. ಸಮಗ್ರ ಘನತ್ಯಾಜ್ಯ ನಿರ್ವಹಣೆ ವ್ಯವಸ್ಥೆ ಪ್ರಕ್ರಿಯೆ ಈಗಿನ ಅಂದಾಜಿನಂತೆಯೇ ಪ್ರಾರಂಭವಾದರೆ, 2028ರ ವೇಳೆಗೆ ಮೂಲಸೌಕರ್ಯ ಅಭಿವೃದ್ಧಿಯಾಗುತ್ತದೆ. ನಂತರ ಘನತ್ಯಾಜ್ಯ ವಿಲೇವಾರಿ, ಸಂಸ್ಕರಣೆ ಕಾರ್ಯ ಆರಂಭವಾಗಲಿದೆ ಎಂದು ನಿರೀಕ್ಷಿಸಲಾಗಿದ್ದು, 2030ರ ವೇಳೆಗೆ ಜನಸಂಖ್ಯೆಯನ್ನು


ಉದಯವಾಹಿನಿ ಚಿತ್ರ

ಅಂದಾಜಿಸಿ, ಘನತ್ಯಾಜ್ಯ ಉತ್ಪಾದನೆಯನ್ನು ಲೆಕ್ಕಾಚಾರ ಮಾಡಲಾಗಿದೆ. ತ್ಯಾಜ್ಯದಿಂದ ಇಂಧನ, ಜೈವಿಕ ಇಂಧನ, ಗೊಬ್ಬರ, ಮರುಬಳಕೆಯ ವಸ್ತುಗಳು ಉಪ ಉತ್ಪನ್ನಗಳನ್ನು ತಯಾರಿಸಿ ಅವುಗಳನ್ನು ಮಾರಾಟ ಮಾಡಿಕೊಳ್ಳಲು ಸಂಸ್ಥೆಗಳಿಗೆ ಅನುವು ಮಾಡಿಕೊಡಲಾಗಿದೆ. ಉತ್ತರ ಪ್ಯಾಕೇಜ್‌ನಲ್ಲಿ ಒಟ್ಟಾರೆ ಉತ್ಪಾದನೆಯಾಗುವ ತ್ಯಾಜ್ಯದಲ್ಲಿ ಈಗಿರುವ ಸಂಸ್ಕರಣೆ ಘಟಕಗಳು ನಿತ್ಯ 976 ಟನ್ ಅನ್ನು ಸಂಸ್ಕರಿಸುತ್ತಿವೆ. ಉಳಿದ 3,822 ಟನ್ ಅನ್ನು ನಿತ್ಯವೂ ಸಂಸ್ಕರಿಸಲು ಕ್ರಮ ಕೈಗೊಳ್ಳಬೇಕು. ದಕ್ಷಿಣ ಪ್ಯಾಕೇಜ್‌ನಲ್ಲಿ 1,113 ಟನ್ ನಿತ್ಯ ಸಂಸ್ಕರಣೆಯಾಗುತ್ತಿದ್ದು. ಉಳಿದ 3,900 ಟನ್ ಸಂಸ್ಕರಣೆಗೆ ಮೂಲಸೌಕರ್ಯ ನಿರ್ಮಾಣ ಹಾಗೂ ಕಾರ್ಯನಿರ್ವಹಣೆಯಾಗಬೇಕು ಎಂದು ಟೆಂಡರ್‌ನಲ್ಲಿ ವಿವರಿಸಲಾಗಿದೆ.

# ಹೈಕೋರ್ಟ್ ಕದ ತಟ್ಟಿದ ಶಾಸಕ ಭೈರತಿ ಬಸವರಾಜ್

• ಉದಯವಾಹಿನಿ, ಬೆಂಗಳೂರು

ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಶಾಸಕ ಭೈರತಿ ಬಸವರಾಜ್ ಪೊಲೀಸರು ನೀಡಿರುವ ನೋಟಿಸ್ ಪ್ರಶ್ನಿಸಿ ಹೈಕೋರ್ಟ್ ಕದ ತಟ್ಟಿದ್ದಾರೆ.

ಈ ಕುರಿತ ಅರ್ಜಿಯನ್ನು ತುರ್ತು ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಕೋರಿ ಭೈರತಿ ಬಸವರಾಜ್ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ ನ್ಯಾಯಮೂರ್ತಿ ಎಸ್. ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠಕ್ಕೆ ಬೆಳಿಗ್ಗೆ ಮೆಮೊ ಸಲ್ಲಿಸಿದರು. ಈ ಮನವಿಗೆ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಅರ್ಜಿದಾರರು ತಮಗೆ ನೋಟಿಸ್ ನೀಡಿದ್ದನ್ನೇ ಪ್ರಶ್ನಿಸಿ ಹೈಕೋರ್ಟ್‌ಗೆ ಬಂದಿದ್ದಾರೆ. ಈ ಪ್ರಕರಣದ ತುರ್ತು ವಿಚಾರಣೆ ಅಗತ್ಯವಿಲ್ಲ' ಎಂದು ಪ್ರತಿಪಾದಿಸಿದರು.



> ತುರ್ತು ವಿಚಾರಣೆ ಕೋರಿಕೆಗೆ ಈ ರೀತಿಯ ಆಕ್ಷೇಪ ಸರಿಯಲ್ಲ. ಭೈರತಿ ಬಸವರಾಜ್ ವಿರುದ್ಧದ ಎಫ್‌ಐಆರ್‌ನಲ್ಲಿ ಹುರುಳಿಲ್ಲ. ದೂರುದಾರರು ಭೈರತಿ ಬಸವರಾಜ್ ಹೆಸರನ್ನೇ ಎಲ್ಲೂ ಹೇಳಿಲ್ಲ. ಹೀಗೆಂದು ಕೊಲೆಯಾದ ವ್ಯಕ್ತಿಯ ತಾಯಿಯೇ ಸ್ಪಷ್ಟಪಡಿಸಿದ್ದಾರೆ. ಆದರೂ, ಎಫ್‌ಐಆರ್ ನಲ್ಲಿ ಅವರ ಹೆಸರು ಸೇರಿಸಲಾಗಿದೆ ಎಂದು ದೂರಿದರು. ಇದನ್ನು ಆಲಿಸಿದ ನ್ಯಾಯಪೀಠ ಮಧ್ಯಾಹ್ನ 2.30ಕ್ಕೆ ವಿಚಾರಣೆ ನಡೆಸುವುದಾಗಿ ತಿಳಿಸಿತು.

ಇದನ್ನು ಒಪ್ಪದ ಚೌಟ, ನಮ್ಮ ಅರ್ಜಿಯಲ್ಲೇನಿದೆ ಎಂಬುದನ್ನು ತಿಳಿಯುವ ಮೊದಲೇ ಪ್ರಾಸಿಕ್ಯೂಟರ್ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ.

# ಜು.21ರಿಂದ ಅತಿಥಿ ಉಪನ್ಯಾಸಕರ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ನೀಡುವುದರ ಜೊತೆಗೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ

ಜುಲೈ 21ರಿಂದ ಗದಗ ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುವುದು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಹನಮಂತಗೌಡ ಆರ್. ಕಲ್ಮನಿ, ವರ್ಷದ 12 ತಿಂಗಳ ವೇತನ ನೀಡಬೇಕು. ಪ್ರಸಕ್ತ ಶೈಕ್ಷಣಿಕ ಸಾಲಿಗೆ ನೇಮಕಾತಿ ಮಾಡಿಕೊಳ್ಳುವ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಕೈಬಿಡಬೇಕು.

ವಿಶ್ವವಿದ್ಯಾಲಯ ಅನುದಾನ ಆಯೋಗದ ಯುಜಿಸಿ ನಿಯಮಗಳ ಪ್ರಕಾರ ಅರ್ಹತೆಯ ಮಾನದಂಡ ಪರಿಗಣಿಸಬೇಕು. ಯುಜಿಸಿ ನಿಯಮಗಳಂತೆ ವೇತನ ನಿಗದಿಪಡಿಸಬೇಕು. 2024-25ನೇ ಶೈಕ್ಷಣಿಕ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಅತಿಥಿ ಉಪನ್ಯಾಸಕರನ್ನು 2025-26ನೇ ಶೈಕ್ಷಣಿಕ ಸಾಲಿಗೆ ಮುಂದುವರಿಸಬೇಕು' ಎಂದು ಆಗ್ರಹಿಸಿದರು.

# ಬಿ ಖಾತಾಗಳಿಗೂ ಎ ಖಾತಾದಂತೆ ಕಾನೂನು ಮಾನ್ಯತೆಗೆ ಸರ್ಕಾರ ನಿರ್ಧಾರ ?

• ಉದಯವಾಹಿನಿ, ಬೆಂಗಳೂರು

ನಗರದ ಬಿ ಖಾತಾದಾರರಿಗೆ ಸರ್ಕಾರ ಗುಡ್ ನ್ಯೂಸ್ ಕೊಟ್ಟಿದೆ. ಬಿ ಖಾತಾಗಳಿಗೂ ಎ ಖಾತಾದಂತೆ ಮಾನ್ಯತೆ ನೀಡುವ ಬಗ್ಗೆ ಕ್ಯಾಬಿನೆಟ್ ನಿರ್ಧರಿಸಿದ್ದು, ಈ ಪರಿವರ್ತನೆಯಾಗಬೇಕು ಅಂದರೆ ಒಂದಷ್ಟು ಮಾನದಂಡಗಳನ್ನ ಅನುಸರಿಸಬೇಕಾಗುತ್ತದೆ. ಒಟ್ಟು 30 ಲಕ್ಷಕ್ಕೂ ಅಧಿಕ ಬಿ ಖಾತಾದಾರರಿದ್ದು, ಸರ್ಕಾರದ ಮಾನದಂಡಗಳನ್ನು ಅನುಸರಿಸಬೇಕಾಗುತ್ತದೆ.

**ಬಿ ಖಾತಾದಾರರು ಅನುಸರಿಸಬೇಕಾದ ಮಾನದಂಡಗಳೇನು**




- ಬಿ ಖಾತದಾರರು ಖಾಸಗಿ ರಸ್ತೆಗಳನ್ನು ಸಾರ್ವಜನಿಕ ರಸ್ತೆಗಳನ್ನಾಗಿ ಘೋಷಣೆ ಮಾಡಬೇಕು.
- ಬಿ ಖಾತಾದಾರರು ಎ ಖಾತಾ ಮಾದರಿಯಲ್ಲಿ ಸಕಲ ಸೌಲಭ್ಯ ಪಡೆಯಲು ಮಾರ್ಗಸೂಚಿ ದರ ಶೇ.5ರಷ್ಟು ಪಾವತಿ ಮಾಡಬೇಕು.
- ಸಾವಿರ ಮಾರ್ಗಸೂಚಿ ದರವಿರುವ 30★40 ಅಡಿ ನಿವೇಶನಕ್ಕೆ ಸುಮಾರು 3 ಲಕ್ಷ ರೂ. ಶುಲ್ಕ ಆಗಬಹುದು
- ಬಿ ಖಾತಾ ನಿವೇಶನ ಅಥವಾ ಸೈಟ್ ಇದ್ದರೆ ಅದರ ಮುಂದಿನ ಖಾಸಗಿ ರಸ್ತೆಯನ್ನು ಸಾರ್ವಜನಿಕ ರಸ್ತೆಗಾಗಿ ಕನಿಷ್ಟ 30 ಅಡಿ ಅಗಲ ಬಿಡಬೇಕು
- 25 ಅಡಿ ರಸ್ತೆಯಲ್ಲಿ ಬಿ ಖಾತಾ ನಿವೇಶನಗಳಿದ್ದರೆ ಕಡಿಮೆ ಇರುವ ಐದು ಅಡಿಯನ್ನು ಎರಡು ಬದಿಯ ನಿವೇಶನಗಳಿಂದ ತಲಾ ಎರಡೂವರೆ ಅಡಿ ಸಾರ್ವಜನಿಕ ರಸ್ತೆಗೆ ಜಾಗ ಬಿಡಬೇಕು
- 30 ಅಡಿ ರಸ್ತೆ ನಿಗದಿಯಾದ ಮೇಲೆ ಬಿಬಿಎಂಪಿ ಕಾಯ್ದೆಯ ಪ್ರಕಾರ ಸಾರ್ವಜನಿಕ ರಸ್ತೆ ಎಂದು ಘೋಷಣೆ ಮಾಡಬೇಕು
- ಈಗಾಗಲೇ ಬಿ ಖಾತಾ ಸೈಟ್‌ಗಳಲ್ಲಿ ಕಟ್ಟಡ ಕಟ್ಟಿದ್ದರೆ ಅಂತಹವರು ಸಾರ್ವಜನಿಕ ರಸ್ತೆಯನ್ನ ಘೋಷಣೆ ಮಾಡಿಕೊಳ್ಳಿ ಎಂದು ಬಿಬಿಎಂಪಿಗೆ ಪತ್ರ ಬರೆಯಬೇಕು

# ಕೃಷಿ ಮಾಧ್ಯಮ ಪ್ರಶಸ್ತಿಗೆ ಅರ್ಜಿ ಆಹ್ವಾನ

• ಉದಯವಾಹಿನಿ, ಬೆಂಗಳೂರು

ಹಳೆಯ ವಿದ್ಯಾರ್ಥಿಗಳ ಸಂಘ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವತಿಯಿಂದ ಹೊಂಬಾಳೆ ಸಂಹಿತ ಹರಿಣಿಕುಮಾರ್ ಕೃಷಿ ಮಾಧ್ಯಮ ಪ್ರಶಸ್ತಿ-2025ಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಮುದ್ರಣ, ವಿದ್ಯುನ್ಮಾನ ಪತ್ರಕರ್ತರು, ನಿರೂಪಕರು, ಅಧಿಕಾರಿಗಳು ಮತ್ತು ವಿಸ್ತರಣಾ ಕಾರ್ಯಕರ್ತರು ಅರ್ಜಿ ಸಲ್ಲಿಸಬಹುದು. ಪ್ರಶಸ್ತಿಯು ಪ್ರಮಾಣಪತ್ರ, ರೂ.10 ಸಾವಿರ ನಗದು ಬಹುಮಾನ ಒಳಗೊಂಡಿದೆ.

ಅರ್ಜಿಯನ್ನು ಹಳೆಯ ವಿದ್ಯಾರ್ಥಿಗಳ ಸಂಘ, ಕೃಷಿ ವಿಶ್ವವಿದ್ಯಾನಿಲಯ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು-560024 ಇಲ್ಲಿಗೆ ಆಗಸ್ಟ್ 14ರೊಳಗೆ ಸಲ್ಲಿಸಬೇಕು. 080-23410754, alumniuasb83@gmail.com: www.alumniuasb.in ಸಂಪರ್ಕಿಸಬಹುದು ಎಂದು ಕಾರ್ಯಕಾರಿಣಿ ಸದಸ್ಯ ಕೆ.ಶಿವರಾಮು ತಿಳಿಸಿದ್ದಾರೆ.



# ಸುರ್ಜೇವಾಲಾ ನನ್ನನ್ನು ಕರೆದಿಲ್ಲ, ಸಂಪುಟದಿಂದ ಕೈ ಬಿಡ್ತಾರೆ ಅಂತನೂ ಹೇಳಿಲ್ಲ: ಆರ್.ಬಿ.ತಿಮ್ಮಾಪುರ್

• ಉದಯವಾಹಿನಿ, ಬೆಂಗಳೂರು

ಸುರ್ಜೇವಾಲಾ ನನ್ನನ್ನು ಸಭೆಗೆ ಕರೆದಿಲ್ಲ, ಸಂಪುಟದಿಂದ ಕೈ ಬಿಡ್ತಾರೆ ಅಂತನೂ ಹೇಳಿಲ್ಲ ಎಂದು ಸಚಿವ ಆರ್ .ಬಿ.ತಿಮ್ಮಾಪುರ್ ಹೇಳಿದರು. ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸುರ್ಜೇವಾಲಾ ನನ್ನನ್ನು ಸಭೆಗೆ ಕರೆದಿಲ್ಲ, ನನ್ನನ್ನು ಸಂಪುಟದಿಂದ ಕೈಬಿಡ್ತಾರೆ ಅಂತನೂ ಹೇಳಿಲ್ಲ, ಕೆಲವು ಮಂತ್ರಿಗಳನ್ನೂ ಕೈಬಿಟ್ಟಿದ್ದೀರಲ್ಲ ಯಾಕೆ ಎಂದು ನೀವೇ ಸುರ್ಜೇವಾಲಾರನ್ನು ಕೇಳಿ. ಉಳಿದವರ ಬಗ್ಗೆ ನಾನೇನು ಹೇಳಲಿ ಹೈಕಮಾಂಡ್ ಏನಾದರೂ ಕರೆದರೆ ತಕ್ಷಣ ಹೋಗುತ್ತೇವೆ ಎಂದು ಹೇಳಿದರು. ಮಲ್ಲಿಕಾರ್ಜುನ ಖರ್ಗೆ ದಲಿತ ಪಿಎಂ ಆಗಲಿ ಎಂಬ ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಯಾವಾಗ ಏನು ನಿರ್ಧರಿಸಬೇಕು ಅದನ್ನು ಮಾಡುತ್ತೇವೆ. ಪಕ್ಷದ ಧ್ಯೇಯ ಧೋರಣೆ ನೋಡಿಕೊಂಡು ನಾವು ನಿರ್ಧಾರ ಮಾಡ್ತೇವೆ. ಸಿಎಂ ಮಾಡುವಾಗಲೂ ನಮಗೊಂದು ಪದ್ಧತಿ ಇದೆ. ಬಿಜೆಪಿಯವರನ್ನು ಕೇಳಿ ಪ್ರಧಾನಿ ಮಾಡೋಕಾಗುತ್ತಾ? ಏನೇನು ನ್ಯೂಸ್ ಇದೆಯೋ ನಿಮಗೆ ಗೊತ್ತು.

ಬಿಜೆಪಿಯವರಿಗೆ ಯಾವತ್ತೂ ಅಭಿವೃದ್ಧಿ,


ಉದಯವಾಹಿನಿ ಚಿತ್ರ

ದೇಶದ ರಕ್ಷಣೆ ವಿಚಾರ, ಶಾಂತಿ, ನೆಮ್ಮದಿ ಬೇಕಿಲ್ಲ. ಅದು ಅವರ ಅಜೆಂಡಾ ಅಂತ ಕಿಡಿ ಕಾರಿದ್ದಾರೆ.

ಖರ್ಗೆ ಅವರಿಗೆ ರಾಜ್ಯದಲ್ಲೂ ಅವಕಾಶ ಇದೆ ಎಂಬ ವಿಚಾರ ನೀವು ಹೇಳಿದ್ದನ್ನೂ ಗಮನದಲ್ಲಿಟ್ಟುಕೊಂಡು ಇರುತ್ತೇವೆ. ನೀವು ಮಾಧ್ಯಮಗಳು ಒಂದು ಗಂಟೆಯಲ್ಲಿ ಮಂತ್ರಿನೂ ಮಾಡ್ತೀರಿ, ಮುಖ್ಯಮಂತ್ರಿನೂ ಮಾಡ್ತೀರಿ, ಪ್ರಧಾನಿಯನ್ನೂ ಮಾಡ್ತೀರಿ. ಶಾಸಕರನ್ನ ಮಂತ್ರಿಯೂ ಮಾಡ್ತೀರಿ ಅಂತ ನುಡಿದಿದ್ದಾರೆ.

# ದಕ್ಷಿಣ ಸಂಸದ ತೇಜಸ್ವಿ ಸೂರ್ಯ, ಬಹಿರಂಗ ಚರ್ಚೆ


## ಹೆಬ್ಬಾಳ - ಸಿಲ್ಕ್ ಬೋರ್ಡ್ ನಡುವೆ ಪ್ರಯಾಣಿಸಲು ಬೆಂಗಳೂರಿಗರ ಆದ್ಯತೆ ಏನು : ಸಂಸದರು ನಡೆಸಿದ ಪೋಲ್ ಸರ್ವೇ

• ಉದಯವಾಹಿನಿ, ಬೆಂಗಳೂರು


ರಾಜಧಾನಿಗೆ ಸುರಂಗ ಮಾರ್ಗದ ಪರಿಕಲ್ಪನೆಗೆ ವಿರೋಧಿಸಿಕೊಂಡು ಬರುತ್ತಿರುವ ಬಿಜೆಪಿ ಸಂಸದರು, ಉಪ ಮುಖ್ಯಮಂತ್ರಿ ಡಿಕೆಶಿವಕುಮಾರ್ ಅವರಿಗೆ ಹಲವು ಬಾರಿ ಮನವಿಯನ್ನು ಮಾಡಿದ್ದಾರೆ. ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ, ಬಹಿರಂಗ ಚರ್ಚೆಗೂ ಆಹ್ವಾನಿಸಿದ್ದಾರೆ.

ಇನ್ನು, ಬೆಂಗಳೂರು ಕೇಂದ್ರ ಸಂಸದ ಪಿಸಿ ಮೋಹನ್ ಸುರಂಗ ಮಾರ್ಗದಿಂದ ಆಗುವ ಸಮಸ್ಯೆಗಳ ಬಗ್ಗೆ ಜನಜಾಗೃತಿ ಮೂಡಿಸುವ ಕೆಲಸವನ್ನು ಮಾಡಿದ್ದಾರೆ. ಈ ಸಂಬಂಧ, ಜನಾಭಿಪ್ರಾಯವನ್ನು ಕೇಳಲು, ಸಾಮಾಜಿಕ ಜಾಲತಾಣ ಟ್ವಿಟ್ಟರ್ (ಎಕ್ಸ್) ನಲ್ಲಿ ಪೋಲ್ ಸರ್ವೇಯೊಂದನ್ನು ನಡೆಸಿದ್ದಾರೆ.

ಬೆಂಗಳೂರಿಗರು ಹೆಬ್ಬಾಳದಿಂದ ಸಿಲ್ಕ್ ಬೋರ್ಡ್ ತನಕದ ಪ್ರಯಾಣಕ್ಕೆ ಯಾವುದನ್ನು ಆದ್ಯತೆಯಿಂದ ಆಯ್ಕೆ ಮಾಡುತ್ತಾರೆ ಎನ್ನುವ ಪೋಲ್ ಒಂದನ್ನು ಹಾಕಿದ್ದರು. ಅದಕ್ಕೆ, ಇದುವರೆಗೆ 3,516 ವೋಟ್


ಉದಯವಾಹಿನಿ ಚಿತ್ರ

ಮಾಡಿದ್ದಾರೆ. ಸಂಸದರು ಇದಕ್ಕೆ ಎರಡು ಆಯ್ಕೆಯನ್ನು ಕೊಟ್ಟಿದ್ದರು. ಮೆಟ್ರೋ ಫೇಸ್ 3 ಉತ್ತಮ ಆಯ್ಕೆಯೋ ಅಥವಾ 17,780 ಕೋಟಿ ರೂಪಾಯಿಯ ಸುರಂಗ ಮಾರ್ಗವೋ ಎಂದು. ಇದಕ್ಕೆ ಕೇವಲ ಶೇ. 9ರಷ್ಟು ಮಂದಿ ಮಾತ್ರ ಸುರಂಗ ಮಾರ್ಗ ಎಂದಿದ್ದಾರೆ. ಮಿಕ್ಕ, ಶೇ. 91 ಜನ ಮೆಟ್ರೋ ಉತ್ತಮ ಆಯ್ಕೆ ಎಂದಿದ್ದಾರೆ. ಅಂದರೆ, ಕೇವಲ 316 ಜನ ಮಾತ್ರ ಸುರಂಗ ಮಾರ್ಗ ಬೆಸ್ಟ್ ಎಂದಿದ್ದಾರೆ. ಈ ಪೋಲ್ ಸರ್ವೇಯ



ಫಲಿತಾಂಶವನ್ನು ಮುಂದಿಟ್ಟುಕೊಂಡು ಸಂಸದರು ಕಾಮೆಂಟ್ ಮಾಡಿದ್ದಾರೆ. ಸುಮಾರು ಮೂರುವರೆ ಸಾವಿರ ಬೆಂಗಳೂರಿಗರು ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಇವರೆಲ್ಲರ ಮೆಸೇಜ್ ಅತ್ಯಂತ ಕ್ಲಿಯರ್, ಬೆಂಗಳೂರು ನಗರಕ್ಕೆ ಬೇಕಾಗಿರುವುದು ಸಬ್ ಅರ್ಬನ್ ರೈಲು, ಮೆಟ್ರೋ, ಹೆಚ್ಚಿನ ಬಸ್ಸುಗಳು, ಫುಟ್ ಪಾತ್, ಸೈಕ್ಲಿಂಗ್ ಟ್ರ್ಯಾಕ್, ಗುಂಡಿಮುಕ್ತ ರಸ್ತೆಗಳು ಎಂದು ಪಿಸಿ ಮೋಹನ್ ರಿಪ್ಲೈ ಮಾಡಿದ್ದಾರೆ.

ಇದೇ ಜನರು ಬೆಂಗಳೂರಿನ ಟ್ರಾಫಿಕ್ ಬಗ್ಗೆ ಕೆಟ್ಟ ಸಂದೇಶವನ್ನು ರವಾನಿಸುತ್ತಾರೆ, ಸರ್ಕಾರ ಯಾಕೆ ನಗರದ ಮೂಲಭೂತ ಸೌಕರ್ಯದ ಕಡೆಗೆ ಗಮನ ಕೊಡುವುದಿಲ್ಲ ಎಂದು ಕಿಡಿಕಾರುತ್ತಾರೆ. ಬಿಜೆಪಿಯ ಐಟಿ ಸೆಲ್ ಹೇಳಿಕೆಗಳಿಗೆ ಹೆಚ್ಚು ಗಮನವನ್ನು ಕೊಡುವುದು ಬೇಕಾಗಿಲ್ಲ. ಡಿಕೆ ಶಿವಕುಮಾರ್ ಅವರು ಸುರಂಗ ಮಾರ್ಗದ ಪ್ರಸ್ತಾವನೆಯಿಂದ ಹಿಂದಕ್ಕೆ ಸರಿಯಬಾರದು ಎಂದು ಇನ್ನೊಬ್ಬರು ಪ್ರತಿಕ್ರಿಯೆಯನ್ನು ನೀಡಿದ್ದಾರೆ.

### ಹಳದಿ ಲೈನ್ ಕೆಲಸವನ್ನು ಆರಂಭ

ಸಂಸದರ ಈ ಟ್ವೀಟ್ ಸುಮಾರು 25ಸಾವಿರ ಜನ ವೀಕ್ಷಿಸಿದ್ದಾರೆ. ಅದಕ್ಕೆ ಸಾಕಷ್ಟು ಕಾಮೆಂಟುಗಳು ಕೂಡಾ ಬಂದಿವೆ. 'ಮುಂದಿನ ಚುನಾವಣೆಗೆ ಇದನ್ನೇ ವಿಷಯವನ್ನಾಗಿ ಮಾಡಿ, ಪ್ರಚಾರವನ್ನು ಮಾಡಿ. ಅದರಂತೆಯೇ ಕೆಲಸವನ್ನೂ ಮಾಡಿ, ನೀವು ಮತ್ತೆ ದೊಡ್ಡ ಅಂತರದಿಂದ ಗೆದ್ದು ಬರುವುದು ಖಂಡಿತ ಎಂದು ಒಬ್ಬರು ಪ್ರತಿಕ್ರಿಯೆಯನ್ನು ನೀಡಿದ್ದಾರೆ. ಸಾಧ್ಯವಾದಷ್ಟು ಬೇಗ ಹಳದಿ ಲೈನ್ ಕೆಲಸವನ್ನು ಆರಂಭಿಸಲು ಒತ್ತಡವನ್ನು ಹಾಕಿ. ಈಗಾಗಲೇ ಇದು ತುಂಬಾ ವಿಳಂಬವಾಗಿದೆ. ಇದು ಆರಂಭವಾದರೆ, ಇಲೆಕ್ಟ್ರಾನಿಕ್ ಸಿಟಿ ಮತ್ತು ಹೆಬ್ಬಾಳದ ನಡುವಿನ ಪ್ರಯಾಣದ ಸಮಯವನ್ನು ಸಾಕಷ್ಟು ಇಳಿಸುತ್ತದೆ ಎಂದು ಇನ್ನೋರ್ವರು ಪ್ರತಿಕ್ರಿಯೆ ನೀಡಿದ್ದಾರೆ.

# ಚಾಮುಂಡಿ ಬೆಟ್ಟಕ್ಕೆ ಸಚಿವೆ ಶೋಭಾ ಕರಂದ್ಲಾಜೆ ಭೇಟಿ

## ಎಲ್ಲಾ ಸಾರಿಗೆ ಸಂಸ್ಥೆಗಳು ಲಾಸ್‌ನಲ್ಲಿವೆ, ಯಾವ್ ಸಾಧನೆಗೆ ಸಾಧನಾ ಸಮಾವೇಶ ರೀ: ಶೋಭಾ ಕರಂದ್ಲಾಜೆ ಕಿಡಿ

• ಉದಯವಾಹಿನಿ, ಮೈಸೂರು

ಕೊನೆ ಆಷಾಢ ಹಿನ್ನೆಲೆ ಚಾಮುಂಡಿ ಬೆಟ್ಟಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಭೇಟಿ ನೀಡಿದರು. ಪ್ರತಿ ವರ್ಷದಂತೆ ಈ ವರ್ಷವೂ ಮೆಟ್ಟಿಲುಗಳ ಮೂಲಕ ಬೆಟ್ಟವನ್ನೇರಿ ನಾಡದೇವತೆ ಚಾಮುಂಡಿ ತಾಯಿಯ ದರ್ಶನ ಪಡೆದರು. ಶೋಭಾ ಕರಂದ್ಲಾಜೆಗೆ ಸ್ಥಳೀಯ ಬಿಜೆಪಿ ಮುಖಂಡರು ಸಾಥ್ ನೀಡಿದರು.

ಪ್ರತಿ ವರ್ಷದಂತೆ ಈ ವರ್ಷವೂ ಚಾಮುಂಡಿಬೆಟ್ಟವನ್ನು ಮೆಟ್ಟಿಲುಗಳ ಮೂಲಕ ಹತ್ತಿ ತಾಯಿಯ ದರ್ಶನ ಪಡೆದಿದ್ದೇವೆ. ಈ ದೇಶಕ್ಕೆ ಒಳ್ಳೆಯದಾಗಬೇಕು. ದೇಶಕ್ಕೆ ಶಕ್ತಿಯನ್ನು ಕೊಟ್ಟ ನರೇಂದ್ರ ಮೋದಿಯವರಿಗೆ ಆಯಸ್ಸು ಆರೋಗ್ಯ ಕರುಣಿಸಲಿ.ಮಳೆ ಚೆನ್ನಾಗಿ ಆಗುತ್ತಿದೆ, ಒಳ್ಳೆಯ ಬೆಳೆ ರೈತರಿಗೆ ಸಿಗಲಿ. ನಮ್ಮ ದೇಶಕ್ಕೆ ರಕ್ಷಣೆ ಸಿಗಲಿ ಎನ್ನುವುದು ನಮ್ಮ ಪ್ರಾರ್ಥನೆ. ಮೈಸೂರಿಗೆ ಬಂದಾಗ ಇದು ನನ್ನೂರು ಎನಿಸುತ್ತದೆ ಎಂದರು.



**ಸಿಎಂ ಬದಲಾವಣೆ ವಿಚಾರ:** ಅದು ಅವರ ಪಾರ್ಟಿಯ ಆಂತರಿಕ ವಿಚಾರ. 135 ಶಾಸಕರನ್ನು ಕರ್ನಾಟಕದ ರಾಜ್ಯದ ಜನತೆ ನಂಬಿ ಗೆಲ್ಲಿಸಿದ್ದಾರೆ. ಅವರಿಗೆ ನ್ಯಾಯ ಕೊಡಿಸಿ ಎಂದರು.

ದಲಿತರೊಬ್ಬರನ್ನು ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ಮಾಡಲಿ ಎಂದು ಸಿಎಂ ಸಿದ್ದರಾಮಯ್ಯ ಟ್ವೀಟ್ ಮಾಡಿರುವ ವಿಚಾರವಾಗಿ, ವಿಚಾರವನ್ನು ಡೈವರ್ಟ್ ಮಾಡಲು ಏನು ಬೇಕಾದರೂ ಮಾತನಾಡುತ್ತಾರೆ.

ಈ ಸರ್ಕಾರದ ಬಹಳ ಮಂದಿ ಮಾನಸಿಕ ಸ್ಥಿಮಿತತೆ ಕಳೆದುಕೊಂಡಿದ್ದಾರೆ. ಅದಕ್ಕೆ ದಿನಕ್ಕೊಂದು ರೀತಿಯಲ್ಲಿ ಮಾತನಾಡ್ತಿದ್ದಾರೆ. ಏನು ಮಾತನಾಡ್ತಿದ್ದೇವೆಂದು ಅವರಿಗೆ ಗೊತ್ತಿಲ್ಲ. ನೀವು ಈ ರೀತಿ ಮಾತನಾಡೋದು ಬಿಟ್ಟು, ಟ್ವೀಟ್ ಮಾಡೋದು ಬಿಟ್ಟು, ಹೇಳಿಕೆಗಳನ್ನು ನೀಡೋದು ಬಿಟ್ಟು ರಾಜ್ಯದ ಅಭಿವೃದ್ಧಿ ಮಾಡಿ ಎಂದು ಜನರು ನಿಮ್ಮನ್ನು ಗೆಲ್ಸಿರೋದು ಎಂದರು.

ಗ್ಯಾರಂಟಿ ಯೋಜನೆಯಡಿ ಫ್ರೀ ಬಸ್ ಯೋಜನೆ ಘೋಷಣೆ ಮಾಡಿದರು. ಆದರೆ ಬಸ್‌ಗಳನ್ನೇ ನಿಲ್ಲಿಸಿದ್ದಾರೆ. ಎಲ್ಲಾ ಸಾರಿಗೆ ಸಂಸ್ಥೆಗಳು ಲಾಸ್‌ನಲ್ಲಿವೆ. ಅವನತಿ ಅಂಚಿನಲ್ಲಿವೆ. ಬಸ್ ಗಳನ್ನು ರಿಪೇರಿ ಮಾಡಲು ಹಣವಿಲ್ಲ. ಸರ್ಕಾರಿ ನೌಕರರಿಗೆ ವೇತನ ಕೊಡಲು ದುಡ್ಡಿಲ್ಲ. ಅಭಿವೃದ್ಧಿಗೆ ಹಣವಿಲ್ಲದ ಕಾರಣ ಕ್ಷೇತ್ರಕ್ಕೆ ಹೋಗಲು ಭಯಪಡುತ್ತಿದ್ದಾರೆ. ನಿಮ್ಮ ಶಾಸಕರೇ ನಿಮ್ಮ ವಿರುದ್ಧ ಮಾತನಾಡುವ ಪರಿಸ್ಥಿತಿ ಕೇವಲ ಎರಡು ವರ್ಷದಲ್ಲಿ ಉಂಟಾಗಿದೆ. ಇದು ನಿಮ್ಮ ಸಾಧನೆ!. ಪರಸ್ಪರ ಕುರ್ಚಿಗಾಗಿ ಕಿತ್ತಾಟ, ಯಾರು ಮುಖ್ಯಮಂತ್ರಿ ಆಗಬೇಕೆಂದು ಮೇಲಾಟ. ಯಾರು ಮಂತ್ರಿಯಾಗಬೇಕೆಂದು ಕಿತ್ತಾಟ. ಸುರ್ಜೇವಾಲ ಬಂದು ಆಡಳಿತ ನಡೆಸುವಂತಹ ದುಸ್ಥಿತಿಗೆ ತಂದಿರುವವರು ನೀವು ಸಿದ್ದರಾಮಯ್ಯನವರೇ ಎಂದು ವಾಗ್ದಾಳಿ ನಡೆಸಿದ್ದಾರೆ.

- ಕಾಂಗ್ರೆಸ್‌ನವರು ಯಾವ ಸಾಧನೆಯ ಸಮಾವೇಶವನ್ನು ಮಾಡ್ತಿದ್ದಾರೆ?
- ಒಂದು ಕಡೆ ಜನರು ಸಾಯ್ತಿದಾರೆ. ಜನರಿಗೆ ರಕ್ಷಣೆಯಿಲ್ಲ: ಶೋಭಾ ಕರಂದ್ಲಾಜೆ ವಾಗ್ದಾಳಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ

**ಪರಸ್ಪರ ಕುರ್ಚಿಗಾಗಿ ಕಿತ್ತಾಟ**

### ಕಾಂಗ್ರೆಸ್ ಸಾಧನಾ ಸಮಾವೇಶ ಆಯೋಜನೆ

ಯಾವ ಸಾಧನೆಯ ಸಮಾವೇಶವನ್ನು ಮಾಡ್ತಿದ್ದಾರೆ. ಒಂದು ಕಡೆ ಜನರು ಸಾಯ್ತಿದಾರೆ. ಜನರಿಗೆ ರಕ್ಷಣೆಯಿಲ್ಲ. ಕೊಲೆಗಳಾಗುತ್ತಿವೆ, ಚಿಕ್ಕ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಗಳಾಗುತ್ತಿವೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ದೇಶದ್ರೋಹಿ ಚಟುವಟಿಕೆಗಳು ಕರ್ನಾಟಕದಲ್ಲಿ ತಲೆ ಎತ್ತುತ್ತಿವೆ. ಪೊಲೀಸ್ ಸ್ಟೇಷನ್ ಮೇಲೆ ದಾಳಿಯಾಗುತ್ತಿವೆ. ಯಾವುದೇ ಅಭಿವೃದ್ಧಿ ಕೆಲಸಗಳಾಗುತ್ತಿಲ್ಲ. ಅನ್ನಭಾಗ್ಯದ ಅಕ್ಕಿ ಸಾಗಾಟ ಮಾಡುವ ಲಾರಿಗಳಿಗೆ ಬಾಡಿಗೆ ಕೊಡಲು ಇವರ ಬಳಿದುಡ್ಡಿಲ್ಲ ಎಂದು ವಾಗ್ದಾಳಿ ನಡೆಸಿದರು.


ಉದಯ ವಾಹಿನಿ

ಪ್ರಾದೇಶಿಕ

ಶನಿವಾರ 19 ಜುಲೈ 2025




## ಮಿನಿ ನ್ಯೂಸ್

### ಹೊಂಗನೂರು ಕೆಪಿಎಸ್ ಶಾಲೆ ಕಟ್ಟಡ ಉದ್ಘಾಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನ ಹೊಂಗನೂರಿನಲ್ಲಿ ಕಣ್ಣ ಫೌಂಡೇಷನ್‌ನ ಡಾ. ಎಂ.ವಿ. ವೆಂಕಟಪ್ಪ ಅವರು ನಿರ್ಮಿಸಿರುವ ಶ್ರೀಮತಿ ಚೆನ್ನಮ್ಮ ಮಂಚೇಗೌಡ ಕರ್ನಾಟಕ ಪಬ್ಲಿಕ್ ಶಾಲೆಯ ನೂತನ ಕಟ್ಟಡ ಉದ್ಘಾಟನಾ ಸಮಾರಂಭ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಗ್ರಾಮದಲ್ಲಿ ನಡೆಯಲಿದೆ.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರಾಥಮಿಕ ಶಾಲಾ ಕಟ್ಟಡ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ವಿಜ್ಞಾನ ಪ್ರಯೋಗಾಲಯ ಉದ್ಘಾಟಿಸುವರು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಕಂಪ್ಯೂಟರ್ ಲ್ಯಾಬ್ ಹಾಗೂ ಸಂಸದ ಡಾ. ಸಿ.ಎನ್.ಮಂಜುನಾಥ್ ಗ್ರಂಥಾಲಯವನ್ನು ಉದ್ಘಾಟಿಸುವರು. ಚನ್ನಪಟ್ಟಣ ಶಾಸಕ ಸಿ.ಪಿ. ಯೋಗೇಶ್ವರ್ ಘನ ಉಪಸ್ಥಿತಿ ವಹಿಸುವರು. ರಾಜಾಜಿನಗರದ ಬಿಜೆಪಿ ಎಸ್. ಸುರೇಶ್ ಕುಮಾರ್, ವಿಧಾನ ಪರಿಷತ್ ಸದಸ್ಯರಾದ ಸಿ. ಪುಟ್ಟಣ್ಣ, ಎಸ್. ರವಿ, ರಾಮೋಜಿಗೌಡ, ಬಿಎಂಐಸಿಪಿಎ ಪ್ರಾಧಿಕಾರದ ಅಧ್ಯಕ್ಷ ರಘುನಂದನ್ ರಾಮಣ್ಣ, ಸರ್ಕಾರದ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

## ತೆಪ್ಪದ ಸಂಚಾರ; ತಪ್ಪದ ಆತಂಕ

• ಉದಯವಾಹಿನಿ, ಶ್ರೀರಂಗಪಟ್ಟಣ

ಕಾವೇರಿ ನದಿಯಲ್ಲಿ ಇನ್ನೂ ಪ್ರವಾಹ ಪರಿಸ್ಥಿತಿ ಮುಂದುವರಿದಿದ್ದು, ತಾಲ್ಲೂಕಿನ ಬಲಮುರಿ ಪ್ರಕೃತಿ ತಾಣದ ಬಳಿ ದುಡ್ಡಿನ ಆಸೆಗೆ ಪ್ರವಾಸಿಗರನ್ನು ತೆಪ್ಪದಲ್ಲಿ ಕೂರಿಸಿ ವಿಹಾರ ಮಾಡಿಸುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.

ಬಲಮುರಿ ದೇವಾಲಯಗಳ ಅಭಿವೃದ್ಧಿ ಸಮಿತಿಯಿಂದ ಮೂರು ತೆಪ್ಪಗಳನ್ನು ನದಿಗೆ ಇಳಿಸಿ ಅದರಲ್ಲಿ ಪ್ರವಾಸಿಗರನ್ನು ಕೂರಿಸಿ ವಿಹಾರ ಮಾಡಲು ಅವಕಾಶ ನೀಡಲಾಗಿದೆ. ನದಿಯ ನೀರಿನ ಮಟ್ಟದಲ್ಲಿ ಏರಿಳಿತ ಆಗುತ್ತಲೇ ಇದೆ. ಕೆಆರ್‌ಎಸ್ ಜಲಾಶಯದಿಂದ 13,442 ಕ್ಯೂಸೆಕ್ ನೀರನ್ನು ಹೊರಗೆ ಬಿಡಲಾಗಿದೆ ಎಂದು ಕಾವೇರಿ ನೀರಾವರಿ ನಿಗಮ ಅಧಿಕೃತವಾಗಿ ಪ್ರಕಟಣೆ ಹೊರಡಿಸಿದೆ. ಹಾಗಾಗಿ ನದಿಯಲ್ಲಿ ನೀರಿನ ಸೆಳೆತ ಇದ್ದೇ ಇದೆ. ಬಲಮುರಿ ಒಡ್ಡಿನ ಬಳಿ ನೀರು ರಭಸವಾಗಿ ಹರಿಯುತ್ತಿದ್ದರೂ ಲೆಕ್ಕಿಸದೆ ಪ್ರವಾಸಿಗರನ್ನು ತೆಪ್ಪದಲ್ಲಿ ಕೂರಿಸಿಕೊಂಡು ವಿಹಾರ ಮಾಡಿಸುತ್ತಿರುವುದು ಅಚ್ಚರಿ ಮೂಡಿಸಿದೆ. ಬಲಮುರಿ ತಾಣ ಅತ್ಯಂತ ಸೂಕ್ಷ್ಮ ಪ್ರದೇಶ.



ಉದಯವಾಹಿನಿ ಚಿತ್ರ

ಇಲ್ಲಿ ನೀರಿಗೆ ಇಳಿಯುವ ಪ್ರವಾಸಿಗರ ಪೈಕಿ ವರ್ಷಕ್ಕೆ 10ರಿಂದ 15 ಮಂದಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಬಲಮುರಿ ತಾಣಕ್ಕೆ ಕೂಗಳತೆ ದೂರದಲ್ಲಿ, ಜುಲೈ 6ರಂದು ನದಿ ದಡದಲ್ಲಿ ನಿಂತು ಸೆಲ್ಫಿ ತೆಗೆದುಕೊಳ್ಳುತ್ತಿದ್ದ ಬೇಲೂರಿನ ಆಟೊ ಚಾಲಕ ಮಹೇಶ್ ಆಯ ತಪ್ಪಿ ನದಿಗೆ ಬಿದ್ದಿದ್ದು ಇದುವರೆಗೂ ಪತ್ತೆಯಾಗಿಲ್ಲ. ಪರಿಸ್ಥಿತಿ ಹೀಗಿದ್ದರೂ ಬಲಮುರಿಯಲ್ಲಿ ತೆಪ್ಪ ವಿಹಾರ ನಿರಾತಂಕವಾಗಿ ನಡೆದಿದೆ.

## ರಾಷ್ಟ್ರಕೂಟ ಚಕ್ರವರ್ತಿಗಳ ಸ್ಮರಣೆ, ಪ್ರಶಸ್ತಿ ಪ್ರದಾನ ಸಮಾರಂಭ

• ಉದಯವಾಹಿನಿ, ಮಂಡ್ಯ

ದಕ್ಷಿಣ ಭಾರತವನ್ನಾಳೀದ ಕದಂಬ, ಚಾಲುಕ್ಯ ಮತ್ತು ರಾಷ್ಟ್ರಕೂಟ ರಾಜಮನೆತನಗಳ ಕೊಡುಗೆ ಅವಿಸ್ಮರಣೀಯ ಎಂದು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಈ.ಸಿ. ನಿಂಗರಾಜ್ ಗೌಡ ಹೇಳಿದರು. ನಗರದ ಗಾಂಧಿಭವನದಲ್ಲಿ ಕದಂಬ ಸೈನ್ಯ ಕನ್ನಡ ಸಂಘಟನೆ ಆಯೋಜಿಸಿದ್ದ ಕದಂಬ-ಚಾಲುಕ್ಯ ರಾಷ್ಟ್ರಕೂಟ ಚಕ್ರವರ್ತಿಗಳ ಸ್ಮರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಕನ್ನಡಿಗರ ಸ್ವಾಭಿಮಾನದ ರಾಜಮನೆತನವಾದ ಕದಂಬರು ಕ್ರಿ.ಶ 4ನೇ ಶತಮಾನದಲ್ಲಿ ಬನವಾಸಿಯನ್ನು ಕೇಂದ್ರವಾಗಿಟ್ಟುಕೊಂಡು ಅಭೂತಪೂರ್ವ ಆಳ್ವಿಕೆ ನಡೆಸಿ ಕೊಡುಗೆ ನೀಡಿದರು.

ಚಾಲುಕ್ಯರು 6ನೇ ಶತಮಾನದಲ್ಲಿ ಬಾದಾಮಿಯನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಿದರು. ರಾಷ್ಟ್ರಕೂಟರು 8ನೇ ಶತಮಾನದಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರವನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಿದರು.

ಈ ಮೂರು ರಾಜವಂಶಗಳು ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವದ ಪಾತ್ರವಹಿಸಿವೆ ಎಂದು ನುಡಿದರು. ಇಂದಿನ ವಿದ್ಯಾವಂತರು ಇತಿಹಾಸವನ್ನು ಮರೆಯಬಾರದು, ಹಿಂದಿನ ರಾಜಮನೆತನಗಳನ್ನು ಸ್ಮರಿಸಿಕೊಳ್ಳುವ ಕೆಲಸ ಆಗುತ್ತಿರುವುದು ಶ್ಲಾಘನೀಯ. ಪ್ರಾಚೀನ ದಕ್ಷಿಣ ಭಾರತದ ಪ್ರಮುಖ ರಾಜವಂಶ ಕದಂಬರದ್ದಾಗಿದ್ದು, ಸುಮಾರು ಕ್ರಿ.ಶ. 4ನೇ ಶತಮಾನದಲ್ಲಿ ಮಯೂರವರ್ಮನು ಗುರು ಹಿರಿಯರ ಸಹಾಯದೊಂದಿಗೆ ಸಾಮ್ರಾಜ್ಯವನ್ನು ಸ್ಥಾಪಿಸಿದನು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಸಮಾಜಸೇವಕ ಡಾ.ಎನ್. ನರಸಿಂಹಮೂರ್ತಿ, ವಕೀಲರ ಸಂಘದ ಮಾಜಿ ರಾಜ್ಯ ಅಧ್ಯಕ್ಷ ವಿಶಾಲ್ ರಘು, ಸಮಾಜ ಸೇವಕ ನೋಕಿಯಾ ಎಂ.ಜೆ. ಯೋಗೇಶ್, ಜೂನಿಯರ್ ಮಾಲಾಶ್ರೀ ಖ್ಯಾತಿಯ ಕೆ.ಟಿ. ಸೌಭಾಗ್ಯಾ, ಎಎಸ್‌ಪಿ ಸಿ.ಈ. ತಿಮ್ಮಯ್ಯ, ಹೆಚ್ಚುವರಿ ಪೊಲೀಸ್ ಅಧಿಕಾರಿ ಎನ್.ಈ. ಗಂಗಾಧರಸ್ವಾಮಿ, ವಕೀಲೆ ಆಶಾಲತಾ, ನಗರಸಭಾ ಸದಸ್ಯ ಶೀಧರ್, ಮೋಹನ್ ಚಿಕ್ಕಮಂಡ್ಯ, ಅನುಪಮಾಗೌಡ ಪಾಲ್ಗೊಂಡಿದ್ದರು.



ಉದಯವಾಹಿನಿ ಚಿತ್ರ

### ಪೊಲೀಸರ ಪಾತ್ರ ಮಹತ್ತರ

ಕದಂಬ ಸೈನ್ಯ ಕನ್ನಡ ಸಂಘಟನೆ ರಾಜ್ಯ ಘಟಕದ ಅಧ್ಯಕ್ಷ ಬೇಕ್ರಿ ರಮೇಶ್ ಮಾತನಾಡಿ 'ಕಾವೇರಿ ಚಳವಳಿ ಮತ್ತು ಕನ್ನಡಪರ ಹೋರಾಟಗಳಲ್ಲಿ ಹೋರಾಟಗಾರರ ರಕ್ಷಣೆ ಮಾಡುವಲ್ಲಿ ಪೊಲೀಸ್ ಇಲಾಖೆ ತನ್ನ ಪಾತ್ರವನ್ನು ಅವಿಸ್ಮರಣೀಯವಾಗಿ ನಿರ್ವಹಿಸಿದೆ. ಸಾಕಷ್ಟು ಬಾರಿ ಹೋರಾಟಗಾರರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆದರೂ ತಾಳ್ಮೆಯಿಂದ ಕರ್ತವ್ಯ ನಿಭಾಯಿಸಿದ್ದಾರೆ' ಎಂದು ಸ್ಮರಿಸಿದರು. ಪೊಲೀಸ್ ಇಲಾಖೆಯ ಸಾಧಕರಿಗೆ 'ಕದಂಬ ಆರಕ್ಷಕ ಪ್ರಶಸ್ತಿ' ಸೈನಿಕರಿಗೆ 'ಕದಂಬ ವೀರಯೋಧರ ಪ್ರಶಸ್ತಿ' ಸೇರಿದಂತೆ ಸಮಾಜ ಸೇವಕರಿಗೆ ಕದಂಬ- ಚಾಲುಕ್ಯ - ರಾಷ್ಟ್ರಕೂಟ ಚಕ್ರವರ್ತಿಗಳ ಸ್ಮರಣೆಯ ಹೆಸರಿನ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

### ಶಾಲೆ ಪಕ್ಕದಲ್ಲೇ ಇದ್ದ ಬಾರ್ ಮುಚ್ಚಿಸಿದ ಮಹಿಳೆಯರು

• ಉದಯವಾಹಿನಿ, ಗೌರಿಬಿದನೂರು

ತಾಲ್ಲೂಕಿನ ತರಿದಾಳು ಗ್ರಾಮದಲ್ಲಿದ್ದ ಬಾರ್ ವಿರುದ್ಧ ಪ್ರತಿಭಟನೆ ನಡೆಸಿದ ಮಹಿಳೆಯರು ಬಾರ್ ಅನ್ನು ಮುಚ್ಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗ್ರಾಮದಲ್ಲಿರುವ ಎಂಎಸ್‌ಐಎಲ್ ಬಾರ್ ಸರ್ಕಾರಿ ಶಾಲೆ ಪಕ್ಕದಲ್ಲೇ ಇದೆ. ಇದರಿಂದ ಪ್ರತಿದಿನ ಇದೇ ರಸ್ತೆಯಲ್ಲಿ ಓಡಾಡುವ ಶಾಲಾ ಮಕ್ಕಳು, ಮಹಿಳೆಯರು, ಮತ್ತು ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿದೆ. ಕೆಲವು ಕಿಡಿಗೇಡಿಗಳು ಬಾರ್‌ನಲ್ಲಿ ಮದ್ಯಪಾನ ಮಾಡಿ ಮಹಿಳೆಯರು, ವಿದ್ಯಾರ್ಥಿಗ ಜೊತೆ ಅಸಭ್ಯವಾಗಿ ವರ್ತಿಸುತ್ತಾರೆ ಎಂದು ಪ್ರತಿಭಟನಕಾರರು ದೂರಿದರು.

ಕುಡುಕರ ಕಿರಿಕಿರಿಯಿಂದಾಗಿ ವಿದ್ಯಾರ್ಥಿನಿಯರು ಶಾಲೆಯಿಂದ ಮನೆಗೆ ಬರಲು ಭಯಪಡುತ್ತಿದ್ದಾರೆ. ವಿದ್ಯಾರ್ಥಿನಿಯರು ಮನೆಯವರಿಗೆ ಕರೆ ಮಾಡಿ ತಮ್ಮನ್ನು ಮನೆಗೆ ಕರೆದೊಯ್ಯಲು ಕೇಳಿಕೊಳ್ಳುವಂತಾಗಿದೆ. ದೂರು ವರ್ಷಗಳಲ್ಲಿ ಕುಡಿದು ಸಣ್ಣ ವಯಸ್ಸಿನ 20ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಈ ಕುರಿತು ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಮಹಿಳಾ ಪ್ರತಿಭಟನಕಾರರು ದೂರಿದರು.

## ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸಂಸದ ಭೇಟಿ

• ಉದಯವಾಹಿನಿ, ಬಂಗಾರಪೇಟೆ

ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ರಸ್ತೆ ಇಲ್ಲದೆ ರೈಲ್ವೆ ಹಳಿ ದಾಟಿಕೊಂಡು ಹೋಗುವ ಸ್ಥಿತಿ ಇದೆ. ಇದಕ್ಕೆ ಶಾಶ್ವತವಾಗಿ ರಸ್ತೆ ನಿರ್ಮಾಣ ಮಾಡಿಕೊಡಲು ಸಂಸದ ಎಂ.ಮಲ್ಲೇಶಬಾಬು ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿ ಸಮಸ್ಯೆ ಪರಿಹರಿಸುವ ಬಗ್ಗೆ ಭರವಸೆ ನೀಡಿದರು. ತಾಲ್ಲೂಕಿನ ಬೀರಂಡಹಳ್ಳಿ ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಕಳೆದ ವಾರ ಜಿಲ್ಲಾಧಿಕಾರಿ ಡಾ.ಎಂ. ಆರ್.ರವಿ ಭೇಟಿ ನೀಡಿದಾಗ ರಸ್ತೆ ಇಲ್ಲದ ಕಾರಣ ರೈಲ್ವೆ ಹಳಿ ದಾಟಿಕೊಂಡು ಹೋಗಬೇಕಾಯಿತು. ಇದರಿಂದ ವಿಚಲಿತರಾದ ಜಿಲ್ಲಾಧಿಕಾರಿ ಕೂಡಲೇ ಸ್ಥಳ ಪರಿಶೀಲನೆ ಮಾಡಿ ರಸ್ತೆ ನಿರ್ಮಾಣಕ್ಕೆ ಮುಂದಾಗಿ ಎಂದು ತಹಶೀಲ್ದಾರ್ ವೆಂಕಟೇಶಪ್ಪ ಅವರಿಗೆ ಸೂಚಿಸಿದ್ದರು.



ಉದಯವಾಹಿನಿ ಚಿತ್ರ

ನಿರಾಶ್ರಿತರ ಕೇಂದ್ರಕ್ಕೆ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ ಸ್ಥಳವಿಲ್ಲದ ಕಾರಣ ಪಕ್ಕದಲ್ಲೇ ಇರುವ ಖಾಸಗಿ ಜಮೀನಿನ ಮಾಲೀಕ ಇಂದರ್ ಸೇರ್ ಎಂಬುವರನ್ನು ಸಂಪರ್ಕಿಸಿ ನಿರಾಶ್ರಿತರ ಕೇಂದ್ರಕ್ಕೆ ರಸ್ತೆ ನಿರ್ಮಾಣ ಮಾಡಲು 10 ಅಡಿ ಬಿಟ್ಟು ಕೊಡಲು ಚರ್ಚಿಸಿದಾಗ ಅವರು ಸಂಸದರ ಮನವಿಗೆ ಜಾಗ ನೀಡಲು ಸಮ್ಮತಿಸಿದರು. ಈಗಾಗಲೇ ಬೀರಂಡಹಳ್ಳಿ ರೈಲ್ವೆ ಕೆಳ ಸೇತುವೆಯಿಂದ ಬಂದು ಖಾಸಗಿ ವ್ಯಕ್ತಿ ಇಂದರ್ ಸೇರ್ ಅವರ ಜಮೀನು ಮೂಲಕ ನಿರಾಶ್ರಿತರ ಕೇಂದ್ರಕ್ಕೆ ಹೋಗಲು ರಸ್ತೆ ನಿರ್ಮಾಣಕ್ಕೆ ರೈಲ್ವೆ ಇಲಾಖೆ ಸಹ ತನ್ನ ಜಾಗ ನೀಡಲು ಸಮ್ಮತಿ ಸೂಚಿಸಿದರಿಂದ ಸಮಸ್ಯೆ ಯಾವುದೇ ಗಂಭೀರ ಹಂತಕ್ಕೆ ಹೋಗದೆ ಸುಲಭವಾಗಿ ಬಗೆಹರಿದಿದೆ ಎಂದು ಸಂಸದ ಮಲ್ಲೇಶ್ ಬಾಬು ತಿಳಿಸಿದರು.

ಬೆಂಗಳೂರು-ಚೆನ್ನೈ ಕಾರಿಡಾರ್ ರಸ್ತೆಯಲ್ಲಿ ಬರುವ ಬಂಗಾರಪೇಟೆ ಹಾಗೂ ಕೋಲಾರ ವಾಹನ ಸವಾರರಿಗೆ ಬೀರಂಡಹಳ್ಳಿ ಗೇಟ್ ಬಳಿ ಹೊರ ಹೋಗಲು ಹಾಗೂ ರಸ್ತೆಗೆ ಸೇರಲು ಸಂಪರ್ಕವಿಲ್ಲದೆ ಕೆಜಿಎಫ್ ನ ಕೃಷ್ಣಾವರಂ ಗ್ರಾಮದ ಬಳಿ ಮಾತ್ರ ಹೊರ ಬರಲು ಹೋಗಲು ಅವಕಾಶ ನೀಡಲಾಗಿದೆ. ಇದನ್ನು ಹೆದ್ದಾರಿ ಅಧಿಕಾರಿಗಳ ಗಮನಕ್ಕೆ ತಂದು ಬೀರಂಡಹಳ್ಳಿ ಬಳಿ ರಸ್ತೆಗೆ ಸೇರಲು ಹಾಗೂ ಹೊರ ಬರಲು ಅವಕಾಶ ನೀಡುವಂತೆ ಮನವಿ ಮಾಡಲಾಗಿದೆ. ಇದಕ್ಕೆ ಸಮ್ಮತಿ ನೀಡಿದ್ದಾರೆ. ಅಂತಿಮವಾಗಿ ಕೇಂದ್ರ ಸಚಿವ ಗಡ್ಕರಿ ಜತೆ ಚರ್ಚಿಸಿ ಬಂಗಾರಪೇಟೆ ಜನರಿಗೆ ಈ ರಸ್ತೆಯಲ್ಲಿ ಸುಲಭ ಪ್ರಯಾಣಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

## ಚುನಾವಣೆ ವೇಳೆ ರಾಜಕೀಯ ಮಾಡೋಣ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಶ್ರೀನಿವಾಸಪುರ

ಕ್ಷೇತ್ರದಲ್ಲಿ ಐದು ಬಾರಿ ಗೆದ್ದಿರುವ ಹಿರಿಯ ಶಾಸಕ ಜಿ.ಕೆ. ವೆಂಕಟಶಿವಾರೆಡ್ಡಿ ಬಗ್ಗೆ ಕಾಂಗ್ರೆಸ್‌ನ ಕೆಲಸ ಮುಖಂಡರು ಅವಹೇಳನಕಾರಿಯಾಗಿ ಮಾತನಾಡಿದ್ದು, ಇದು ಯಾರಿಗೂ ಶೋಭೆ ತರಲ್ಲ. ಯಾವುದೇ ವಿಚಾರಗಳಿದ್ದರೆ ಆರೋಗ್ಯಕರ ಚರ್ಚೆ ನಡೆಯಬೇಕೇ ಹೊರತು ವೈಯಕ್ತಿಕವಾಗಿ ಅವಹೇಳನ ಮಾಡುವುದು ಸರಿ ಅಲ್ಲ' ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ತೂಪಲ್ಲಿ ಆರ್.ನಾರಾಯಣಸ್ವಾಮಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈಚೆಗೆ ಕಾಂಗ್ರೆಸ್‌ನ ಕೆಲ ಮುಖಂಡರು ಸುದ್ದಿಗೋಷ್ಠಿಯಲ್ಲಿ ಶಾಸಕರನ್ನು ಅವಹೇಳನ ಮಾಡಿರುವುದು ಖಂಡನೀಯ ವೆಂಕಟಶಿವಾರೆಡ್ಡಿ ಜೆಡಿಎಸ್ ಪಕ್ಷದಿಂದ ಆಯ್ಕೆಯಾಗಿದ್ದು ರಾಜ್ಯದಲ್ಲಿ ಈಗ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ. ಹೆಚ್ಚಿನ ಅನುದಾನ ತರಲು ಸಾದ್ಯವಾಗದಿದ್ದರೂ ತಮ್ಮ ಶಕ್ತಿ ಮೀರಿ ತಾಲ್ಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ' ಎಂದರು. ತಾಲ್ಲೂಕಿನ ಪ್ರಮುಖ ರಸ್ತೆಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಯಾವುದೇ ಗುತ್ತಿಗೆದಾರರಿಂದ ಅಥವಾ ಸರ್ಕಾರಿ ಅಧಿಕಾರಿಗಳಿಂದ ಕಮಿಷನ್ ಪಡೆಯುತ್ತಿರುವ ದಾಖಲೆಗಳಿದ್ದರೆ ಬಹಿರಂಗಪಡಿಸಲಿ. ಅದನ್ನು ಬಿಟ್ಟು ಸುಖಾಸುಮ್ಮನೆ ಆರೋಪ ಮಾಡುವುದು ಶೋಭೆ ತರುವುದಿಲ್ಲ ಎಂದು ಹೇಳಿದರು.

ಹಿಂದಿನ ಶಾಸಕರು ತಾಲ್ಲೂಕಿನಲ್ಲಿ ಕ್ಯಾನ್ಸರ್ ಆಸ್ಪತ್ರೆ ಮತ್ತು ಹೈಟೆಕ್ ಆಸ್ಪತ್ರೆ ಮಾಡಲು ಮುಂದಾದಾಗ ಜೆಡಿಎಸ್ ಪಕ್ಷದ ನಾಯಕರು ನ್ಯಾಯಾಲಯ ಮೊರೆ ಹೋಗಿದ್ದಾರೆ ಎಂಬ ಆರೋಪ ಸತ್ಯಕ್ಕೆ ದೂರವಾಗಿದೆ. ಅಂತಹ ಯಾವುದೇ ದಾಖಲೆಗಳಿದ್ದರೆ ಬಹಿರಂಗಪಡಿಸಲಿ ಎಂದು ಸವಾಲೆಸೆದರು.

ತಾಲ್ಲೂಕಿನ ಜನತೆ ಎರಡೂ ಪಕ್ಷದ ನಾಯಕರಿಗೆ ಸಮಾನ ಅವಕಾಶ ನೀಡಿ ಗೆಲ್ಲಿಸಿಕೊಂಡು ಬಂದಿದ್ದಾರೆ. ಎಲ್ಲರೂ ಒಟ್ಟಾಗಿ ತಾಲ್ಲೂಕಿನ ಅಭಿವೃದ್ಧಿಗೆ ಶ್ರಮಿಸೋಣ. ಚುನಾವಣಾ ಸಮಯದಲ್ಲಿ ರಾಜಕೀಯ ಮಾಡೋಣ ಎಂದರು.

> ತಾಲ್ಲೂಕಿನಲ್ಲಿ ಬಡವರಿಗೆ ಮತ್ತು ದಲಿತರಿಗಾಗಿ 300ಕ್ಕೂ ಹೆಚ್ಚು ಕೊಳವೆ ಬಾವಿ ಕೊರೆಯಿಸಿ ಆರ್ಥಿಕವಾಗಿ ಸಬಲರನ್ನಾಗಿ ಮಾಡಲಾಗುತ್ತಿದೆ. ಜೊತೆಗೆ ಕೈಗಾರಿಕಾ ವಲಯ ಸ್ಥಾಪನೆಗೆ ಶ್ರಮಿಸುತ್ತಿದ್ದಾರೆ. ಮಾವಿನ ಬೆಲೆ ಕುಸಿತ ಉಂಟಾದಾಗ ಶಾಸಕರು ಮುಖ್ಯಮಂತ್ರಿ, ಸಚಿವರಿಗೆ ನಿರಂತರವಾಗಿ ಮನವಿ ಮಾಡಿದರೂ ಯಾರೂ ಗಮನಹರಿಸಲಿಲ್ಲ. ಆಗ ವಿಧಾನಸೌಧ ಬಳಿ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ಮಾಡಿದರು. ಕುಮಾರಸ್ವಾಮಿ ಕೇಂದ್ರ ಕೃಷಿ ಮಂತ್ರಿಗೆ ಪತ್ರ ಬರೆದು ಮಾವು ಬೆಳೆಗಾರರ ನೆರವಿಗೆ ಬರುವಂತೆ ಒತ್ತಡ ಹಾಕಿದಾಗ ಸ್ಪಂದನೆ ಸಿಕ್ಕಿತು. ಕೇಂದ್ರ ಸರ್ಕಾರ ರೈತರ ನೆರವಿಗೆ ಧಾವಿಸಿದರೂ ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆ ಮುಂದುವರಿಯಿತು' ಎಂದು ಟೀಕಿಸಿದರು.

## ಮುನಿರಾಜು ವಿರುದ್ಧ ಪ್ರಕರಣ ದಾಖಲಿಸಿದ ಶಾಸಕ ಸುಬ್ಬಾರೆಡ್ಡಿ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಬಿಜೆಪಿ ರಾಜ್ಯ ಕಾರ್ಯದರ್ಶಿ ಹಾಗೂ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಮುಖಂಡ ಸಿ.ಮುನಿರಾಜು, ನನ್ನ ವಿರುದ್ಧ ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಳಂಕ ತರಲು ಪ್ರಯತ್ನಿಸುತ್ತಿದ್ದಾರೆ' ಎಂದು ಆರೋಪಿಸಿ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಬಾಗೇಪಲ್ಲಿ ಠಾಣೆಗೆ ಶುಕ್ರವಾರ ದೂರು ನೀಡಿದ್ದಾರೆ. ಈ ದೂರು ಆಧರಿಸಿ ಮುನಿರಾಜು ವಿರುದ್ಧ ಪ್ರಕರಣ ದಾಖಲಾಗಿದೆ. ವಿದೇಶಗಳಲ್ಲಿ ಸುಬ್ಬಾರೆಡ್ಡಿ ಅವರು ಆಸ್ತಿ ಹೊಂದಿದ್ದಾರೆ ಎಂದು ಇತ್ತೀಚೆಗೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಅವರ ನಿವಾಸ ಹಾಗೂ ಕಚೇರಿಯ ಮೇಲೆ ದಾಳಿ ನಡೆಸಿದ್ದರು. ಈ ವಿಚಾರವಾಗಿ ಮುನಿರಾಜು ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ' ಎಂದು ಸುಬ್ಬಾರೆಡ್ಡಿ ಆರೋಪಿಸಿದ್ದಾರೆ. ಜು.5ರಂದು ನನ್ನ ಸ್ನೇಹಿತ ಕೆಲವು ದಾಖಲೆಗಳನ್ನು ವಾಟ್ಸ್ ಆಯಪ್ ಮೂಲಕ ನನಗೆ ಕಳುಹಿಸಿದ್ದರು. ಆ ದಾಖಲೆಗಳನ್ನು ಪರಿಶೀಲಿಸಿದಾಗ ನನ್ನ ಹೆಸರು ಮತ್ತು ನನ್ನ ಪತ್ನಿ ಹೆಸರು ಉಲ್ಲೇಖವಾಗಿತ್ತು. ಹಾಂಕಾಂಗ್, ಮಲೇಷ್ಯಾ ಮತ್ತಿತರ ದೇಶಗಳ ದಾಖಲೆಗಳೂ ಅದರಲ್ಲಿ ಇದ್ದವು. ಜರ್ಮನಿಯಲ್ಲಿ ನನ್ನ ಹೆಸರಿನಲ್ಲಿ ವಾಹನ ಖರೀದಿಸಿ ನೋಂದಾಯಿಸಿರುವುದು, ಸಿಂಗಾಪುರದಲ್ಲಿ ಬ್ಯಾಂಕ್ ಖಾತೆ ಹೊಂದಿದ್ದು ಆ ಖಾತೆಯ ಮೂಲಕ ಹಣ ವರ್ಗಾವಣೆ ಮಾಡಲಾಗಿದೆ ಎನ್ನುವ ರೀತಿಯಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ.

### ಲೋಕ್ ಅದಾಲತ್: 1,167 ಪ್ರಕರಣ ಇತ್ಯರ್ಥ

• ಉದಯವಾಹಿನಿ, ಗುಬ್ಬಿ

ಪಟ್ಟಣದ ನ್ಯಾಯಾಲಯದಲ್ಲಿ 7,170 ಪ್ರಕರಣಗಳು ಬಾಕಿ ಇದ್ದು, ಲೋಕ್ ಅದಾಲತ್‌ನಲ್ಲಿ 1,417 ಪ್ರಕರಣ ತೆಗೆದುಕೊಳ್ಳಲಾಗಿತ್ತು. ಅವುಗಳಲ್ಲಿ 1,167 ಪ್ರಕರಣಗಳನ್ನು ಇತ್ಯರ್ಥಪಡಿಸುವ ಮೂಲಕ ಜಿಲ್ಲೆಯಲ್ಲಿಯೇ ಉತ್ತಮ ಸಾಧನೆ ಮಾಡಲಾಗಿದೆ ಎಂದು ನ್ಯಾಯಾಧೀಶ ಅನುಪಮ ಡಿ. ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸಿವಿಲ್ ವ್ಯಾಜ್ಯ, ಕೌಟುಂಬಿಕ ದೌರ್ಜನ್ಯ, ವಿವಾಹ ವಿಚ್ಛೇದನ ಪ್ರಕರಣ ಒಳಗೊಂಡಂತೆ ಸಣ್ಣ ಪುಟ್ಟ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಮೂಲಕ ಕಕ್ಷಿದಾರರಿಗೆ ನೆಮ್ಮದಿ ನೀಡಲಾಗಿದೆ. ಬ್ಯಾಂಕ್‌ಗಳಲ್ಲಿ ಸುಸ್ತಿಯಾಗಿದ್ದ ಹಣವನ್ನು ಕಕ್ಷಿದಾರರಿಂದ ಕಟ್ಟಿಸುವ ಮೂಲಕ 2.5 ಕೋಟಿ ವಸೂಲಾತಿಯಾಗಿದೆ ಎಂದು ಹೇಳಿದರು. ನ್ಯಾಯಾಧೀಶ ಪೂರ್ಣಿಮಾ ಕೆ. ಯಾದವ್ ಮಾತನಾಡಿ, ವಿಚ್ಛೇದನಕ್ಕೆ ಮುಂದಾಗಿದ್ದ ದಂಪತಿಗಳ ಮನವೊಲಿಸಿ ಒಂದುಗೂಡಿಸಲಾಗಿದೆ ಎಂದರು. ನ್ಯಾಯಾಧೀಶರಾದ ಕಿರಣ್ ಎಸ್.ಪಿ., ಮೇಧ, ವಕೀಲರು, ವಕೀಲರ ಸಂಘದ ಅಧ್ಯಕ್ಷ, ಪದಾಧಿಕಾರಿಗಳು, ನ್ಯಾಯಾಲಯದ ಸಿಬ್ಬಂದಿ ಹಾಜರಿದ್ದರು.

## ಎನ್‌ಇಎಸ್ ಬಡಾವಣೆಗೆ ಶುಕ್ರದೆಸೆ

### ತಾಲ್ಲೂಕು ಕಚೇರಿ ನಿರ್ಮಾಣವಾಗಲಿ ಎಂಬುದು ರೈತ ಸಂಘದವರ ಒತ್ತಾಯ

• ಉದಯವಾಹಿನಿ, ಮಾಗಡಿ

ಪಟ್ಟಣದ ಕೂಗುಳತೆ ದೂರದಲ್ಲಿರುವ ಎನ್‌ಇಎಸ್ ವೃತ್ತದ ಬಳಿ ಒಂದೇ ಸೂರಿನಡಿ ತಾಲ್ಲೂಕು ಕಚೇರಿ, ಗುರುಭವನ, ಬಿಇಒ ಕಚೇರಿ, ಸಿಆರ್‌ಪಿ, ಬಿಆರ್‌ಪಿ ಕಚೇರಿ, ಬಾಬು ಜಗಜೀವನ ರಾಂ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ಮತ್ತು ಡಿಜಿಟಲ್ ಗ್ರಂಥಾಲಯ ನಿರ್ಮಿಸಲು ಸ್ಥಳ ನಿಗದಿಯಾಗಿದ್ದು, ಅನುದಾನ ಸಹ ಬಿಡುಗಡೆಯಾಗಿದೆ. ಎನ್‌ಇಎಸ್ ವೃತ್ತವು ಸರ್ಕಾರಿ ಕಟ್ಟಡದ ಜೊತೆಗೆ ಹಲವು ಚಟುವಟಿಕಾ ಕೇಂದ್ರವಾಗಲಿದೆ.

ಪ್ರಥಮ ದರ್ಜೆ ಕಾಲೇಜು ಜೂನಿಯರ್ ಕಾಲೇಜು, ಜೂನಿಯರ್ ಕಾಲೇಜು ಮೈದಾನ, ಬಾಲಕೃಷ್ಣ ಉದ್ಯಾನವನ, ಸರ್ಕಾರಿ ಬಾಲಕಿಯರ ಮತ್ತು ಬಾಲಕರ ಹಾಸ್ಟೆಲ್, ಕೆಂಪೇಗೌಡ ಶಾಲೆ, ಸರ್ವೋದಯ ಶಾಲೆ, ಚಿತ್ರಮಂದಿರ, ಸಭಾಂಗಣ, ಪ್ರವಾಸಿ ಮಂದಿರ ಹೀಗೆ ಹಲವು ಚಟುವಟಿಕೆಗಳ ಕೇಂದ್ರವಾಗಿ ಮಾರ್ಪಡಲಿದೆ.

**ತಾಲ್ಲೂಕು ಕಚೇರಿ ಸ್ಥಳಾಂತರಕ್ಕೆ ವಿರೋಧ:** ಶಾಸಕ ಎಚ್.ಸಿ.ಬಾಲಕೃಷ್ಣ ಅವರು ತಾಲ್ಲೂಕು ಕಚೇರಿಯನ್ನು ಎನ್‌ಇಎಸ್ ವೃತ್ತಕ್ಕೆ ಸ್ಥಳಾಂತರಿಸಿ, ಆ ಜಾಗದಲ್ಲಿ ಸರ್ಕಾರಿ ಆಸ್ಪತ್ರೆ ನಿರ್ಮಿಸಲು ಮುಂದಾಗಿದ್ದಾರೆ. ಇದಕ್ಕೆ ಮಾಜಿ ಶಾಸಕ ಎ.ಮಂಜುನಾಥ್, ರೈತ ಸಂಘದವರು ವಿರೋಧ ವ್ಯಕ್ತಪಡಿಸಿದ್ದಾರೆ. ಈಗಿರುವ ತಾಲ್ಲೂಕು ಕಚೇರಿ ಪಟ್ಟಣದ ಹೃದಯ ಭಾಗದಲ್ಲಿದ್ದು, ರೈತರಿಗೆ ಅನುಕೂಲವಾಗಲಿದೆ. ಇದು ಎನ್‌ಇಎಸ್ ಬಡಾವಣೆಗೆ ಸ್ಥಳಾಂತರಗೊಂಡರೆ ಪ್ರತಿನಿತ್ಯ ಆಟೋಗೆ ಹಣ ವ್ಯಯಮಾಡಬೇಕಾಗುತ್ತದೆ.



ಉದಯವಾಹಿನಿ ಚಿತ್ರ

> ತಾಲ್ಲೂಕು ಕಚೇರಿ ಪ್ರಸ್ತುತ ಮಾಗಡಿ-ಬೆಂಗಳೂರು ಮುಖ್ಯ ರಸ್ತೆಯಲ್ಲಿದ್ದು ಸಾರ್ವಜನಿಕರಿಗೆ ಅನುಕೂಲವಾಗುತ್ತಿದೆ. ಈಗ ತಾಲ್ಲೂಕು ಕಚೇರಿಯನ್ನು ಎನ್‌ಇಎಸ್ ಬಡಾವಣೆಗೆ ಸ್ಥಳಾಂತರಿಸಿದರೆ ರೈತರಿಗೆ ತೊಂದರೆಯಾಗಲಿದೆ. ಈ ಬಗ್ಗೆ ಶಾಸಕರು ಮತ್ತೊಮ್ಮೆ ಯೋಚಿಸಿ ನಿರ್ಧಾರ ಕೈಗೊಳ್ಳಬೇಕಿದೆ.
>
> – ಹೊಸಪಾಳ್ಯ ಲೋಕೇಶ್, ತಾಲ್ಲೂಕು ರೈತ ಸಂಘದ ಅಧ್ಯಕ್ಷರು

ಹಾಗಾಗಿ ಇರುವ ಜಾಗದಲ್ಲೇ ಹೊಸ ತಾಲ್ಲೂಕು ಕಚೇರಿ ನಿರ್ಮಾಣವಾಗಲಿ ಎಂಬುದು ರೈತ ಸಂಘದವರ ಒತ್ತಾಯವಾಗಿದೆ.

ತಾಲ್ಲೂಕು ಕಚೇರಿ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದು, ಕಟ್ಟಡ ನೆಲಸಮ ಮಾಡುವ ಸಮಯದಲ್ಲಿ ತಾತ್ಕಾಲಿಕವಾಗಿ ಪಟ್ಟಣದ ಡೂಮ್‌ಲೈಟ್ ವೃತ್ತದ ಬಳಿ ಇರುವ ಡಾ. ಶಿವಕುಮಾರ ಸ್ವಾಮೀಜಿ ಸಭಾಂಗಣಕ್ಕೆ ಸ್ಥಳಾಂತರಿಸಲು ಸೂಚಿಸಲಾಗಿದೆ.

> ಶಾಸಕ ಎಚ್.ಸಿ.ಬಾಲಕೃಷ್ಣ ಅವರು ತಾಲ್ಲೂಕು ಕಚೇರಿ ಸ್ಥಳಾಂತರ ಮಾಡಲು ಸೂಚನೆ ನೀಡಿದ್ದು ಕಟ್ಟಡ ನೆಲಸಮ ಮಾಡುವ ಸಮಯದಲ್ಲಿ ತಾತ್ಕಾಲಿಕವಾಗಿ ಕಚೇರಿಯನ್ನು ಡಾ.ಶಿವಕುಮಾರ ಸ್ವಾಮೀಜಿ ಸಭಾಂಗಣಕ್ಕೆ ಸ್ಥಳಾಂತರಿಸಲಾಗುವುದು.
>
> – ಶರತ್‌ಕುಮಾರ್, ತಹಶೀಲ್ದಾರ್ ಮಾಗಡಿ

> ಮಾಗಡಿ ಪಟ್ಟಣದ ಎನ್ ಇಎಸ್ ಬಡಾವಣೆಯ ಒಂದೇ ಸೂರಿನಡಿ ಎಲ್ಲಾ ಸರ್ಕಾರಿ ಕಟ್ಟಡಗಳು ಬರುವಂತೆ ಮಾಡಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಜೊತೆಗೆ ಆರು ಅಡಿ ಎತ್ತರದ ಗಾಂಧಿ ಪ್ರತಿಮೆ ನಿರ್ಮಾಣ ಮಾಡಲಾಗುವುದು.
>
> – ಎಚ್.ಸಿ.ಬಾಲಕೃಷ್ಣ, ಮಾಗಡಿ ಶಾಸಕ

## ಅಕ್ರಮ ಗಣಿಗಾರಿಕೆ; ಟ್ರ್ಯಾಕ್ಟರ್, ಯಂತ್ರ ವಶಕ್ಕೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಡಿಬಂಡೆ

ತಾಲ್ಲೂಕಿನ ಸೋಮೇನಹಳ್ಳಿ ಹೋಬಳಿಯ ಪೋಲಂಪಲ್ಲಿ ಕಂದಾಯ ವೃತ್ತದಲ್ಲಿರುವ ಹೊಸಚಿಗುರು ಉನ್ನತಿ ಎಸ್ಟೇಟ್‌ನಲ್ಲಿ ಪರವಾನಗಿ ಪಡೆಯದೆ ಅಕ್ರಮವಾಗಿ ಜಿಲೆಟಿನ್ ಬಳಸಿ ಖರಾಬು ಜಮೀನಿನಲ್ಲಿದ್ದ ಬಂಡೆಗಳನ್ನು ಸ್ಫೋಟಿಸಲಾಗಿದೆ.

ಸ್ಥಳಕ್ಕೆ ಗುಡಿಬಂಡೆ ಪೊಲೀಸರು ಭೇಟಿ ನೀಡಿದ್ದು ಟ್ರ್ಯಾಕ್ಟರ್ ಮತ್ತು ನಿರ್ಮಾಣ ಯಂತ್ರ ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡಿದ್ದಾರೆ. 'ಸದಾಶಿವನಹಳ್ಳಿ ಗ್ರಾಮದ ಬಳಿಯ ಗಡ್ಡನಾಗನದಿನ್ನೆ ಗ್ರಾಮದ ಸರ್ವೆ ನಂ. 5/8ರ ಹೊಸಚಿಗುರು ಎಸ್ಟೇಟ್‌ನಲ್ಲಿನ ಕಲ್ಲು ಬಂಡೆ ಪ್ರದೇಶವನ್ನು ಪರವಾನಗಿ ಇಲ್ಲದೆ ಜಿಲೆಟಿನ್ ಸಿಡಿಮದ್ದು ಹಾಗೂ ಸ್ಫೋಟಕ ಸಾಮಗ್ರಿಗಳನ್ನು ಬಳಸಿ ಸ್ಫೋಟಿಸುತ್ತಿದ್ದಾರೆ' ಎನ್ನುವ ಮಾಹಿತಿ ಜುಲೈ 16 ರಂದು ಗುಡಿಬಂಡೆ ಪೊಲೀಸರಿಗೆ ದೊರೆತಿತ್ತು. ಸಬ್‌ಇನ್‌ಸ್ಪೆಕ್ಟರ್ ಗಣೇಶ್ ಹಾಗೂ ಸಿಬ್ಬಂದಿ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿದ್ದರು. ಪೊಲೀಸ್ ಜೀಪ್ ಕಂಡು ಕಲ್ಲು ಬಂಡೆ ಸ್ಫೋಟಿಸುತ್ತಿದ್ದ ಕಾರ್ಮಿಕರು, ವಾಹನ ಚಾಲಕರು ಸ್ಥಳದಿಂದ ಪರಾರಿಯಾದರು. ಕಲ್ಲುಬಂಡೆ ಕೊರೆದು ಅದರಲ್ಲಿ ಸಿಡಿಮದ್ದು ತುಂಬಿಸಿ ಸ್ಫೋಟಿಸಿರುವುದು ಕಂಡು ಬಂದಿದೆ. ಅಕ್ರಮವಾಗಿ ಕಲ್ಲು ಬಂಡೆ ಒಡೆಯಲು ಉಪಯೋಗಿಸಿರುವ ಯಂತ್ರಗಳು ಮತ್ತು ಟ್ರ್ಯಾಕ್ಟರ್, ಕಂಪ್ರೆಷರ್ ವಶಕ್ಕೆ ಪಡೆಯಲಾಗಿದೆ. ಹೊಸ ಚಿಗುರು ಉನ್ನತಿ ಮಾಲೀಕರು ಮತ್ತು ಓಡಿ ಹೋದವರ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಹ ದಾಖಲಾಗಿದೆ.ಈ ಹಿಂದೆ ಹಿರೇನಾಗವಲ್ಲಿ ಬೆಟ್ಟದಲ್ಲಿ ಅಕ್ರಮವಾಗಿ ಜಿಲೆಟಿನ್ ಸ್ಫೋಟಿಸಿ ನಾಲ್ವರು ಮೃತಪಟ್ಟಿದ್ದರು. ಅಂದು ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕರು, ಸಚಿವರು ಸೇರಿದಂತೆ ಉನ್ನತ ಅಧಿಕಾರಿಗಳು ಇಲ್ಲಿಗೆ ಭೇಟಿ ನೀಡಿದ್ದರು.

### ಶಾಲೆಯಿಂದ ಹೊರಗುಳಿದಿದ್ದ 56 ಮಕ್ಕಳು ಶಾಲೆಗೆ ಸೇರ್ಪಡೆ

• ಉದಯವಾಹಿನಿ, ತಿಪಟೂರು

ಶಾಲೆಗೆ ಹೋಗದೆ ಅಂಗಡಿ ಮುಂಗಟ್ಟು ಹಾಗೂ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದ 56 ಮಕ್ಕಳನ್ನು ಶಿಕ್ಷಣ ಇಲಾಖೆ ನೇತೃತ್ವದಲ್ಲಿ ವಿವಿಧ ಇಲಾಖೆಗಳ ಸಹಯೋಗದಲ್ಲಿ ಮರಳಿ ಶಾಲೆಗೆ ಸೇರಿಸಲಾಯಿತು. ಬಾಲಕಾರ್ಮಿಕ ಹಾಗೂ ಒಬ್ಬ ಕಿಶೋರ ಕಾರ್ಮಿಕನಾಗಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ವಿದ್ಯಾರ್ಥಿಯನ್ನು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ದಾಖಲು ಮಾಡಲಾಗಿದೆ. ಗ್ರಾಮಾಂತರ ಪ್ರದೇಶಗಳ ತೆಂಗಿನ ಕಾಯಿ ಕಾರ್ಖಾನೆಗಳಲ್ಲಿ ಬಿಹಾರದಿಂದ ವಲಸೆ ಬಂದ ಕಾರ್ಮಿಕ ಪೋಷಕರ ಜೊತೆ ಮಾತನಾಡಿ ಹತ್ತಿರದ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ದಾಖಲು ಮಾಡಲಾಗಿದೆ.

ತಾಲ್ಲೂಕಿನ ಆಲೂರು ಪ್ರಾಥಮಿಕ ಶಾಲೆಗೆ 9 ಮಕ್ಕಳು, ಹರಿಸಮುದ್ರ ಸರ್ಕಾರಿ ಶಾಲೆಗೆ ಮೂವರು, ವಿರೂಪಾಕ್ಷಪುರ ಶಾಲೆಗೆ ಒಬ್ಬರು, ಟಿ.ಎಮ್.ಮಂಜುನಾಥ ನಗರ ಶಾಲೆಗೆ ಹತ್ತು, ಭೈರನಾಯಕನಹಳ್ಳಿ ಸರ್ಕಾರಿ ಶಾಲೆಗೆ ಎಂಟು, ಭುವನೇಶ್ವರಿ ಮಣ್ಣೆಕೆರೆ ಪ್ರೌಢಶಾಲೆಗೆ ಒಬ್ಬರು, ಹುಚ್ಚನಹಟ್ಟಿ ಸರ್ಕಾರಿ ಶಾಲೆಗೆ 22 ಮಕ್ಕಳನ್ನು ದಾಖಲಿಸಲಾಗಿದೆ.

ವಿಶೇಷ ಪ್ರಕರಣಗಳಲ್ಲಿ ದಾಖಲಾದ ಮಕ್ಕಳಿಗೆ ಸರ್ಕಾರದ ಪಠ್ಯಪುಸ್ತಕ ಸಮವಸ್ತ್ರ, ಕ್ಷೀರಾ ಭಾಗ್ಯ, ಯೋಜನೆ, ಮಧ್ಯಾಹ್ನ ಉಪಹಾರ ವ್ಯವಸ್ಥೆಯನ್ನು ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಹಿಂದಿನ ಭಾಷೆಯ ಬೋಧನೆಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ತಾ.ಪಂ ಕಾರ್ಯನಿರ್ವಹಣಾಧಿಕಾರಿ ತಿಳಿಸಿದ್ದಾರೆ.

ಅಂತರಾಳದಿಂದ...
EDITORIAL

# ವಿಶೇಷ ಶಿಕ್ಷಕರ ವರ್ಗಾವಣೆ; ಗ್ರಾಮೀಣ ಮಕ್ಕಳಿಗೆ ವಂಚನೆ



ಇದರಿಂದಾಗಿ, ಕಡಿಮೆ ಮಕ್ಕಳು ಇರುವ ಗ್ರಾಮೀಣ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರು ನಗರ ಪ್ರದೇಶಗಳಿಗೆ ವರ್ಗ ಆಗಲಿದ್ದಾರೆ.ಮೂಲ ಸೌಕರ್ಯದ ಕೊರತೆಯೊಂದಿಗೆ ವಿದ್ಯಾರ್ಥಿಗಳ ದಾಖಲಾತಿಯೂ ಕಡಿಮೆಯಾಗಿ, ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಶಾಲೆಗಳು ವರ್ಷದಿಂದ ವರ್ಷಕ್ಕೆ ದುರ್ಬಲಗೊಳ್ಳುತ್ತಿವೆ. ಈಗ ವಿಶೇಷ ಶಿಕ್ಷಕರನ್ನೂ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವರ್ಗಾಯಿಸಲು ಶಿಕ್ಷಣ ಇಲಾಖೆ ಮುಂದಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ಸರ್ಕಾರಿ ಶಾಲೆಗಳ ನಡುವೆ ಭೇದ ಕಲ್ಪಿಸಲು ಹೊರಟಂತಿರುವ ಇಲಾಖೆ, ಗ್ರಾಮೀಣ ಮಕ್ಕಳಿಗೆ 'ಕಲೆ' ಅಗತ್ಯವಿಲ್ಲ ಎಂದು ಭಾವಿಸಿರುವಂತಿದೆ. ವಿದ್ಯಾರ್ಥಿಗಳು ಕಡಿಮೆ ಇದ್ದಾರೆ ಎನ್ನುವ ಕಾರಣಕ್ಕಾಗಿ ವಿಶೇಷ ಶಿಕ್ಷಕರನ್ನು ವರ್ಗಾಯಿಸಲು ಮುಂದಾಗಿರುವ ಶಿಕ್ಷಣ ಇಲಾಖೆ, ಮಕ್ಕಳ ಹಿತಾಸಕ್ತಿಯನ್ನು ನಿರ್ಲಕ್ಷಿಸಿದೆ ಹಾಗೂ ಅವ್ಯಾವಹಾರಿಕ ನಿರ್ಧಾರ ಕೈಗೊಂಡಿದೆ.

ಚಿತ್ರಕಲೆ, ಸಂಗೀತ, ನಾಟಕ, ನೃತ್ಯದಂತಹ ಸೃಜನಶೀಲ ವಿಷಯಗಳನ್ನು ಕಲಿಸುವವರನ್ನು 'ವಿಶೇಷ ಶಿಕ್ಷಕ'ರೆಂದು ಶಿಕ್ಷಣ ಇಲಾಖೆ ಹೆಸರಿಸಿದೆ. ಈ ಶಿಕ್ಷಕರು, ಮಕ್ಕಳನ್ನು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುತ್ತಾರೆ: ಚಿತ್ರಕಲೆ, ಸಂಗೀತ, ನಾಟಕದಂತಹ ವಿವಿಧ ಕಲಾ ಪ್ರಕಾರಗಳಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಹೊರಹೊಮ್ಮಲು ಪ್ರೋತ್ಸಾಹಿಸುತ್ತಾರೆ.

**ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರನ್ನು, 240ಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ ವರ್ಗಾಯಿಸುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ನಿರ್ಧಾರ ಗ್ರಾಮೀಣ ಮಕ್ಕಳ ಶೈಕ್ಷಣಿಕ ಹಿತಾಸಕ್ತಿಯನ್ನು ಗಾಸಿಗೊಳಿಸುವಂತಹದ್ದು. ಪ್ರೌಢಶಾಲೆಗಳಲ್ಲಿನ ಸಿಬ್ಬಂದಿಯ ಸ್ತರ ವಿನ್ಯಾಸವನ್ನು ಪರಿಷ್ಕರಿಸಿದ್ದು, 240ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿನ ವಿಶೇಷ ಶಿಕ್ಷಕರನ್ನು 'ಹೆಚ್ಚುವರಿ' ಎಂದು ಗುರ್ತಿಸಿರುವುದಾಗಿ ಇಲಾಖೆ ಹೇಳಿದೆ.**

ವಿದ್ಯಾರ್ಥಿಗಳು ಕೀಳರಿಮೆಯಿಂದ ಹೊರಬಂದು, ಸ್ವಯಂ ಅಭಿವ್ಯಕ್ತಿಯ ಕೌಶಲಗಳನ್ನು ರೂಢಿಸಿಕೊಳ್ಳಲು ನೆರವಾಗುತ್ತಾರೆ ಪಠ್ಯೇತರ ಚಟುವಟಿಕೆಗಳ ಮಹತ್ವವನ್ನು ಗುರ್ತಿಸಿ, ವಿಶೇಷ ಶಿಕ್ಷಕರ ನೇಮಕಾತಿಗೆ ಆದ್ಯತೆ ನೀಡಬೇಕೆಂದು ರಾಷ್ಟ್ರೀಯ ಶಿಕ್ಷಣ ನೀತಿಗಳೂ ಪ್ರತಿಪಾದಿಸಿವೆ.

ಆದರೆ, ಪಠ್ಯೇತರ ಚಟುವಟಿಕೆಗಳೆಂದು ಪರಿಗಣಿಸಲಾಗುವ ಕಲಾ ಪ್ರಕಾರಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಿನ ಪ್ರೋತ್ಸಾಹವಿಲ್ಲ. ಅಂಕಗಳಿಕೆಯೇ ಪ್ರಧಾನವಾದ ಶಿಕ್ಷಣ ವ್ಯವಸ್ಥೆಯ ಬಗ್ಗೆ ಆಸಕ್ತಿಯುಳ್ಳ ಹೆಚ್ಚಿನ ಪಾಲಕರೂ ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ಉತ್ಸಾಹ ವ್ಯಕ್ತಪಡಿಸುವುದಿಲ್ಲ. ಈ ಅವಗಣನೆಯ ಸೋಂಕನ್ನು ಗ್ರಾಮೀಣ ಸರ್ಕಾರಿ ಶಾಲೆಗಳಿಗೂ ಹಬ್ಬಿಸಲು ಶಿಕ್ಷಣ ಇಲಾಖೆ ಹೊರಟಂತಿದೆ. ವಿದ್ಯಾರ್ಥಿಗಳಿಗೆ ಕಲೆಯ ಬಗ್ಗೆ ಅಭಿರುಚಿ ಮೂಡಿಸುವ ವಿಶೇಷ ಶಿಕ್ಷಕರು ಸವಾಲುಗಳ ನಡುವೆಯೇ ಕಾರ್ಯ ನಿರ್ವಹಿಸಬೇಕಾಗಿದೆ. ವಿಶೇಷ ಶಿಕ್ಷಕರನ್ನು ಅವರು ಕಾರ್ಯ ನಿರ್ವಹಿಸುವ ಶಾಲೆಗಳಲ್ಲಿಯೇ ಎರಡನೇ ದರ್ಜೆಯ ಶಿಕ್ಷಕರಂತೆ ನಡೆಸಿಕೊಳ್ಳುವ ಉದಾಹರಣೆ ಗಳಿವೆ ಪಠ್ಯ ವಿಷಯಗಳನ್ನು ಬೋಧಿಸುವ ಶಿಕ್ಷಕರಿಗೆ ದೊರೆಯುವ ಮಹತ್ವ ಅವರಿಗೆ ದೊರೆಯುವುದಿಲ್ಲ. ಪ್ರತಿಕೂಲ ಪರಿಸ್ಥಿತಿಯ ನಡುವೆಯೂ ಕೆಲವು ಶಿಕ್ಷಕರು, ತಾವು ಕರ್ತವ್ಯ ನಿರ್ವಹಿಸುವ ಶಾಲೆಗಳಿಗೆ ತಮ್ಮ ಸೃಜನಶೀಲತೆಯ ಮೂಲಕ ಹೊಸ ವರ್ಚಸ್ಸು ನೀಡಿದ್ದಾರೆ: ಗ್ರಾಮೀಣ ಶಾಲೆಗಳ ಮಕ್ಕಳು ರಾಜ್ಯಮಟ್ಟದ ಚಟುವಟಿಕೆಗಳಲ್ಲಿ ನಗರ ಪ್ರದೇಶಗಳ ಮಕ್ಕಳೊಂದಿಗೆ ಸ್ಪರ್ಧಿಸಿ ಗೆಲ್ಲಲು ಕಾರಣರಾಗಿದ್ದಾರೆ. ಇಂಥ ಶಿಕ್ಷಕರನ್ನು 'ಹೆಚ್ಚುವರಿ' ಎನ್ನುವ ಹಣೆಪಟ್ಟಿಯೊಂದಿಗೆ ನಗರ ಪ್ರದೇಶದ ಶಾಲೆಗಳಿಗೆ ವರ್ಗ ಮಾಡುವುದು ವಿವೇಚನೆಯಿಂದ ಕೂಡಿದ ನಿರ್ಧಾರವಲ್ಲ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗುತ್ತಿರುವ ಶಿಕ್ಷಕರನ್ನು 'ಹೆಚ್ಚುವರಿಯೆಂದು ಗುರ್ತಿಸುವ ಅವೈಜ್ಞಾನಿಕ ಹಾಗೂ ಅಸಾಂಸ್ಕೃತಿಕ ನಿರ್ಧಾರವನ್ನು ಶಿಕ್ಷಣ ಇಲಾಖೆ ಕೈಬಿಡಬೇಕು. ಸಾಮೂಹಿಕ ವರ್ಗಾವಣೆಯ ಜೊತೆಗೆ, ಕಲಾ ಪ್ರಕಾರಗಳಲ್ಲಿ ಕಾರ್ಯ ನಿರ್ವಹಿಸುವ ಶಿಕ್ಷಕರಿಗೆ ಬಳಸಲಾಗುತ್ತಿರುವ 'ವಿಶೇಷ' ಎನ್ನುವ ಅಸೂಕ್ಷ್ಮ ಪದ ಬಳಕೆಯನ್ನೂ ಕೈಬಿಡಬೇಕು. ಈ ಮೊದಲು. ಶಿಕ್ಷಕರನ್ನು ಅವರು ಶೈಕ್ಷಣಿಕ ಪರಿಣತಿ ಹೊಂದಿದ ಸಂಗೀತ, ನಾಟಕ, ಚಿತ್ರಕಲೆಯಂಥ ಕಲಾಪ್ರಕಾರದ ಜೊತೆಗೇ ಗುರ್ತಿಸಲಾಗುತ್ತಿತ್ತು. ಆ ಪದ್ಧತಿ ಮತ್ತೆ ಜಾರಿಗೆ ಬರಬೇಕು. ಭಾಷೆ, ಗಣಿತ, ವಿಜ್ಞಾನದ ಶಿಕ್ಷಕರಂತೆ ಕಲಾ ಪ್ರಕಾರಗಳಿಗೆ ಸಂಬಂಧಿಸಿದ ಕಾಯಂ ಶಿಕ್ಷಕರ ಹುದ್ದೆಯೂ ಶಾಲೆಗಳಲ್ಲಿರುವುದು ಅಗತ್ಯ. ಈಗ 'ವಿಶೇಷ' ಹಣೆಪಟ್ಟಿಯಲ್ಲಿ 2,400ಕ್ಕೂ ಹೆಚ್ಚು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ನಿಯಮಿತ ನೇಮಕಾತಿ ಪ್ರಕ್ರಿಯೆ ಜಾರಿಗೆ ತರುವ ಮೂಲಕ, ಎಲ್ಲ ಶಾಲೆಗಳಲ್ಲೂ ಕಲಾ ಪ್ರಕಾರಗಳ ಶಿಕ್ಷಕರು ಇರುವಂತೆ ಶಿಕ್ಷಣ ಇಲಾಖೆ ನೋಡಿಕೊಳ್ಳಬೇಕಾಗಿದೆ.



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಮನುಷ್ಯ ಕೊಡುವುದು ಮನೆಯವರೆವಿಗೆ, ಅದೇ ಕಷ್ಟಪಟ್ಟು ಸಂಪಾದಿಸಿದ್ದು ಕೊನೆಯವರೆವಿಗೆ

ವಿಜ್ಞಾನ ತಂತ್ರಜ್ಞಾನ ಈ ಡಿಜಿಟಲ್ ಯಂತ್ರ ಯುಗ ಇಷ್ಟು ನಾಗಾಲೋಟದಲ್ಲಿ ಬೆಳೆದಿದ್ದರೂ ಸಹ ಇನ್ನೂ ನಾವುಗಳು ಮೂಢನಂಬಿಕೆಯಿಂದ ಹೊರ ಬಂದಿಲ್ಲ ಇದು ಈ ದೇಶದ ದುರ್ದೈವ ಹಾಗೂ ವಿಪರ್ಯಾಸ. ಮನುಷ್ಯ ಕೊಡುವುದು ಮನೆಯವರೆವಿಗೆ ಅದೇ ದೇವರು ಕೊಡುವುದು ಕೊನೆಯವರವಿಗೆ ಎಂಬ ಮಾತು ಅನಾದಿ ಕಾಲದಿಂದಲೂ ಮೂಢನಂಬಿಕೆಯಿಂದ ಬಂದು ಈಗಲೂ ಆ ಮಾತು ಚಾಲ್ತಿಯಲ್ಲಿದೆ.

ಆದರೆ ಆಸ್ತಿಕರು ನಂಬುವ ಕಲ್ಪನೆಯ ದೇವರು ಎಲ್ಲಿ ಕೊಡುತ್ತಾನೆ ನಾವು ಕಷ್ಟಪಟ್ಟು ದುಡಿದು ಸಂಪಾದಿಸಿಕೊಂಡು ಜೀವ ಇರುವವರೆಗೂ ಬದುಕಬೇಕು ಅಷ್ಟೇ!

ಸುಮ್ಮನೆ ನಂಬಿಕೆ ಇಟ್ಟುಕೊಂಡಿರುವ ಮೂಢನಂಬಿಕೆಯ ಕಲ್ಪನೆಯ ದೇವರನ್ನ ಏಕೆ ಮಧ್ಯೆ, ಎಳೆದುಕೊಂಡು ಬಂದು ದೇವರ ಹೆಸರಿನ ಮೇಲೆ ಮನುಷ್ಯ ಸಂಘರ್ಷಕ್ಕೆ ಇಳಿದು ದೇವರನ್ನ ಹೊಣೆಗಾರನಾಗಿ ಮಾಡುತ್ತಾರೆ.

ಸೃಷ್ಟಿಯ ಇನ್ನೊಂದು ಮುಖವೇ ದೇವರು ಅದೇ ಒಂದು ರೀತಿಯ ಪ್ರೇರೇಪಣೆ ಶಕ್ತಿ ಆ ಶಕ್ತಿಯೇ ಸರ್ವಶಕ್ತ, ಸರ್ವವ್ಯಾಪಿ,ಅಗೋಚರ, ವಿಸ್ಮಯ ಹಾಗೂ ಪವಾಡ ಒಟ್ಟಾರೆ ಮನುಷ್ಯನ ಕಲ್ಪನೆ. ಇರುವೆಗಳ ಸಂಘ ಜೀವನ ಮತ್ತು ಕಾಗೆಯು ತನ್ನ ಎಲ್ಲಾ ಬಳಗದವರನ್ನ ಕಾ-ಕಾ ಎಂದು ಕರೆದು ಆಹಾರವನ್ನು ಹಂಚಿಕೊಂಡು ತಿನ್ನುವ ಗುಣವನ್ನು ನೋಡಿ ಮನುಷ್ಯ ಕಲಿಯಬೇಕು.

ಪ್ರಾಣಿ ಪಕ್ಷಿಗಳಿಗಿಂತ ಶ್ರೇಷ್ಠವಾದ ಜೀವಿ ಅಂದರೆ ಈ ಮಾನವ. ಆದರೆ ಅದಕ್ಕೆ ಅರ್ಥ ಈಗ ಉಳಿದಿದೆಯೇ ! ಎಲ್ಲರೂ ಸ್ಥೂಲಕಾಯಕಕ್ಕೆ ಇಟ್ಟುಕೊಂಡು ಯೋಚಿಸಬೇಕು ಹಾಗೂ ಈ ಬಗ್ಗೆ ಮಾನವ ನುಣಚಿಕೊಳ್ಳುವ ಸ್ವಭಾವವನ್ನು ಮೈಗೂಡಿಸಿಕೊಂಡಿದ್ದಾರೆ. ಕಾಲ ಹಾಗೆಯೇ ಇದೆ ಆದರೆ ಮನುಷ್ಯ ಬದಲಾವಣೆ ಆಗುತ್ತಾ ಇದ್ದಾನೆ. ಮುಂದುವರೆದಂತೆ ಬರಬರುತ್ತಾ ಕನಿಷ್ಠ ಜೀವಿಯಾಗಿ ಮಾರ್ಪಾಡಾಗುತ್ತಾ ಇದ್ದಾನೆ. ಮಾನವ ಮೂಲತಃ ಸಂಘ ಜೀವಿ ಆದರೆ ಕುಟುಂಬ, ಸಮಾಜ,ರಾಷ್ಟ್ರ ಹಾಗೂ ಜಗತ್ತಿನಲ್ಲಿ ಎಲ್ಲೇ ಇದ್ದರೂ ಸಹ ಪ್ರಾಣಿ ಪಕ್ಷಿಗಳು ನೀಲಾಜಾಲವಾಗಿ ಬದುಕುವ ಬದುಕನ್ನು ಮಾನವ ಅರ್ಥ ಮಾಡಿಕೊಂಡು ಪ್ರಕೃತಿಯ ಮಧ್ಯೆ ಬದುಕುವ ಕಲೆಯನ್ನು ಕಲಿಯದೆ ಮರೆತಿದ್ದಾನೆ. ಪಂಚಭೂತಗಳಾದ ಭೂಮಿ, ಆಕಾಶ,ಗಾಳಿ,ನೀರು ಮತ್ತು ಬೆಂಕಿ ಇವುಗಳಿಗೆ ಶೆಡ್ಡು ಹೊಡೆದು ಅವುಗಳಿಗೆ ಮಲಿನ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾನೆ.



ಈ ಪಂಚಭೂತಗಳು ಶಾಶ್ವತ ಎಂಬುದನ್ನು ಮೈ ಮರೆತು ನಾನೇ ಶಾಶ್ವತ ಎಂದು ಬಿಂಬಿಸಿಕೊಂಡು ಪ್ರಕೃತಿ ಮತ್ತು ಸಮಾಜದ ವಿರುದ್ಧ ಅತ್ಯಂತ ಕೀಳಾಗಿ ಸಮಾಜದಲ್ಲಿ ವರ್ತಿಸಿಕೊಂಡು ಬದುಕುತಿದ್ದಾನೆ. ಮನುಷ್ಯ ಸದಾ ಸ್ವಾರ್ಥಿ. ಇರುವುದರಲ್ಲಿಯೇ ತೃಪ್ತಿ ಸಂತೃಪ್ತಿಯಿಂದ ಬದುಕುವ ಕಲೆಯನ್ನು ಕಲಿಯದೇ ಪರರ ಬದುಕನ್ನು ಅಪೇಕ್ಷೆ ಪಡುತ್ತಾನೆ. ಪರರ ಹಣ,ಪರರ ನೆರಳು,ಪರರ ಅನ್ನ,ಪರರ ಆಸ್ತಿಪಾಸ್ತಿ ಹಾಗೂ ಇತರೆ ಸವಲತ್ತುಗಳನ್ನ ಅಪೇಕ್ಷೆ ಪಡುವವನು ಮನುಷ್ಯನಾಗಲು ಅರ್ಹತೆ ಇಲ್ಲ. ಬಾಲ್ಯ,ವಿದ್ಯಾಭ್ಯಾಸ ಮಾಡುವಾಗ ತಂದೆ ತಾಯಿಗಳ ಆಶ್ರಯ ನಂತರ ಯುವ ವಯಸ್ಸು ಪ್ರಾಪ್ತವಾದಾಗ ಸ್ವಇಚ್ಛೆಯಿಂದ ದುಡಿದು ಸಂಪಾದಿಸಬೇಕು.ಮುಪ್ಪಿನ ವಯಸ್ಸು ಬಂದಾಗ ಸಂಪಾದಿಸಿ ಕೂಡಿಟ್ಟ ಹಣದಲ್ಲಿ ನಿವೃತ್ತಿ ಜೀವನ ಕಳೆಯಬೇಕು. ಅದು ಬಿಟ್ಟು ದೇವರು ಕೊಡುತ್ತಾನೆ ಎಂದು ಸುಮ್ಮನೆ ಸೋಮಾರಿಯಾಗಿ ಕಾಲಹರಣ ಮಾಡಿ ಕುಳಿತುಕೊಂಡರೆ ಏನ್ ಪ್ರಯೋಜನ. ದೇವರು ಒಂದು ರೀತಿ ಪ್ರೇರೇಪಣೆ ಶಕ್ತಿ.

ಆದರೆ ಅನಾದಿ ಕಾಲದಿಂದಲೂ ಆಸ್ತಿಕರು ಮತ್ತು ನಾಸ್ತಿಕರು ಎಂಬ ಎರಡು ಗುಂಪುಗಳಿವೆ ಈ ಎರಡು ಗುಂಪುಗಳ ನಡುವೆ ಸಂಘರ್ಷ ಇದ್ದೇ ಇದೆ ಜೀವಂತವಾಗಿ ಹಸಿರಾಗಿದೆ.

**ಉದಾಹರಣೆಗೆ:- ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಬೇಕು, ಕಷ್ಟಪಟ್ಟು ವ್ಯವಸಾಯ ಮಾಡಬೇಕು, ಕಷ್ಟಪಟ್ಟು ಉದ್ಯೋಗ ಮಾಡಬೇಕು ಹಾಗೂ ಇತರೆ ಕೆಲಸದಲ್ಲಿ ತೊಡಗಿಸಿಕೊಂಡರೆ ಸಂಪಾದನೆಯ ಹಣ ನಿಮ್ಮ ಬೆನ್ನಿಂದೆ ಹಿಂಬಾಲಿಸಿಕೊಂಡು ಬರುತ್ತದೆ. ಅದು ಬಿಟ್ಟು ದೇವರು ಕೊಡುತ್ತಾನೆ ಎಂದು ಸುಮ್ಮನೆ ಕುಳಿತುಕೊಂಡರೆ ಯಾವ ದೇವರೂ ಸಹ ಕೊಡುವುದಿಲ್ಲ ಸುಮ್ಮನೆ ನಮ್ಮ ಭ್ರಮೆ ಹಾಗೂ ಕಲ್ಪನೆ. ಅದೃಷ್ಟದಿಂದ ಯಾವುದೂ ಕೂಡ ಅಪೇಕ್ಷೆ ಪಡಬಾರದು ಕಷ್ಟದಿಂದಲೇ ಅದೃಷ್ಟವನ್ನು ನಮ್ಮ ವಶ ಮಾಡಿಕೊಳ್ಳಬೇಕು. ಅಯ್ಯೋ ದೇವರೇ ಪರೀಕ್ಷೆ ಪಾಸ್ ಮಾಡು, ಅಯ್ಯೋ ನನ್ನ ಆರೋಗ್ಯ ಕಾಪಾಡು, ಅಯ್ಯೋ ನನಗೆ ಉದ್ಯೋಗ ಕೊಡು, ಅಯ್ಯೋ ನನಗೆ ಸಂಪಾದನೆ ಜಾಸ್ತಿ ಕೊಡು, ಅಯ್ಯೋ ವ್ಯವಸಾಯದಲ್ಲಿ ಪಸುಲು ಜಾಸ್ತಿ ಕೊಡು, ರೇಸು,ಜೂಜು, ಲಾಟರಿ ಹೊಡೆಯಲಿ, ಒಳ್ಳೆಯ ಹೆಂಡ್ತಿ ಕೊಡು, ಒಳ್ಳೆಯ ಗಂಡ ಕೊಡು, ಒಳ್ಳೆಯ ಮಕ್ಕಳಾಗು ಇತ್ಯಾದಿ ಈ ರೀತಿ ಕೇಳಿಕೊಳ್ಳುವವರು ಬಹು ಮಂದಿ ಆಸ್ತಿಕರು. ಇದಕ್ಕೆ ನಗಬೇಕೋ ಅಥವಾ ಅಳಬೇಕೋ ಎಂಬುದು ಯಕ್ಷಪ್ರಶ್ನೆಯಾಗಿ ಹಾಗೂ ಗೊಂದಲವಾಗಿ ಉಳಿದಿದೆ. ಹಾಗೂ ವೈಚಾರಿಕ, ವೈಜ್ಞಾನಿಕ ಪ್ರಜ್ಞೆ ಉಳ್ಳ ನಾಸ್ತಿಕರು ಪ್ರಶ್ನೆ ಹಾಕಿಕೊಂಡು ಉತ್ತರ ಹುಡುಕಿಕೊಳ್ಳಬೇಕಾಗಿದೆ.**

## ಶೀತ, ಕೆಮ್ಮು ಇದೆಯೆಂದು ಮಗುವಿಗೆ ಕರ್ಪೂರ ಬಳಸೋ ತಪ್ಪು ಮಾಡ್ಲೇ ಬೇಡಿ

ಸಾಮಾನ್ಯವಾಗಿ ಶೀತವಾದಾಗ ಬಹಳಷ್ಟು ಜನರು ಮನೆಮದ್ದನ್ನು ಬಳಸುತ್ತಾರೆ. ಅಂತಹ ಮನೆಮದ್ದುಗಳಲ್ಲಿ ಕರ್ಪೂರ ಕೂಡಾ ಒಂದು. ಆದರೆ ಇದನ್ನು ಮಗುವಿನ ಮೇಲೆ ಪ್ರಯೋಗ ಮಾಡುವ ತಪ್ಪನ್ನು ಯಾವತ್ತೂ ಮಾಡಬಾರದು. ಶೀತ ಹಾಗೂ ಕೆಮ್ಮು ಇದ್ದರೆ ಸಾಮಾನ್ಯವಾಗಿ ಪ್ರತಿಯೊಬ್ಬರೂ ಝಂಡುಬಾಮ್ ಹಚ್ಚುತ್ತೇವೆ ಇನ್ನಿತರ ಮನೆಮದ್ದನ್ನು ಮಾಡುತ್ತೇವೆ. ಹಾಗಂತ ಈ ಮನೆಮದ್ದು ದೊಡ್ಡವರಿಗೆ ಉಪಕಾರಿಯಾಗಿದೆ ಎಂದು ಪುಟ್ಟ ಮಗುವಿಗೂ ಅದನ್ನೇ ಪ್ರಯತ್ನಿಸಿದರೆ ಅಪಾಯ ತಪ್ಪಿದ್ದಲ್ಲ. ಪುಟ್ಟ ಮಗುವಿಗೆ ಶೀತ ಕೆಮ್ಮು ಇತ್ತೆಂದು ಪೋಷಕರು ಬಾಮ್ ಹಾಗೂ ಕರ್ಪೂರವನ್ನು ಹಚ್ಚಿದ್ದು ಇದು ಮಗುವಿನ ಸಾವಿಗೆ ಕಾರಣವಾಗಿರುವ ಘಟನೆ ಇತ್ತೀಚೆಗೆ ಚೆನ್ನೈನಲ್ಲಿ ನಡೆದಿದೆ.

**ಮಗುವಿಗೆ ಶೀತ:** 8 ತಿಂಗಳ ಮಗಳು ಕಳೆದ ಕೆಲವು ದಿನಗಳಿಂದ ಶೀತ ಮತ್ತು ಕೆಮ್ಮಿನಿಂದ ಬಳಲುತ್ತಿತ್ತು. ಜುಲೈ 13 ರ ಸಂಜೆ, ಬಾಲಕಿಯ ಪೋಷಕರು ಮೂಗಿನ ಮೇಲೆ ಮುಲಾಮು ಮತ್ತು ಕರ್ಪೂರ ಹಚ್ಚಿದ್ದಾರೆ. ಸ್ವಲ್ಪ ಸಮಯದ ನಂತರ ಮಗುವಿಗೆ ಉಸಿರುಗಟ್ಟಲು ಪ್ರಾರಂಭವಾಗಿದ್ದು, ತಕ್ಷಣ ಪೋಷಕರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರೂ ಚಿಕಿತ್ಸೆ ಫಲಕಾರಿಯಾಗದೆ ಮಗು ಕೊನೆಯುಸಿರೆಳೆದಿದೆ.

**ಮಗುವಿನ ಚರ್ಮ ಮೃದುವಾಗಿರುತ್ತದೆ:** ಒಂದು ವರ್ಷದವರೆಗೆ ಮಕ್ಕಳ ಚರ್ಮವು ತುಂಬಾ ಮೃದುವಾಗಿರುತ್ತದೆ. ಆದ್ದರಿಂದ ನೀವು ಝಂಡುಬಾಮ್ ಅಥವಾ ಕರ್ಪೂರದಂತಹ ವಸ್ತುಗಳನ್ನು ಅವರ ದೇಹದ ಮೇಲೆ ಹಚ್ಚಿದಾಗ, ಅವು ನೇರವಾಗಿ ಅವರ ದೇಹಕ್ಕೆ ಹೋಗುತ್ತವೆ. ಆದ್ದರಿಂದ, ಪೋಷಕರು ಮಕ್ಕಳ ದೇಹದ ಮೇಲೆ ಯಾವುದೇ ವಸ್ತುವನ್ನು ಹಚ್ಚಬಾರದು ಎಂದು ಶಿಶುವೈದ್ಯರು ಹೇಳುತ್ತಾರೆ.

**ಕರ್ಪೂರದಿಂದ ಅಡ್ಡಪರಿಣಾಮಗಳೂ ಇವೆ:** ತಜ್ಞರ ಪ್ರಕಾರ, ಕರ್ಪೂರವು ಪ್ರಾಚೀನ ಔಷಧ ಮತ್ತು ಪೂಜೆಯಲ್ಲಿ ಬಳಸಲಾಗುವ ವಸ್ತುವಾಗಿದೆ. ಅನೇಕ ಜನರು ಕೆಮ್ಮು ಮತ್ತು ಶೀತದಲ್ಲಿ ನೋವು ನಿವಾರಕ ಮನೆಮದ್ದಾಗಿ ಕರ್ಪೂರವನ್ನು ಬಳಸುತ್ತಾರೆ. ನಮ್ಮ ದೇಹದ ತೂಕದ ಪ್ರತಿ ಕಿಲೋಗ್ರಾಂಗೆ 30 ಮಿಗ್ರಾಂ ಅನುಪಾತದಲ್ಲಿ ಕರ್ಪೂರವನ್ನು ಬೆರೆಸಿದರೆ, ಅದು ನಮಗೆ ವಿಷಕಾರಿಯಾಗಬಹುದು. ಅಲ್ಲದೆ 10 ಕೆಜಿ ಮಗುವಿನ ಮೇಲೆ 300 ಮಿಗ್ರಾಂ ಕರ್ಪೂರವನ್ನು ಉಜ್ಜುವುದರಿಂದ ಅಡ್ಡಪರಿಣಾಮಗಳು ಉಂಟಾಗುತ್ತವೆ.

**ಮೆದುಳನ್ನು ಹಾನಿಗೊಳಿಸುತ್ತದೆ:** ತಜ್ಞರು ಹೇಳುವಂತೆ ಒಬ್ಬ ವ್ಯಕ್ತಿಯು ಹೆಚ್ಚು ಕರ್ಪೂರವನ್ನು ಸೇವಿಸಿದರೆ ಅದು ಮೆದುಳು, ನರಮಂಡಲವನ್ನು ಹಾನಿಗೊಳಿಸುತ್ತದೆ ಮತ್ತು ರೋಗಗ್ರಸ್ತವಾಗುವಿಕೆಗಳಿಗೆ ಕಾರಣವಾಗಬಹುದು. ಈ ರೋಗಗ್ರಸ್ತವಾಗುವಿಕೆ ತುಂಬಾ ತೀವ್ರವಾಗಿರುತ್ತದೆ, ಅದನ್ನು ಔಷಧಿಯಿಂದ ನಿಯಂತ್ರಿಸಲಾಗುವುದಿಲ್ಲ. ಚರ್ಮದ ಕಿರಿಕಿರಿ, ಗಂಟಲಿನ ಕಿರಿಕಿರಿ ಮತ್ತು ಶ್ವಾಸಕೋಶದ ಅಸ್ವಸ್ಥತೆಗಳು ಸಂಭವಿಸಬಹುದು. ಇದನ್ನು ವಯಸ್ಕರು ಬಳಸಿದಾಗ ಇದು ಕಡಿಮೆ ಪರಿಣಾಮಕಾರಿಯಾಗಬಹುದು. ಆದರೆ ಮಕ್ಕಳ ಚರ್ಮವು ಮೃದು ಮತ್ತು ಹೆಚ್ಚು ಸೂಕ್ಷ್ಮವಾಗಿರುತ್ತದೆ, ಆದ್ದರಿಂದ ಇದು ಹೆಚ್ಚು ಹಾನಿಕಾರಕವಾಗಬಹುದು. ಆದ್ದರಿಂದ ಮಕ್ಕಳಿಗೆ ಔಷಧಿಯಾಗಿ ಕರ್ಪೂರವನ್ನು ಬಳಸುವುದನ್ನು ತಪ್ಪಿಸುವುದು ಉತ್ತಮ.



## ವಿ-ಎಕ್ಸಪೋ ಮೆಗಾ ಪ್ರದರ್ಶನ ಮೇಳಕ್ಕೆ ಸೌಮ್ಯರೆಡ್ಡಿ ಚಾಲನೆ

• ಉದಯವಾಹಿನಿ, ಬೆಂಗಳೂರು

ವಿ-ವೈಶ್ಯ ಸಂಸ್ಥೆಯಿಂದ ಇಂದಿನಿಂದ ಜು. 20 ರವರೆಗೆ ವಿ-ಎಕ್ಸಪೋ ಮೆಗಾ ಪ್ರದರ್ಶನ ಮೇಳ ಅರಮನೆ ಮೈದಾನ ಕಿಂಗ್ಸ್ ಪ್ರಿನಸ್ಸ್ ಹಾಲ್‌ನಲ್ಲಿ ನಡೆಯುತ್ತಿದೆ.

ಮೂರು ದಿನಗಳ ಮೇಳಕ್ಕೆ ಮಾಜಿ ಶಾಸಕರು, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷರಾದ ಸೌಮ್ಯರೆಡ್ಡಿ, ವಿ-ವೈಶ್ಯ ಸಂಸ್ಥೆಯ ಸಂಸ್ಥಾಪಕರಾದ ಅನಿಲ್ ಗುಪ್ತಾ ಉದ್ಘಾಟಿಸಿದರು. ಮೂರು ದಿನಗಳ ಮೇಳಕ್ಕೆ ಮಾಜಿ ಶಾಸಕರು, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷರಾದ ಸೌಮ್ಯರೆಡ್ಡಿ, ವಿ-ವೈಶ್ಯ ಸಂಸ್ಥೆಯ ಸಂಸ್ಥಾಪಕರಾದ ಅನಿಲ್ ಗುಪ್ತಾ ಉದ್ಘಾಟಿಸಿದರು.

ಸೌಮ್ಯರೆಡ್ಡಿ ಮಾತನಾಡಿ, ವಿ-ಎಕ್ಸಪೋ ಪ್ರದರ್ಶನ ಮೇಳ ಮಹಿಳೆಯರಿಗೆ ಹೆಚ್ಚು ಅನುಕೂಲವಾಗಲಿದೆ, ಇಲ್ಲಿ ಮಹಿಳೆಯರಿಗೆ ಫ್ಯಾಶನ್ ವಸ್ತ್ರಗಳು, ಆಭರಣ, ಜ್ಯುವೆಲರಿ, ತಿಂಡಿ ಮೇಳ ಮತ್ತು ಅಲಂಕಾರಿಕ ಸಾಮಾಗ್ರಿಗಳು ಅತ್ಯಂತ ಕಡಿಮೆ ಬೆಲೆಗೆ ಒಂದೇ ವೇದಿಕೆಯಲ್ಲಿ ಸಿಗಲಿದೆ. ಮಹಿಳೆಯರು ಸ್ವಾವಲಂಬಿಗಳಾಗುತ್ತಿದ್ದು ತಮ್ಮ ಕಾಲ ಮೇಲೆ ನಿಲ್ಲುವ ಶಕ್ತಿ ಹೊಂದಿದ್ದಾರೆ. ತನ್ನ ಮನೆ ನಿರ್ವಹಣೆ, ಅಲಂಕಾರ ಮಾಡುವ ಮತ್ತು ಕುಟುಂಬ ನಿರ್ವಹಣೆ ನಿರ್ವಹಣೆ ಹೇಗೆ ಮಾಡಬೇಕು ಎಂಬುದು ತಿಳಿದಿದೆ ಎಂದು ಹೇಳಿದರು. ವಿ-ವೈಶ್ಯ ಸಂಸ್ಥೆಯ ಗಣೇಶ್, ಕೆ.ಎಸ್.ಸಂಜಯ್, ಸಂತೋಷ್ ಶೆಟ್ಟಿ, ಮತ್ತು ಮೂರ್ತಿ.ಟಿ.ಎನ್. ಉನ್ನತಿ ಸುಪ್ರೀತ್, ಸಂಘರ್ಷ್ ಕೆ.ಎಸ್. ಅಭಿಜ್ಞಾ ಉಪಸ್ಥಿತರಿದ್ದರು.



**ವಿ-ಎಕ್ಸಪೋ ಮೆಗಾ ಪ್ರದರ್ಶನ ಮೇಳ**

**ಜನರಿಗೋಸ್ಕರ ಈ ಮೇಗಾ ಎಕ್ಸಪೋ ಅಯೋಜಿಸಲಾಗಿದೆ, ಕುಟುಂಬ ಸಮೇತರಾಗಿ ಬಂದು ಇಲ್ಲಿ ದೇಶಿಯ ಉತ್ಪನ್ನಗಳ ಮಾರಾಟ, ಪ್ರದರ್ಶನ ಏರ್ಪಡಿಸಲಾಗಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಎಕ್ಸಪೋ ದಲ್ಲಿ 120ಮಳಿಗೆಗಳಿವೆ. ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಫ್ಯಾಶನ್ ಸಹ ಏರ್ಪಡಿಸಲಾಗಿದೆ ಎಂದು ಹೇಳಿದರು.**

**ವಿ-ವೈಶ್ಯ ಸಂಸ್ಥೆಯ ಸಂಸ್ಥಾಪಕ ಅನಿಲ್ ಗುಪ್ತಾ**

## ಶ್ರೀ ಗುರು ರಾಯರ ಬೃಂದಾವನಕ್ಕೆ ಮಾವಿನ ಹಣ್ಣಿನ ಅಭಿಷೇಕ ಮತ್ತು ಸಂಜೆ ಭರತನಾಟ್ಯ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗುರುವಾರ ಬೆಳಗ್ಗೆ ರಾಯರ ಬೃಂದಾವನಕ್ಕೆ ಮಾವಿನ ಹಣ್ಣಿನ ಅಭಿಷೇಕ, ವಿಶೇಷ ಅಲಂಕಾರ, ಕನಕಾಭಿಷೇಕ, ಮಹಾಮಂಗಳಾರತಿ, ಸಹಸ್ರಾರು ಭಕ್ತರಿಗೆ ಅನ್ನದಾನ ಸೇವೆ ನೆರವೇರಿತು ಎಂದು ಶ್ರೀ ನಂದ ಕಿಶೋರ ಆಚಾರ್ಯರು ತಿಳಿಸಿದರು

ಸಂಜೆಯ ಕಾರ್ಯಕ್ರಮದಲ್ಲಿ ರಥೋತ್ಸವ, ಗಜವಾಹನೋತ್ಸವ, ಪಲ್ಲಕ್ಕಿ ಉತ್ಸವ, ತೊಟ್ಟಿಲು ಸೇವೆ, ಅಷ್ಟಾವಧಾನಮಹಾಮಂಗಳಾರತಿ ಜರುಗಿತು. ತದನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದುಷಿ ಶ್ರೀಮತಿ ಸಮನಾ ಆಚಾರ್ ಅವರ ನಿರ್ದೇಶನದಲ್ಲಿ ನಾಟ್ಯ ವೇದ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನವು ಚಿಕ್ಕ ಮಕ್ಕಳಿಂದ ನೆರವೇರಿತು.

ಗುರುವಾರದ ಪ್ರಯುಕ್ತ ಸಹಸ್ರಾರು ಭಕ್ತರು ಗುರು ರಾಯರ ಸನ್ನಿಧಿಗೆ ಆಗಮಿಸಿ ಗುರು ರಾಯರ ದರ್ಶನ ಪಡೆದು ತೀರ್ಥ ಫಲ ಮಂತ್ರಾಕ್ಷತೆ ಪ್ರಸಾದವನ್ನು ಸ್ವೀಕರಿಸಿ ಮತ್ತು ಭರತನಾಟ್ಯ ಕಾರ್ಯಕ್ರಮದಲ್ಲೂ ಭಾಗವಹಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು ಈ ಎಲ್ಲಾ ಕಾರ್ಯಕ್ರಮಗಳು ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಅಚ್ಚುಕಟ್ಟಾದ ವ್ಯವಸ್ಥೆಯೊಂದಿಗೆ ಜರುಗಿದವು.



## ರಾಮಾಯಣ



**ಭರತನು ಶ್ರೀ ರಾಮನನ್ನು ಅಯೋಧ್ಯಾ ಪಟ್ಟಣಕ್ಕೆ ಕರೆದದ್ದು**

• ಹಿಂದಿನ ಸಂಚಿಕೆಯಿಂದ

101ನೆಯ ಅಧ್ಯಾಯ

ದಶರಥರಾಜನಿಗೆ ನೀನೇ ಪ್ರಿಯಪುತ್ರನು, ನೀನು ವನವಾಸಕ್ಕೆ ಬಂದಮೇಲೆ ನೀನು ಬಂದ ಮಾರ್ಗದಲ್ಲಿಯೇ ದೃಷ್ಟಿಯನ್ನಿಟ್ಟು ನಿನ್ನ ಅಗಲಿಕೆಯಿಂದುಂಟಾದ ದುಃಖಾತಿನಯದಿಂದ ಹಂಬಲಿಸುತ್ತ ನಿನ್ನನ್ನು ಬಿಟ್ಟಿರಲಾರದೆ ನಿನ್ನನ್ನೇ ನೆನ್ನೆಯುತ್ತ ಮಹಾರಾಜನು ಶರೀರತ್ಯಾಗವನ್ನು ಮಾಡಿದನು ಎಂದು ಹೇಳಿದನು.

### ಶ್ರೀರಾಮನು ದಶರಥನಿಗೆ ಉತ್ತರ ಕ್ರಿಯೆಗಳನ್ನು ಮಾಡಿದ್ದು

ಭರತ ಆಮೇಲೆ ಶ್ರೀರಾಮನು ದೇವೇಂದ್ರನ ವಜ್ರಾಯುಧದಿಂದ ಗಾಯಪಟ್ಟ ಪರ್ವತದಂತೆ, ದಶರಥರಾಯನು ಸ್ವರ್ಗಸ್ಥನಾದನೆಂಬ ಭರತನ ವಾಕ್ಯದಿಂದ ಅಂತರಂಗದಲ್ಲಿ ಗಾಯಪಟ್ಟವನಾಗಿ ಚೈತನ್ಯಗುಂದಿ ಮೂರ್ಛಾಗತನಾಗಿ ಬಿದ್ದನು. ಆಮೇಲೆ ಮೂರ್ಛ ತಿಳಿದದ್ದು ಕಣ್ಣುಗಳಿಂದ ಧಾರಾಪಾತವಾಗಿ ನೀರುಬಿಡುತ್ತ ದೈನ್ಯಸ್ವರದಿಂದ ಭರತನನ್ನು ಕುರಿತು ಭರತ, ನಮ್ಮ ತಂದೆಯು ಸ್ವರ್ಗಸ್ಥನಾದಮೇಲೆ ನಮ್ಮಿಂದಾಗುವ ಕಾರ್ಯವೇನು ಇನ್ನು ಮಹಾತ್ಮನಾದ ದಶರಥರಾಯನಿಂದ ಪರಿಪಾಲಿಸಲ್ಪಟ್ಟ ಅಯೋಧ್ಯಾಪಟ್ಟಣವನ್ನು ರಕ್ಷಿಸುವವರಾರು ಆ ಮಹಾರಾಜನ ಉದರದಲ್ಲಿ ನಾನೊಬ್ಬ ಪಾಪಾತ್ಮನು ಜನಿಸಿದೆನು. ನನ್ನ ಅಗಲಿಕೆಯಿಂದುಂಟಾದ ದುಃಖದಿಂದಲೇ ಮಹಾರಾಜನು ಸ್ವರ್ಗಸ್ಥನಾದನು. ನಾನು ನನ್ನ ತಂದೆಗೆ ಸಂಸ್ಕಾರವನ್ನು ಮಾಡುವುದಕ್ಕೂ ಆಗಲಿಲ್ಲ. ನೀನೂ ಶತ್ರುಘ್ನನೂ ಕೃತಾರ್ಥರಾದಿರಿ. ನೀವು ದಶರಥರಾಜನಿಗೆ ವಿಧ್ಯುಕ್ತವಾಗಿ ಅಗ್ನಿ ಸಂಸ್ಕಾರವನ್ನು ಮಾಡಿದಿರಿ. ನಾನು ಮುಂದೆ ಹದಿನಾಲ್ಕು ವರುಷಗಳೆಂಬ ಮಿತಿಯು ತೀರಿದಮೇಲೆ ನಮ್ಮ ತಂದೆ ಯಿಲ್ಲದೆ ಅಯೋಧ್ಯಾನಗರಕ್ಕೆ ಹೋಗಲಾರೆ. ಹಿಂದೆ ನಮ್ಮ ತಂದೆಯು ವಾತ್ಸಲ್ಯದಿಂದ ನನ್ನನ್ನು ಸಂತೈಸುತ್ತಿದ್ದನು. ನಾನು ಅಂಥ ಮೃದುನುಡಿಗಳನ್ನು ಇನ್ನೆಂದಿಗೆ ಕೇಳುವನು ಎಂದು ಹಂಬಲಿಸಿ ಸೀತಾದೇವಿಯ ಸಮೀಪಕ್ಕೆ ಹೋಗಿ ಕಣ್ಣೀರುಬಿಡುತ್ತ ದುಃಖಾತಿಶಯದಿಂದ ಸೀತೆ ನಿನ್ನ ಮಾವನಾದ ದಶರಥರಾಜನು ಸ್ವರ್ಗಸ್ಥನಾದನು. ಲಕ್ಷ್ಮಣ, ನೀನು ತಂದೆಯಿಲ್ಲದವನಾದೆ. ನಮ್ಮ ತಂದೆಯು ಲೋಕಾಂತರವನ್ನೈದಿದನೆಂಬ ದುಃಖಕರವಾದ ಸಂಗತಿಯನ್ನು ಭರತನು ಹೇಳುತ್ತಿದ್ದಾನೆ ಎಂದು ಹೇಳಿದನು. ಅದನ್ನು ಕೇಳಿ ಸೀತಾಲಕ್ಷ್ಮಣರು ಅಧಿಕವಾದ ದುಃಖ ಸಮುದ್ರದಲ್ಲಿ ಮುಳುಗಿದರು. ಶ್ರೀರಾಮನು ತಮ್ಮಂದಿರೆಲ್ಲರೂ ಸೀತಾಸಮೇತನಾದ ಶ್ರೀ ರಾಮನನ್ನು ಸಂತೈಸುತ್ತಿದ್ದರು. ಕಣ್ಣೀರು ತುಂಬಿ ತನ್ನ ಪತಿಯನ್ನು ನೋಡುವುದಕ್ಕೂ ಸಮರ್ಥಳಲ್ಲದೆ ಇದ್ದಳು. ರೋದನಮಾಡುತ್ತಿದ್ದ ಸೀತಾದೇವಿಯನ್ನು ಸಂತೈಸುತ್ತ ಲಕ್ಷ್ಮಣನನ್ನು ಕುರಿತು ಲಕ್ಷ್ಮಣ, ನಾರುಬಟ್ಟೆಗಳನ್ನೂ ಇಂಗುದೀಪಿಕ್ಕಾಕವನ್ನೂ ತೆಗೆದುಕೊಂಡು ಬಾ. ಮಹಾತ್ಮನಾದ ದಶರಥರಾಯ ನಿಗೆಉತ್ತರಕ್ರಿಯೆಗಳನ್ನು ಮಾಡೋಣ. ಸೀತಾದೇವಿಯು ಮುಂದೆ ನಡೆಯಲಿ, ಅವಳ ಹಿಂದೆ ನೀನು ಹೋಗು. ನಾನು ಹಿಂದೆ ಬರುತ್ತೇನೆ. ಅಯ್ಯೋ, ನಮಗೆ ಇಂಥ ಅವಸ್ಥೆ ಬಂದಿತಲ್ಲ ಎಂದು ಹೇಳಿದನು.

ಮುಂದುವರಿಯುವುದು...



## ಪ್ರತಿದಿನ ಮೊಟ್ಟೆ ತಿನ್ನುವುದರಿಂದ ಕೊಲೆಸ್ಟ್ರಾಲ್ ಹೆಚ್ಚಾಗುತ್ತಾ?

ನೀವೂ ಪ್ರತಿದಿನ ಮೊಟ್ಟೆ ಸೇವಿಸುತ್ತೀರಾ? ಹಾಗಾದ್ರೆ ಮೊಟ್ಟೆ, ಕೊಲೆಸ್ಟ್ರಾಲ್ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಪ್ರತಿದಿನ ಮೊಟ್ಟೆ ತಿನ್ನುವುದರಿಂದ ಕೊಲೆಸ್ಟ್ರಾಲ್ ಹೆಚ್ಚಾಗುತ್ತಾ ಎನ್ನುವುದನ್ನು ನಾವಿಲ್ಲಿ ತಿಳಿಯೋಣ.

ಮೊಟ್ಟೆ ಸೇವನೆ ಆರೋಗ್ಯಕ್ಕೆ ತುಂಬಾನೇ ಒಳ್ಳೆಯದು ಎನ್ನಲಾಗುತ್ತದೆ. ಪೌಷ್ಟಿಕಾಂಶದಿಂದ ಕೂಡಿರುವ ಮೊಟ್ಟೆಯು ಪ್ರೋಟೀನ್, ವಿಟಮಿನ್‌ಗಳು, ಖನಿಜಗಳು, ಆರೋಗ್ಯಕರ ಕೊಬ್ಬುಗಳಿಂದ ಸಮೃದ್ಧವಾಗಿವೆ. ಮೊಟ್ಟೆಯ ಹಳದಿ ಲೋಳೆಯಲ್ಲಿ ಕೊಲೆಸ್ಟ್ರಾಲ್ ಕೂಡ ಇರುತ್ತದೆ. ಹಾಗಾಗಿ ಪ್ರತಿದಿನ ಮೊಟ್ಟೆ ಸೇವಿಸುವುದು ಕೊಲೆಸ್ಟ್ರಾಲ್ ಹೆಚ್ಚಳಕ್ಕೆ ಕಾರಣವೇ ಎನ್ನುವ ಪ್ರಶ್ನೆ ಪ್ರತಿಯೊಬ್ಬರಲ್ಲೂ ಇದೆ. ನಿಮ್ಮಲ್ಲೂ ಈ ಪ್ರಶ್ನೆಗಳಿದ್ದರೆ ಇಲ್ಲಿದೆ ಉತ್ತರ.

**ಮೊಟ್ಟೆ ಮತ್ತು ಕೊಲೆಸ್ಟ್ರಾಲ್ ನಡುವಿನ ಸಂಪರ್ಕ:** ಮೊಟ್ಟೆಯ ಹಳದಿ ಲೋಳೆಯಲ್ಲಿ ಸುಮಾರು 186 ಮಿಗ್ರಾಂ ಕೊಲೆಸ್ಟ್ರಾಲ್ ಇರುತ್ತದೆ. ಆದರೆ ಬಿಳಿ ಭಾಗವು ಕೊಲೆಸ್ಟ್ರಾಲ್ ಹೊಂದಿರುವುದಿಲ್ಲ. ಆಹಾರದಲ್ಲಿ ಕೊಲೆಸ್ಟ್ರಾಲ್ ಹೆಚ್ಚಾಗುವುದರಿಂದ ರಕ್ತದಲ್ಲಿನ ಕೊಲೆಸ್ಟ್ರಾಲ್ ಮಟ್ಟವೂ ಹೆಚ್ಚಾಗುತ್ತದೆ ಎಂದು ಹಿಂದಿನ ಸಂಶೋಧನೆಗಳು ಹೇಳುತ್ತವೆ. ಇದು ಹೃದಯ ಕಾಯಿಲೆಗಳ ಅಪಾಯಕ್ಕೆ ಕಾರಣವಾಗಬಹುದು. ಆದರೆ ಹೊಸ ಅಧ್ಯಯನಗಳು ಮೊಟ್ಟೆಗಳಲ್ಲಿನ ಕೊಲೆಸ್ಟ್ರಾಲ್ ದೇಹದ ಕೊಲೆಸ್ಟ್ರಾಲ್ ಮಟ್ಟವನ್ನು ಟ್ರಾನ್ಸ್ ಕೊಬ್ಬು ಸ್ಯಾಚುರೇಟೆಡ್ ಕೊಬ್ಬಿನಂತಹ ಅಂಶಗಳಷ್ಟು ಪರಿಣಾಮ ಬೀರುವುದಿಲ್ಲ ಎಂದು ತಿಳಿಸುತ್ತವೆ. **ಪ್ರತಿದಿನ ಮೊಟ್ಟೆಗಳನ್ನು ತಿನ್ನುವುದು ಸುರಕ್ಷಿತವೇ:** ಹೆಚ್ಚಿನ ಆರೋಗ್ಯವಂತ ಜನರು ವಾರಕ್ಕೆ 7 ಮೊಟ್ಟೆಗಳನ್ನು ಯಾವುದೇ ಹಾನಿಯಿಲ್ಲದೆ ತಿನ್ನಬಹುದು. ಕೆಲವು ಸಂಶೋಧನೆಗಳು ಮೊಟ್ಟೆಗಳನ್ನು ಸೀಮಿತ ಪ್ರಮಾಣದಲ್ಲಿ ತಿನ್ನುವುದನ್ನು ಉತ್ತಮ ಎನ್ನುತ್ತದೆ.

ಪಾರ್ಶ್ವವಾಯು ಅಪಾಯವನ್ನು ಕಡಿಮೆ ಮಾಡಬಹುದು. ಪ್ರೋಟೀನ್ ಸ್ನಾಯುಗಳನ್ನು ನಿರ್ಮಿಸಲು ಸಹಾಯ ಮಾಡುತ್ತದೆ. ಮಧುಮೇಹ ಮತ್ತು ಹೃದ್ರೋಗಿಗಳು ಮೊಟ್ಟೆಗಳನ್ನು ಸೀಮಿತ ಪ್ರಮಾಣದಲ್ಲಿ ತಿನ್ನಬೇಕು ಇದು ಹೃದಯ ಕಾಯಿಲೆಗಳ ಅಪಾಯ ಹೆಚ್ಚಾಗಿಸಬಹುದು ಎಂದು ಕೆಲವು ಅಧ್ಯಯನಗಳು ತಿಳಿಸುತ್ತವೆ.

**ಯಾವ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು?:** ಮೊಟ್ಟೆಗಳ ಜೊತೆಗೆ, ತರಕಾರಿಗಳು, ಹಣ್ಣುಗಳು ಮತ್ತು ಧಾನ್ಯಗಳಂತಹ ಫೈಬರ್ ಸಮೃದ್ಧವಾಗಿರುವ ಆಹಾರವನ್ನು ತೆಗೆದುಕೊಳ್ಳಿ. ಮೊಟ್ಟೆಗಳನ್ನು ಎಣ್ಣೆ ಅಥವಾ ಬೆಣ್ಣೆಯಲ್ಲಿ ಹುರಿಯುವ ಬದಲು ಬೇಯಿಸಿ ತಿನ್ನಿರಿ. ನೀವು ಪ್ರತಿದಿನ ಮೊಟ್ಟೆಗಳನ್ನು ತಿನ್ನುತ್ತಿದ್ದರೆ, ಕೆಂಪು ಮಾಂಸ, ಸಂಸ್ಕರಿಸಿದ ಆಹಾರ ಮತ್ತು ಹೆಚ್ಚಿನ ಕೊಬ್ಬಿನ ಡೈರಿ ಉತ್ಪನ್ನಗಳನ್ನು ಬಹಳ ಕಡಿಮೆ ಪ್ರಮಾಣದಲ್ಲಿ ಸೇವಿಸಿ.



### ಪ್ರತಿದಿನ 1-2 ಮೊಟ್ಟೆ ತಿನ್ನಬಹುದು

**ಪ್ರತಿದಿನ 1-2 ಮೊಟ್ಟೆಗಳನ್ನು ತಿನ್ನುವುದು ಆರೋಗ್ಯಕ್ಕೆ ಸುರಕ್ಷಿತವಾಗಿದೆ ಮತ್ತು ಕೊಲೆಸ್ಟ್ರಾಲ್ ಮಟ್ಟವನ್ನು ಹೆಚ್ಚಿಸುವುದಿಲ್ಲ ಎಂದು ಅರ್ಥಮಾಡಿಕೊಂಡಿರಬೇಕು. ನಿಮಗೆ ಈಗಾಗಲೇ ಹೆಚ್ಚಿನ ಕೊಲೆಸ್ಟ್ರಾಲ್, ಮಧುಮೇಹ ಅಥವಾ ಹೃದ್ರೋಗವಿದ್ದರೆ, ಮೊಟ್ಟೆಯ ಹಳದಿ ಭಾಗವನ್ನು ಬಹಳ ಕಡಿಮೆ ಪ್ರಮಾಣದಲ್ಲಿ ಸೇವಿಸಿ ಅಥವಾ ವೈದ್ಯರನ್ನು ಸಂಪರ್ಕಿಸಿದ ನಂತರ ಅದರ ಪ್ರಮಾಣವನ್ನು ನಿರ್ಧರಿಸಿ. ಸಮತೋಲಿತ ಆಹಾರ ಮತ್ತು ನಿಯಮಿತ ವ್ಯಾಯಾಮದ ಜೊತೆಗೆ ಮೊಟ್ಟೆಗಳನ್ನು ತಿನ್ನುವುದು ನಿಮ್ಮ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ.**

ಉದಯವಾಹಿನಿ
ಪ್ರಾದೇಶಿಕ
ಶನಿವಾರ 19 ಜುಲೈ 2025


• ಜಿಲ್ಲೆಯಲ್ಲಿ ಹೊಸ ಬಸ್‌ಗಳು ಕಾರ್ಯಾಚರಣೆ ಆರಂಭಿಸಿದರೆ ಸಾರ್ವಜನಿಕರು ಪರದಾಡುವುದು ತಪ್ಪುತ್ತದೆ

# ಜಿಲ್ಲೆಗೆ 300 ಹೊಸ ಬಸ್ ಶೀಘ್ರ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ

• ಉದಯವಾಹಿನಿ ಬೆಳಗಾವಿ

ಜಿಲ್ಲೆಯಲ್ಲಿ ಹೊಸ ಬಸ್‌ಗಳಿಗೆ ಬೇಡಿಕೆ ಇದ್ದು, ಶೀಘ್ರ 300 ಬಸ್ ಒದಗಿಸಲಾಗುವುದು. ಈ ಪೈಕಿ 100 ಎಲೆಕ್ಟ್ರಿಕಲ್ ಬಸ್‌ಗಳು ಇರಲಿವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಇಲ್ಲಿನ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ನಿರ್ಮಿಸಿದ ಬೆಳಗಾವಿ ವಿಭಾಗದ ಜಂಟಿ ಸಾರಿಗೆ ಆಯುಕ್ತರು ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಕಟ್ಟಡವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಬೆಳಗಾವಿ ಜಿಲ್ಲೆಯಲ್ಲಿ ಹೊಸ ಬಸ್‌ಗಳು ಕಾರ್ಯಾಚರಣೆ ಆರಂಭಿಸಿದರೆ ಸಾರ್ವಜನಿಕರು ಪರದಾಡುವುದು ತಪ್ಪುತ್ತದೆ. ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳ ಕುಂದುಕೊರತೆ ಪರಿಹರಿಸಲು ಅನುಕೂಲವಾಗುತ್ತದೆ' ಎಂದರು.

'ಟ್ರ್ಯಾಕ್ಟರ್‌ಗಳು ಮತ್ತು ಇತರೆ ವಾಹನಗಳಲ್ಲಿ ಧ್ವನಿವರ್ಧಕ ವ್ಯವಸ್ಥೆ ಅಳವಡಿಸಿ, ಹೆಚ್ಚಿನ ಪ್ರಮಾಣದಲ್ಲಿ ಶಬ್ದ ಮಾಡುತ್ತ ಅಪಘಾತಕ್ಕೆ ಕಾರಣವಾಗುವವರ ವಿರುದ್ಧ ಪ್ರಕರಣ ದಾಖಲಿಸುವಂತೆ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ' ಎಂದು ತಿಳಿಸಿದರು. ಸರ್ಕಾರಕ್ಕೆ ಹೆಚ್ಚಿನ ಆದಾಯ ತರುವ ಇಲಾಖೆಗಳಲ್ಲಿ ಸಾರಿಗೆ ಇಲಾಖೆಯೂ ಒಂದಾಗಿದೆ. ವಿವಿಧ ಕೆಲಸಗಳ ನಿಮಿತ್ತ ಕಚೇರಿಗೆ ಬರುವವರಿಗೆ ಅನುಕೂಲ ಕಲ್ಪಿಸಿಕೊಡಬೇಕು. ಈ ವರ್ಷ 15 ಸಾವಿರ ಕೋಟಿ ಆದಾಯ ಸಂಗ್ರಹದ ಗುರಿ ನೀಡಲಾಗಿದೆ. ಅದನ್ನು ಈಡೇರಿಸಲು ಸಿಬ್ಬಂದಿ ಶ್ರಮಿಸಬೇಕು. ಕಚೇರಿ ಆವರಣಗಳಲ್ಲಿ ಮಧ್ಯವರ್ತಿಗಳಿಗೆ ಅವಕಾಶ ನೀಡಬಾರದು' ಎಂದರು.

'ಸಾರಿಗೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇದೆ. ಖಾಲಿ ಇರುವ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸ್ಮಾರ್ಟ್‌ಸಿಟಿ ಯೋಜನೆಯಡಿ ನಿರ್ಮಿಸಿದ ನಗರ ಬಸ್ ನಿಲ್ದಾಣ ಕಾಮಗಾರಿ ಶೀಘ್ರ ಲೋಕಾರ್ಪಣೆ ಮಾಡಲಾಗುವುದು' ಎಂದು ತಿಳಿಸಿದರು.

ಶಾಸಕರಾದ ಆಸಿಫ್ ಸೇಠ್, ಮಹಾಂತೇಶ ಕೌಜಲಗಿ, ಬುಡಾ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಸಮಿತಿ ಅಧ್ಯಕ್ಷ ವಿನಯ ನಾವಲಗಟ್ಟಿ, ನಗರ ಪೊಲೀಸ್ ಆಯುಕ್ತ ಭೂಷಣ ಬೊರಸೆ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಇತರರಿದ್ದರು. ಬೆಳಗಾವಿ ವಿಭಾಗದ ಜಂಟಿ ಸಾರಿಗೆ ಆಯುಕ್ತ ಎಂ.ಪಿ.ಓಂಕಾರೇಶ್ವರಿ ಸ್ವಾಗತಿಸಿದರು.


ಉದಯವಾಹಿನಿ ಚಿತ್ರ

**100 ಎಲೆಕ್ಟ್ರಿಕಲ್ ಬಸ್**

### ಚಾಲನಾ ಪರವಾನಗಿ ನೀಡುವ ವ್ಯವಸ್ಥೆ ಬಲಪಡಿಸಿ: ಸತೀಶ

ಭವಿಷ್ಯದಲ್ಲಿ ಅಪಘಾತಗಳ ಪ್ರಮಾಣ ತಗ್ಗಿಸುವ ನಿಟ್ಟಿನಲ್ಲಿ ವಾಹನಗಳ ಚಾಲನಾ ಪರವಾನಗಿ ನೀಡುವ ವ್ಯವಸ್ಥೆ ಬಲಪಡಿಸುವ ಅಗತ್ಯವಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಸಾರಿಗೆ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳು ಅಪಘಾತ ವಲಯಗಳನ್ನು ಗುರುತಿಸಿ, ಅಪಘಾತಗಳ ಪ್ರಮಾಣ ಕಡಿಮೆಗೊಳಿಸಲು ಕ್ರಮ ವಹಿಸಬೇಕು. ಕೆಲವು ಟ್ರ್ಯಾಕ್ಟರ್‌ನವರು ಧ್ವನಿವರ್ಧಕ ವ್ಯವಸ್ಥೆ ಅಳವಡಿಸಿಕೊಂಡು, ಜೋರಾಗಿ ಶಬ್ದ ಮಾಡುತ್ತ ಸಂಚರಿಸುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು. ವೀಲಿಂಗ್‌ನಲ್ಲಿ ತೊಡಗುವ ದ್ವಿಚಕ್ರ ವಾಹನ ಸವಾರರ ವಿರುದ್ಧವೂ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ಬಸ್‌ಗಳ ಕೊರತೆಯಿಂದ ಸಾರ್ವಜನಿಕರಿಗೆ ಅದರಲ್ಲೂ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಹಾಗಾಗಿ ಸಾರಿಗೆ ಸಂಸ್ಥೆಯ ಬೆಳಗಾವಿ ಹಾಗೂ ಚಿಕ್ಕೋಡಿ ವಿಭಾಗಗಳಿಗೆ 200 ಬಸ್‌ಗಳನ್ನು ಒದಗಿಸಬೇಕು ಎಂದರು.

### ಜನಸ್ನೇಹಿಯಾಗಿ ಕಾರ್ಯನಿರ್ವಹಿಸಿ: ಹೆಬ್ಬಾಳ್ಕರ್

ಬೆಳಗಾವಿ ನಗರ ಈಗ ವೇಗವಾಗಿ ಬೆಳೆಯುತ್ತಿದೆ. ಇಲ್ಲಿ 10 ಕೋಟಿ ವೆಚ್ಚದಲ್ಲಿ ಸಾರಿಗೆ ಇಲಾಖೆಯ ಹೊಸ ಕಟ್ಟಡ ನಿರ್ಮಾಣವಾಗಿದ್ದು, ಸಿಬ್ಬಂದಿ ಜನಸ್ನೇಹಿಯಾಗಿ ಕರ್ತವ್ಯ ನಿರ್ವಹಿಸಬೇಕು. ಸಾರ್ವಜನಿಕರಿಗೆ ತ್ವರಿತವಾಗಿ ಸೇವೆ ಒದಗಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕೋರಿದರು. ಗ್ಯಾರಂಟಿ ಯೋಜನೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅಭಿವೃದ್ಧಿಯಾಗುತ್ತಿಲ್ಲ ಎಂದು ಬಿಜೆಪಿಯವರು ಸುಳ್ಳು ಪ್ರಚಾರ ಮಾಡುತ್ತಿದ್ದಾರೆ. ನಾವು ಗ್ಯಾರಂಟಿಗಳ ಅನುಷ್ಠಾನದೊಂದಿಗೆ ಅಭಿವೃದ್ಧಿ ಕೆಲಸಗಳನ್ನು ಮುಂದುವರಿಸಿಕೊಂಡು ಬಂದಿದ್ದೇವೆ. ನಮ್ಮ ಗ್ಯಾರಂಟಿಗಳನ್ನು ಟೀಕಿಸುತ್ತಿದ್ದ ಬಿಜೆಪಿಯವರೇ ಈಗ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ್ದಾರೆ' ಎಂದು ಲೇವಡಿ ಮಾಡಿದರು.

## ಮಿನಿ ನ್ಯೂಸ್

### ಬಗರ್ ಹುಕುಂ ಸಾಗುವಳಿದಾರರ ಜಮೀನು ಸಕ್ರಮಗೊಳಿಸಲು ಆಗ್ರಹಿಸಿ ಧರಣಿ

• ಉದಯವಾಹಿನಿ ಕಲಬುರಗಿ

ದಲಿತರ ಭೂಮಿ-ವಸತಿ ಹಕ್ಕಿಗಾಗಿ ಮತ್ತು 50,53, 57 ಅರ್ಜಿ ಸಲ್ಲಿಸಿದ ಬಗರ್ ಹುಕುಂ ಸಾಗುವಳಿದಾರರ ಜಮೀನು ಸಕ್ರಮಗೊಳಿಸಲು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಾಲ್ಲೂಕ ಸಮಿತಿ ನೇತೃತ್ವದಲ್ಲಿ ನಗರದ ತಹಶೀಲ್ದಾರ ಕಚೇರಿ ಮುಂದೆ ಪ್ರತಿಭಟನಾ ಧರಣಿ ನಡೆಸಲಾಯಿತು.

ಸಮಿತಿ ಜಿಲ್ಲಾ ಸಂಚಾಲಕ ಸಂಜೀವಕುಮಾರ ಟಿ.ಜವಳಕರ, ರಾಜ್ಯ ಸಮಿತಿ ಸದಸ್ಯ ಅರ್ಜುನ ಗೊಬ್ಬೂರ, ವಿಭಾಗೀಯ ಸಂಚಾಲಕ ಶ್ರೀನಿವಾಸ ಖೇಳಗಿ, ತಾಲ್ಲೂಕ ಸಂಚಾಲಕ ಮೋಹನ್ ಎಸ್. ಕಟ್ಟಿಮನಿ, ಸಂಘಟನಾ ಸಂಚಾಲಕರಾದ ಗುರುಪುತ್ರ, ಹೊಸಮನಿ, ಜಿಲ್ಲಾ ಸಂಘಟನಾ ಸಂಚಾಲಕ ಕಪಿಲ್ ಸಿಂಗೆ ಸೇರಿದಂತೆ ಮತ್ತಿತರರು ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

### ನ್ಯಾಯಾಲಯಕ್ಕೆ ಶಂಕಿತ ನಕ್ಸಲರು ಹಾಜರು

• ಉದಯವಾಹಿನಿ ಕುಂದಾಪುರ

ಕೇರಳ ಹಾಗೂ ಬೆಂಗಳೂರಿನ ಜೈಲುಗಳಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಮೂವರು ಶಂಕಿತ ನಕ್ಸಲರನ್ನು ಬಿಗಿ ಭದ್ರತೆಯಲ್ಲಿ ಇಲ್ಲಿನ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಕುಂದಾಪುರ ಪೊಲೀಸ್ ಉಪವಿಭಾಗ ವ್ಯಾಪ್ತಿಯ ಶಂಕರನಾರಾಯಣ ಹಾಗೂ ಅಮಾಸೆಬೈಲು ಪೊಲೀಸ್ ಠಾಣಾ ವ್ಯಾಪ್ತಿಯ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿಗಳನ್ನು ಖುದ್ದು ಹಾಜರುಪಡಿಸಲು ನ್ಯಾಯಾಲಯದ ಸೂಚಿಸಿದ ಕಾರಣ, ಕೇರಳದ ಜೈಲಿನಲ್ಲಿದ್ದ ಬಿ.ಜಿ.ಕೃಷ್ಣಮೂರ್ತಿ, ಸಾವಿತ್ರಿ ಆಲಿಯಾಸ್ ಉಷಾ ಹಾಗೂ ಬೆಂಗಳೂರಿನ ಜೈಲಿನಲ್ಲಿದ್ದ ವನಜಾಕ್ಷಿ ಅವರನ್ನು ಇಲ್ಲಿನ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ.


ಶಂಕಿತ ನಕ್ಸಲರಿಗೆ ಸಂಬಂಧಿಸಿದಂತೆ ವಿವಿಧ ಪೊಲೀಸ್ ಠಾಣೆಗಳಲ್ಲಿರುವ ಪ್ರಕರಣಗಳ ತನಿಖೆಗಳು ವಿವಿಧ ನ್ಯಾಯಾಲಯಗಳಲ್ಲಿ ನಡೆಯುತ್ತಿದ್ದು, ಕುಂದಾಪುರ ಉಪ ವಿಭಾಗಕ್ಕೆ ಸಂಬಂಧಿಸಿದ ತನಿಖೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಅವರ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಎಚ್.ಡಿ.ಕುಲಕರ್ಣಿ ಅವರು ನಿರ್ವಹಿಸುತ್ತಿದ್ದಾರೆ. ನ್ಯಾಯಾಲಯದ ಪ್ರಕ್ರಿಯೆ ಬಳಿಕ ಮೂವರನ್ನು ಮರಳಿ ಜೈಲುಗಳಿಗೆ ಕಳುಹಿಸಲಾಗಿದೆ.

## ಜಿಲ್ಲಾ ಉಸ್ತುವಾರಿ ಸಚಿವರಿಂದ ಇಂದಿರಾ ಕ್ಯಾಂಟೀನ್ ಉದ್ಘಾಟನೆ

• ಉದಯವಾಹಿನಿ ಯಾದಗಿರಿ

ಕೆಂಭಾವಿ ಪಟ್ಟಣದ ಹೊಸ ಬಸ್ ನಿಲ್ದಾಣದ ಆವರಣದಲ್ಲಿ 82 ಲಕ್ಷ ರೂ ವೆಚ್ಚದಲ್ಲಿ ನಿರ್ಮಾಣವಾದ ಇಂದಿರಾ ಕ್ಯಾಂಟಿನ್ ಶುಕ್ರವಾರ ಜಿಲ್ಲಾ ಉಸ್ತುವಾರಿ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಇಂದಿನ ದುಬಾರಿ ಕಾಲಮಾನದಲ್ಲಿ ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಯೋಜನೆಯ ಕೊಡುಗೆಯಾದ ಇಂದಿರಾ ಕ್ಯಾಂಟೀನ್ ಬಹು ಜನರಿಗೆ ವರದಾನವಾಗಿದೆ. ಬಡವರು ಕೂಲಿಕಾರ್ಮಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅತೀ ಕಡಿಮೆ ದರದಲ್ಲಿ ಹಸಿವು ನೀಗಿಸುವ ಮಹದುದ್ದೇಶದಿಂದ ಇಂದಿರಾ ಕ್ಯಾಂಟೀನ್ ಅಸ್ತಿತ್ವಕ್ಕೆ ತರಲಾಗಿದ್ದು. ಕ್ಯಾಂಟೀನ್‌ನಲ್ಲಿ ಉತ್ತಮ ಗುಣಮಟ್ಟದ, ಶುಚಿ, ರುಚಿಯಾದ ಆಹಾರ ದೊರೆಯುತ್ತದೆ. ಜನತೆಯೂ ಕೂಡ ಸ್ವಚ್ಛತೆಗೆ ಎಚ್ಚರ ವಹಿಸಿ ಕ್ಯಾಂಟೀನಿನ ಸದುಪಯೋಗ ಪಡಿಸಿಕೊಳ್ಳುವಂತೆ ತಿಳಿಸಿದರು. ಈ ಸಂದರ್ಭದಲ್ಲಿ ಬಸರಡ್ಡಿ ಅನುಪುರ್, ಶಿವಮಾಂತ ಚಂದಾಪುರ, ಬ್ಲಾಕ್ ಅಧ್ಯಕ್ಷ ಬಸನಗೌಡ ಹೊಸಮನಿ, ಜಿಪಂ ಮಾಜಿ ಅಧ್ಯಕ್ಷ ಸಿದ್ದನಗೌಡ ಪೊ. ಪಾಟೀಲ್, ಶರಣಪ್ಪ ಸಲದಪುರ, ವಾಮನರಾವ್ ದೇಶಪಾಂಡೆ, ಬಸವರಾಜ್ ಚಿಂಚೋಳಿ, ಪುರಸಭೆ ಅಧ್ಯಕ್ಷ ರಹೇಮಾನ ಸಪಟೇಲ್ ಯಲಗೋಡ ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

## ಶುಂಠಿಗೆ ಅಂಗಮಾರಿ- ಬಿಳಿ ಚುಕ್ಕಿ ರೋಗ: ಪರಿಹಾರಕ್ಕೆ ಒತ್ತಾಯ

• ಉದಯವಾಹಿನಿ ಹಾಸನ

ಜಿಲ್ಲೆಯಲ್ಲಿ ಹಸಿ ಶುಂಠಿ ಬೆಳೆ ಅಂಗಮಾರಿ, ಬಿಳಿ ಚುಕ್ಕಿ ರೋಗಕ್ಕೆ ತುತ್ತಾಗಿದ್ದು, ಸರ್ಕಾರ ಅಗತ್ಯ ಔಷಧಿ ಮತ್ತು ಪರಿಹಾರ ವಿತರಿಸಬೇಕು ಎಂದು ಆಗ್ರಹಿಸಿ ರಾಜ್ಯ ಹಸಿ ಶುಂಠಿ ವರ್ತಕರ ಮತ್ತು ಬೆಳೆಗಾರರ ಸಂಘದ ಸದಸ್ಯರು ಹಾಗೂ ಬೆಳೆಗಾರರು ನಗರದ ಹೇಮಾವತಿ ಪ್ರತಿಮೆ ಎದುರು ಸಂಘಟಿತರಾದ ವರ್ತಕರು ಹಾಗೂ ಬೆಳೆಗಾರರು ಮೌನ ಜಾಥಾ ನಡೆಸಿ ಎನ್.ಆರ್ ವೃತದಿಂದ ಸಾಗಿ ಜಿಲ್ಲಾಧಿಕಾರಿ ಕಚೇರಿ ಎದುರು ಕೆಲಕಾಲ ಧರಣಿ ನಡೆಸಿದರು.

ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪ್ರಭಾಕರ್ ಮಾತನಾಡಿ, ಜಿಲ್ಲೆಯಲ್ಲಿ ವಾಣಿಜ್ಯ ಬೆಳೆಯಾದ ಆಲೂಗಡ್ಡೆ ಅಂಗಮಾರಿ ರೋಗಕ್ಕೆ ತುತ್ತಾದ ನಂತರ ಹಸಿ ಶುಂಠಿಯನ್ನು ವಾಣಿಜ್ಯ ಬೆಳೆಯಾಗಿ ಜಿಲ್ಲೆಯ 3-4 ತಾಲ್ಲೂಕುಗಳಲ್ಲಿ ಬೆಳೆಯಲಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಹಸಿ ಶುಂಠಿಗೂ ಸಹ ಅಂಗಮಾರಿ ಸೇರಿ ವಿವಿಧ ರೋಗಗಳು ಆವರಿಸುತ್ತಿದ್ದು, ನಿಖರವಾಗಿ ಯಾವ ರೋಗ ತಗುಲಿದೆ ಎಂದು ತಿಳಿಯುತ್ತಿಲ್ಲ. ಇದರಿಂದ ಬೆಳೆಗಾರರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸರ್ಕಾರ ಕೂಡಲೇ ತಜ್ಞರನ್ನು ನೇಮಿಸಿ ರೋಗ ಪತ್ತೆ ಹಾಗೂ ಔಷಧೋಪಚಾರ ಕುರಿತು ಬೆಳಗಾರಿಗೆ ಮಾಹಿತಿ ಒದಗಿಸಬೇಕು ಹಾಗೂ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.


ಉದಯವಾಹಿನಿ ಚಿತ್ರ

> ಹಸಿ ಶುಂಠಿಗೆ ರೋಗಭಾದೆಯಿಂದ ಸುಮಾರು 30ರಷ್ಟು ಬೆಳೆ ನಾಶವಾಗಿದೆ. ಪ್ರತಿ ಬೆಳೆಗಾರರು ಪ್ರತಿ ಎಕರೆಗೆ 4 ಲಕ್ಷದಿಂದ 4.5 ಲಕ್ಷವನ್ನು ಶುಂಠಿ ಬೆಳೆಯಲು ವೆಚ್ಚ ಮಾಡಿದ್ದಾರೆ. ಈ ರೋಗಕ್ಕೆ ನಿಖರವಾದ ಔಷಧಿ ದೊರೆಯುತ್ತಿಲ್ಲ. ಕಳಪೆ ಗುಣಮಟ್ಟದ ಔಷಧಿ ಮಾರಾಟ ಮಾಡಲಾಗುತ್ತಿದ್ದು, ಇದರಿಂದ ರೋಗ ಹತೋಟಿಗೆ ಬರುತ್ತಿಲ್ಲ. ಸರ್ಕಾರ ಕೃಷಿ ಇಲಾಖೆ ಮೂಲಕ ಸಬ್ಸಿಡಿ ದರದಲ್ಲಿ ರೈತರಿಗೆ ಔಷಧಿ ಪೂರೈಸಬೇಕು.
> -ವಿಶ್ವನಾಥ, ಸಂಘದ ಉಪಾಧ್ಯಕ್ಷ

## ಅಂಗಡಿ, ವಾಣಿಜ್ಯ ಸಂಸ್ಥೆಗಳು, ಗ್ಯಾರೇಜ್, ಹೊಟೇಲ್ ಮೇಲೆ ಹಠಾತ್ ದಾಳಿ

• ತಪಾಸಣೆ ನಡೆಸಿ 1 ಕಿಶೋರ ಕಾರ್ಮಿಕ ಮಗುವನ್ನು ರಕ್ಷಿಸಲಾಯಿತು

• ಉದಯವಾಹಿನಿ ಯಾದಗಿರಿ

ಪ್ಯಾನ್-ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಅಭಿಯಾನ ಪ್ರಗತಿ ಸ್ಪಷ್ಟವಾಗಿದೆ ಆದರೆ, ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿದೆ ಪ್ರಯತ್ನಗಳನ್ನು ವೇಗಗೊಳಿಸೋಣ ಎಂಬ ಧ್ಯೇಯವಾಕ್ಯದೊಂದಿಗೆ ಕೆಂಭಾವಿ ಭಾಗದಲ್ಲಿ ಹೆಚ್ಚಿನ ಮಕ್ಕಳು ಕೃಷಿ ಹಾಗೂ ಇನ್ನಿತರೆ ಕೆಲಸಗಳಿಗೆ ತೆರಳುತ್ತಿದ್ದು, ಮಕ್ಕಳನ್ನು ಶಾಲೆ ಬಿಡಿಸಿ ಕೃಷಿ ಹಾಗೂ ಅಂಗಡಿಗಳಲ್ಲಿ ಕೆಲಸಕ್ಕೆ ಕಳುಹಿಸದಂತೆ ಪಾಲಕ, ಪೋಷಕರು ಜಾಗೃತಿ ವಹಿಸಬೇಕು ಎಂದು ಯಾದಗಿರಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕರಾದ ಶ್ರೀ ರಿಯಾಜ್ ಪಟೇಲ್ ವರ್ಕನಳ್ಳಿ ಅವರು ಹೇಳಿದರು.

ಪ್ಯಾನ್-ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಅಭಿಯಾನ ಪ್ರಗತಿ ಸ್ಪಷ್ಟವಾಗಿದೆ ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿದೆ ಪ್ರಯತ್ನಗಳನ್ನು ವೇಗಗೊಳಿಸೋಣ ಅಂಗವಾಗಿ ಬಾಲ ಹಾಗೂ ಕಿಶೋರ ಕಾರ್ಮಿಕತೆಯಲ್ಲಿ ತೊಡಗಿರುವ ಮಕ್ಕಳನ್ನು , ಬೀದಿ ಪರಿಸ್ಥಿತಿಯಲ್ಲಿರುವ ಮಕ್ಕಳನ್ನು ರಕ್ಷಿಸಿ, ಪುನರ್ವಸತಿಗೊಳಿಸಿ ಶಿಕ್ಷಣ ಮುಂದುವರಿಕೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ 2025ರ ಜೂನ್ 1 ರಿಂದ ಆಗಸ್ಟ್ 31ರ ವರೆಗೆ ರಕ್ಷಣಾ ಕಾರ್ಯಚರಣೆಗೆ ಮಕ್ಕಳನ್ನು ಶಾಲೆ ಬಿಡಿಸಿ ಕೃಷಿ ಹಾಗೂ ಅಂಗಡಿಗಳಲ್ಲಿ ಕೆಲಸಕ್ಕೆ ಕಳುಹಿಸದಂತೆ ಪಾಲಕರು ಜಾಗೃತಿ ವಹಿಸಬೇಕು ಎಂದು ತಿಳಿಸಿದರು. ನಗರದಲ್ಲಿರುವ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ಗ್ಯಾರೇಜ್‌ಗಳು ಮತ್ತು ಹೊಟೇಲ್‌ಗಳಲ್ಲಿ ಹಠಾತ್ ದಾಳಿ, ತಪಾಸಣೆ ನಡೆಸಿ 1 ಕಿಶೋರ ಕಾರ್ಮಿಕ ಮಗುವನ್ನು ರಕ್ಷಿಸಲಾಯಿತು. ತಪಾಸಣೆ, ಹಠಾತ್ ದಾಳಿ ಸಂದರ್ಭದಲ್ಲಿ ಡಾನ್ ಬಾಸ್ಕೋ ಸಂಸ್ಥೆಯ ನಿರ್ದೇಶಕರಾದ ಫ್ರಾನ್ಸಿಸ್ ಶಾಬು, ಮಾರ್ಗದರ್ಶಿ ಸಂಸ್ಥೆಯ ತಾಯಮ್ಮ, ಕಾರ್ಮಿಕ ಇಲಾಖೆಯ ಎಲ್.ಎನ್ ಚೌಧರಿ, ರಮೇಶ್ ಕೆಲ್ಲೂರು, ಬಾಲು ನಾಯಕ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

> ಕಾರ್ಮಿಕ ಇಲಾಖೆಯಿಂದ ಜನ ಜಾಗೃತಿ, ಕಾನೂನು ಅರಿವು ನೆರವು ಕಾರ್ಯಕ್ರಮ ಬೀದಿನಾಟಕ, ಆಟೋ ಪ್ರಚಾರ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಇದನ್ನು ಮೀರಿಯೂ ಸಹ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡಲ್ಲಿ ಅಂತಹ ಅಂಗಡಿ ಮಾಲೀಕರ ವಿರುದ್ಧ 20,000 ರಿಂದ 50,000 ರೂ.ಗಳವರೆಗೆ ದಂಡ ಮತ್ತು 6 ತಿಂಗಳಿಂದ 2 ವರ್ಷದವರೆಗೆ ಜೈಲು ಶಿಕ್ಷೆ ಅಥವಾ ಎರಡನ್ನು ಸಹ ವಿಧಿಸಲಾಗುವುದು.
> -ಶಿವಪ್ಪ ಜಮಾದಾರ್, ಸುರಪುರ ಕಾರ್ಮಿಕ ನಿರೀಕ್ಷಕರಾದ

## ಸರ್ಕಾರಿ ಆಸ್ತಿ ರಕ್ಷಣೆ ಅಧಿಕಾರಿಗಳ ಹೊಣೆ

### ಅತಿಕ್ರಮಣವಾಗಿದ್ದರೆ ಕ್ರಮ: ದೇಶಪಾಂಡೆ


• ಉದಯವಾಹಿನಿ ಹಳಿಯಾಳ

ಸರ್ಕಾರಿ ಆಸ್ತಿಗಳ ಸಂರಕ್ಷಣೆ ಮಾಡುವುದು ಅಧಿಕಾರಿಗಳ ಜವಾಬ್ದಾರಿ. ಪಂಚಾಯಿತಿ ವ್ಯಾಪ್ತಿಯಲ್ಲಿ ಗಾಂವಠಾಣಾ ಮತ್ತಿತ್ತರ ಭಾಗದಲ್ಲಿ ಅತಿಕ್ರಮಣ ಮಾಡಿದ್ದಲ್ಲಿ ಕೂಡಲೇ ತೆರವುಗೊಳಿಸಿ ಎಂದು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ, ಶಾಸಕ ಆರ್.ವಿ.ದೇಶಪಾಂಡೆ ಸೂಚನೆ ನೀಡಿದರು.

ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ಹಳಿಯಾಳ, ದಾಂಡೇಲಿಯಲ್ಲಿಯ ಮಳೆ, ಬೆಳೆ ಹಾನಿ, ಕುರಿತು ಗುರುವಾರ ನಡೆದ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು.

ಈಚೆಗೆ ಸರ್ಕಾರಿ ಜಾಗದಲ್ಲಿ ಅತಿಕ್ರಮಣ ಹೆಚ್ಚಾಗುತ್ತಿದ್ದು, ಕೆಲವು ಇಲಾಖೆ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಭಾಗಿಯಾಗುತ್ತಿದ್ದಾರೆ ಎಂಬ ಆರೋಪಗಳಿವೆ. ಹೀಗೆ ಆದಲ್ಲಿ ಅಧಿಕಾರಿಗಳ ಮೇಲೆಯೂ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಮದಳ್ಳಿ ಗ್ರಾಮದ ಪಂಚಾಯಿತಿ ವ್ಯಾಪ್ತಿಯಲ್ಲಿ ಅತಿಕ್ರಮಣವಾಗುತ್ತಿದೆ. ಕೂಡಲೇ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ತೆರವುಗೊಳಿಸಿ ಎಂದರು.

ಹಳಿಯಾಳ ತಾಲ್ಲೂಕಿನಲ್ಲಿ ಈವರೆಗೆ 44.5 ಸೆಂ.ಮೀ, ದಾಂಡೇಲಿಯಲ್ಲಿ 64.5 ಸೆಂ.ಮೀ ಮಳೆಯಾಗಿದೆ. ಸಾಂಬ್ರಾಣಿ ಹೋಬಳಿ ಮಟ್ಟದಲ್ಲಿ ಕಡಿಮೆ ಮಳೆಯಾಗಿದೆ. ಕಬ್ಬು, ಭತ್ತ ಚೆನ್ನಾಗಿದ್ದು, ಅಧಿಕ ಮಳೆಯಿಂದ ಮೆಕ್ಕೆಜೋಳ ಸೇರಿದಂತೆ ಕೆಲ ಬೆಳೆಗೆ ಹಾನಿಯಾಗುವ ಸಂಭವವಿರುತ್ತದೆ. ಯೂರಿಯಾ ರಸಗೊಬ್ಬರಕ್ಕೆ ಹೆಚ್ಚಿನ ಬೇಡಿಕೆಯಿದೆ ಎಂದು ಸಹಾಯಕ ಕೃಷಿ ಅಧಿಕಾರಿ ಪಿ.ಐ.ಮಾನೆ ಹೇಳಿದರು. ಏಪ್ರಿಲ್‌ನಿಂದ ಈವರೆಗೆ ಹಳಿಯಾಳ ತಾಲ್ಲೂಕಿನಲ್ಲಿ 150 ವಿದ್ಯುತ್ ಕಂಬಗಳನ್ನು ಅಳವಡಿಸಲಾಗಿದ್ದು, 19 ವಿದ್ಯುತ್ ಪರಿವರ್ತಕಗಳನ್ನು ಬದಲಾವಣೆ ಮಾಡಲಾಗಿದೆ. ದಾಂಡೇಲಿಯಲ್ಲಿ 5 ವಿದ್ಯುತ್ ಪರಿವರ್ತಕಗಳನ್ನು ಬದಲಾವಣೆ ಮಾಡಲಾಗಿದೆ. ಪ್ರತಿ ಗ್ರಾಮದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ' ಎಂದು ಹೆಸ್ಕಾಂ ಅಧಿಕಾರಿ ತಿಳಿಸಿದರು.



### ತರಬೇತಿಗೆ ಅರ್ಜಿ ಆಹ್ವಾನ

• ಉದಯವಾಹಿನಿ ಕೊಪ್ಪಳ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ಸಂಸ್ಥೆಯಿಂದ ಉಚಿತವಾಗಿ ಜೂಟ್ ಬ್ಯಾಗ್ ತಯಾರಿಕೆ, ಮಹಿಳೆಯರಿಗಾಗಿ ಹೊಲಿಗೆ ಮತ್ತು ಮೊಬೈಲ್ ಫೋನ್ ರಿಪೇರಿ, ಸರ್ವಿಸಿಂಗ್ ಕುರಿತು ಉಚಿತ ತರಬೇತಿಯನ್ನು ನೀಡಲಾಗುತ್ತಿದ್ದು, ಆಸಕ್ತ ಗ್ರಾಮೀಣ ಭಾಗದ ನಿರುದ್ಯೋಗಿ ಯುವಜನತೆಯಿಂದ ಅರ್ಜಿ ಆಹ್ವಾನಿಸಲಾಗಿದೆ.

18ರಿಂದ 45 ವಯೋಮಾನದ ನಿರುದ್ಯೋಗಿ ಯುವಜನತೆಗೆ ಆಗಸ್ಟ್‌ನಲ್ಲಿ ತರಬೇತಿ ನೀಡಲಾಗುತ್ತದೆ. ತರಬೇತಿಗಳು ಸ್ವ-ಉದ್ಯೋಗ ಪ್ರಾರಂಭಿಸಿ, ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗಲಿವೆ. ತರಬೇತಿ ಅವಧಿಯಲ್ಲಿ ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ಹೆಸರು ನೋಂದಾಯಿಸಲು ಜು. 25 ಕೊನೆಯ ದಿನವಾಗಿದ್ದು, ಆಸಕ್ತರು ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ, ಆರ್ ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ವಿಳಾಸಕ್ಕೆ ಅಥವಾ 8217236973, 9844796998.

### ಹಣ್ಣಿನ ಸಂಸ್ಕರಣಾ ಘಟಕಗಳಿಗೆ ಡಿಸಿ ಭೇಟಿ

• ಉದಯವಾಹಿನಿ ಕೊಪ್ಪಳ

ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ ಅವರು ಜಿಲ್ಲೆಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಹಣ್ಣು ಬೆಳೆಗಳ ಸಂಸ್ಕರಣ ಘಟಕಗಳು, ಕೃಷಿ ಹೊಂಡ, ದ್ರಾಕ್ಷಿ ಹಾಗೂ ದಾಳಿಂಬೆ ಬೆಳೆಗಳ ವೀಕ್ಷಣೆ ಮಾಡಿ ರೈತರೊಂದಿಗೆ ಚರ್ಚಿಸಿದರು. ತಾಲ್ಲೂಕಿನ ಮೆತಗಲ್ ಗ್ರಾಮದಲ್ಲಿ ನಬಾರ್ಡ ವತಿಯಿಂದ ನಿರ್ಮಿಸುತ್ತಿರುವ ಹಣ್ಣು ಬೆಳೆಗಳ ಸಂಸ್ಕರಣ ಘಟಕದಲ್ಲಿ ಪರಿಶೀಲನೆ ನಡೆಸಿದರು. ಯಲಬುರ್ಗಾ ತಾಲ್ಲೂಕಿನ ಮಾಟಲದಿನ್ನಿ ಗ್ರಾಮದಲ್ಲಿ ರೈತರ ಕೃಷಿ ಭಾಗ್ಯ ಯೋಜನೆ, ಉದ್ಯೋಗ ಖಾತ್ರಿ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಕೃಷಿಹೊಂಡ, ದ್ರಾಕ್ಷಿ ಹಾಗೂ ದಾಳಿಂಬೆ ಬೆಳೆಗಳ ವೀಕ್ಷಣೆ ಮಾಡಿದರು.

ಪ್ರಗತಿಪರ ಕೃಷಿಕ ಬಸಯ್ಯ ಹಿರೇಮಠ ಅವರ ನುಗ್ಗೆಕಾಯಿ ಸಂಸ್ಕರಣ ಘಟಕ, ಕುಷ್ಟಗಿ ತಾಲ್ಲೂಕಿನ ಬ್ಯಾಲಿಹಾಳ ಗ್ರಾಮದ ನೈಸರ್ಗಿಕ ಕೃಷಿಕ ದೇವಿಂದ್ರ, ಬಳೂಟಗಿಗೆ ತೆರಳಿ ಕೃಷಿಗೆ ಸಂಬಂಧಿಸಿದ ವಿಷಯಗಳ ಕುರಿತು ರೈತರೊಂದಿಗೆ ಚರ್ಚೆ ನಡೆಸಿದರು.

## ನೀರು ಶುದ್ಧೀಕರಣ ಘಟಕದ ನ್ಯೂನತೆ ಸರಿಪಡಿಸಿ


ಉದಯವಾಹಿನಿ ಚಿತ್ರ

• ಉದಯವಾಹಿನಿ ಗುಳೇದಗುಡ್ಡ

ವಿಜ್ಞಾನಿಗಳ ನೇತೃತ್ವದಲ್ಲಿ ಇಲ್ಲಿನ ನೀರನ್ನು ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಲಾಗಿದೆ. ಈ ಶುದ್ಧೀಕರಣ ಘಟಕದ ವಾಸ್ತವ ಸ್ಥಿತಿ ನೋಡಿದರೆ ಗುಳೇದಗುಡ್ಡ ಪಟ್ಟಣಕ್ಕೆ ಸರಬರಾಜು ಮಾಡುವ ನೀರು ಕಲುಷಿತವಾಗಿದೆ ಎಂದು ಅರಿವಿಗೆ ಬಂತು. ಇಲ್ಲಿನ ನ್ಯೂನತೆಗಳನ್ನು ಸಂಬಂಧಿಸಿದ ಅಧಿಕಾರಿಗಳು ಸರ್ಕಾರದ ಗಮನಕ್ಕೆ ತಂದು ಸರಿಪಡಿಸುವ ಕೆಲಸ ಮಾಡಬೇಕು ಎಂದು ಮಾಜಿ ಶಾಸಕ ರಾಜಶೇಖರ ಶೀಲವಂತ ಹೇಳಿದರು.

ಅವರು ಕಮತಗಿ ವ್ಯಾಪ್ತಿಯಲ್ಲಿ ಇರುವ ನೀರು ಸಂಗ್ರಹದ ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿ ಮಾತನಾಡಿದರು. ನೀರು ಶುದ್ಧೀಕರಣ ಘಟಕದ ಕೆಮಿಕಲ್ ಎಂಜಿನಿಯರ್‌ಗೆ ಅವರಿಗೆ ಸಂಬಂಧಿಸಿದ ವಿಷಯವಾಗಿದೆ. ಇಲ್ಲಿ ನಿರ್ವಹಣೆ ಅವೈಜ್ಞಾನಿಕವಾಗಿದೆ. ಅದನ್ನು ಸರಿ ಮಾಡುವ ಅವಶ್ಯಕತೆ ಇದೆ. ಶುದ್ಧ ನೀರು ಪೂರೈಸುವ ಜವಾಬ್ದಾರಿ ಸರ್ಕಾರದ್ದು ಎಂದು ಹೇಳಿದರು.

ಇಲ್ಲಿ ಪಟ್ಟಣಕ್ಕೆ ಬೇಕಾದ ನೀರು ಸಂಗ್ರಹ ಸಾಮರ್ಥ್ಯ ಕಡಿಮೆ ಇದೆ. ಇಲ್ಲಿಂದ ಸರಬರಾಜಾಗುವ ನೀರು ಕಲುಷಿತವಾಗಿದೆ ಎಂದು ನಗರ ಸುಧಾರಣಾ ಸಮೀತಿಯವರು ಅಭಿಪ್ರಾಯಪಟ್ಟರು.

## ಮಹಿಳೆಯರು ಸ್ವ-ಉದ್ಯೋಗಕ್ಕೆ ಒತ್ತು ನೀಡಿ: ಡಾ.ಪ್ರಭಾ ಮಲ್ಲಿಕಾರ್ಜುನ

• ಉದಯವಾಹಿನಿ ಬೆಳಗುತ್ತಿ

ಮಹಿಳೆಯರು ಸ್ವಯಂ ಉದ್ಯೋಗ ಕೈಗೊಂಡು ಸಾಧನೆ ಮಾಡುವ ಮೂಲಕ ಬೇರೆಯವರಿಗೆ ಮಾದರಿ ಆಗಬೇಕು' ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ ಸಲಹೆ ನೀಡಿದರು. ನ್ಯಾಮತಿ ತಾಲ್ಲೂಕು ಬೆಳಗುತ್ತಿಯಲ್ಲಿ ಗುರುವಾರ ಎನ್.ಆರ್.ಎಲ್.ಎಂ. ಭವನ, ಸ್ವಚ್ಛ ಸಂಕೀರ್ಣ ಹಾಗೂ ಮಲ್ಲಿಗೇನಹಳ್ಳಿ ಶಾಲಾ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಜಿಲ್ಲೆಯ 94 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಿಳಾ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಸಬಲೀಕರಣಕ್ಕೆ ಒತ್ತು ನೀಡುವ ಕೆಲಸ ಸರ್ಕಾರ ಮಾಡುತ್ತಿದೆ ಎಂದರು. ಗ್ರಾಮಗಳಲ್ಲಿ ಸಮುದಾಯ ಭವನ ಹಾಗೂ ದೇವಸ್ಥಾನ ನಿರ್ಮಾಣಕ್ಕಿಂತ ಶಾಲೆಗಳಿಗೆ ಹೆಚ್ಚು ಆದ್ಯತೆ ನೀಡಬೇಕು, ಶಾಲೆಗಳು ಸುಸ್ಥಿತಿಯಲ್ಲಿದ್ದರೆ ಮಾತ್ರ ಮಕ್ಕಳ ಓದಿಗೆ ಅನುಕೂಲವಾಗುತ್ತದೆ.

ಶೈಕ್ಷಣಿಕ , ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಿ, ಬೆಳಗುತ್ತಿ ಬಸ್ ನಿಲ್ದಾಣದ ಸಮೀಪ ಶೌಚಾಲಯ ನಿರ್ಮಾಣಕ್ಕೆ ಹಾಗೂ ಗ್ರಾಮ ಪಂಚಾಯಿತಿಗೆ ಸ್ವಚ್ಛತಾ ವಾಹನವನ್ನು ಒದಗಿಸಲು ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಶಾಲಾ ಕೊಠಡಿ ಮತ್ತು ಸಿಸಿ ರಸ್ತೆಗಳ ಉದ್ಘಾಟಿಸಿದ ಶಾಸಕ ಡಿ.ಜಿ.ಶಾಂತನಗೌಡ ಮಾತನಾಡಿ, ಶಾಸಕರ ಅನುದಾನದಲ್ಲಿ ಬೆಳಗುತ್ತಿಯಲ್ಲಿ 40 ಲಕ್ಷ ವೆಚ್ಚದ ರಸ್ತೆ ಕಾಮಗಾರಿ, ಕ್ಷತ್ರಿಯ ಸಮುದಾಯಕ್ಕೆ 10 ಲಕ್ಷ, ಅರಸು ಸಮುದಾಯ ಭವನಕ್ಕೆ 10 ಲಕ್ಷ ಹಾಗೂ ಮಲ್ಲಿಗೇನಹಳ್ಳಿ ಆಂಜನೇಯಸ್ವಾಮಿ ದೇವಸ್ಥಾನಕ್ಕೆ 10 ಲಕ್ಷ ಸೇರಿದಂತೆ ಒಟ್ಟು 70 ಲಕ್ಷ ಅನುದಾನವನ್ನು ಅವಳಿ ಗ್ರಾಮದ ಅಭಿವೃದ್ಧಿಗೆ ನೀಡಿದ್ದೇನೆ' ಎಂದು ಹೇಳಿದರು.


ಉದಯವಾಹಿನಿ ಚಿತ್ರ

> ಮುಂದಿನ ನಾಲ್ಕು ತಿಂಗಳಲ್ಲಿ ಬಹುಗ್ರಾಮ ಯೋಜನೆ ಅಡಿಯಲ್ಲಿ ಈ ಭಾಗದ 57 ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರಿನ ಯೋಜನೆ ಅನುಷ್ಠಾನ ಮಾಡಲಾಗುವುದು.
> -ಡಿ.ಜಿ.ಶಾಂತನಗೌಡ, ಶಾಸಕ

### ಹರಾಜಿಗೆ ಸಿದ್ಧವಾದ ಮಳಿಗೆಗಳು

• ಉದಯವಾಹಿನಿ ಶ್ರವಣಬೆಳಗೊಳ

ಇಲ್ಲಿಯ ನಾಗಮಂಗಲ ಮೈಸೂರು ರಸ್ತೆಯ ವಾರದ ಸಂತೆ ನಡೆಯುವ ಜಾಗಕ್ಕೆ ಹೊಂದಿಕೊಂಡಂತಿರುವ ಶ್ರವಣಬೆಳಗೊಳ ಗ್ರಾಮ ಪಂಚಾಯಿತಿಯ ನೂತನ ವಾಣಿಜ್ಯ ಮಳಿಗೆಗಳು ಕಾಣದಂತೆ ಬೆಳೆದಿದ್ದ ಗಿಡಗಂಟಿಗಳನ್ನು ಸಂಪೂರ್ಣ ತೆರವುಗೊಳಿಸಿ, ಆವರಣ ಸ್ವಚ್ಛಗೊಳಿಸಿ ಮಳಿಗೆಗಳನ್ನು ಹರಾಜಿಗೆ ಸಿದ್ಧಗೊಳಿಸಲಾಗಿದೆ.

ಉದ್ಘಾಟನೆಯಾಗಿ ನಾಲ್ಕು ವರ್ಷ ಕಳೆದರೂ ಹರಾಜು ನಡೆದಿಲ್ಲ. ಪಂಚಾಯಿತಿ ಆದಾಯಕ್ಕೆ ಖೋತಾ ಆಗಿದೆ. ಸಂಕೀರ್ಣ ಪಾಳುಬಿದ್ದಿದೆ ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಅಫ್ತಾಬ್ ಪಾಷಾ, ಯು ಆಕಾರದಲ್ಲಿ ನಿರ್ಮಿಸಿರುವ ಪಂಚಾಯಿತಿಯ 12 ವಾಣಿಜ್ಯ ಮಳಿಗೆಗಳ ಸುತ್ತಮುತ್ತ ಬೆಳೆದಿದ್ದ ಗಿಡಗಂಟಿಗಳನ್ನು ತೆರವುಗೊಳಿಸಿ, ಆವರಣ ಸ್ವಚ್ಛಗೊಳಿಸಲಾಗಿದೆ. 12 ರೋಲಿಂಗ್ ಶಟರ್‌ಗಳು 4 ವರ್ಷಗಳಿಂದ ಬಳಕೆಯಾಗದೆ ಹಾಳಾಗಿವೆ. ನೂತನ ಶಟರ್ ಅಳವಡಿಸಲಾಗುವುದು ಎಂದು ತಿಳಿಸಿದರು.

12 ಮಳಿಗೆಗಳ ಒಳ ಭಾಗದಲ್ಲಿ ಸ್ವಚ್ಛಗೊಳಿಸಿದ್ದು, ಇದೀಗ ಸಂಕೀರ್ಣಕ್ಕೆ ಬಣ್ಣವನ್ನೂ ಬಳಿಯಲಾಗಿದೆ. ಎಲ್ಲಾ ಮಳಿಗೆಗಳಿಗೂ ಪ್ರತ್ಯೇಕ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಿದ ನಂತರ ಸಾರ್ವಜನಿಕರ ಉಪಯೋಗಕ್ಕೆ ಕೊಡಲಾಗುತ್ತಿದ್ದು, ಶೀಘ್ರವೇ ನಿಯಮಾನುಸಾರ ಹರಾಜು ಪ್ರಕ್ರಿಯೆ ನಡೆಸಲಾಗುವುದು ಎಂದು ಹೇಳಿದರು.


ಉದಯವಾಹಿನಿ ಚಿತ್ರ

# ಅರ್ಜಿ ತಿರಸ್ಕೃತ ಆಗಿದ್ದರೆ ಸಮರ್ಪಕ ಮಾಹಿತಿ ನೀಡಿ: ಈ.ಸಿ.ಜೋಯಿ

• ಬಗರ್ ಹುಕುಂ ಸಾಗುವಳಿದಾರರ ಅರ್ಜಿಗಳು ತಿರಸ್ಕೃತವಾಗಿದ್ದರೆ ಅದಕ್ಕೆ ಸಕರಾಣವನ್ನು ಅರ್ಜಿದಾರರಿಗೆ ನೀಡಬೇಕು

• ಉದಯವಾಹಿನಿ ನರಸಿಂಹರಾಜಪುರ

ನಮೂನೆ 50, 53 ಮತ್ತು 57ರಲ್ಲಿ ಅರ್ಜಿ ಸಲ್ಲಿಸಿದ ಬಗರ್ ಹುಕುಂ ಸಾಗುವಳಿದಾರರ ಅರ್ಜಿಗಳು ತಿರಸ್ಕೃತವಾಗಿದ್ದರೆ ಅದಕ್ಕೆ ಸಕರಾಣವನ್ನು ಅರ್ಜಿದಾರರಿಗೆ ನೀಡಬೇಕು ಎಂದು ಬಗರ್ ಹುಕುಂ ಸಮಿತಿಯ ಅಧ್ಯಕ್ಷ ಈ.ಸಿ.ಜೋಯಿ ಹೇಳಿದರು. ಇಲ್ಲಿನ ತಾಲ್ಲೂಕು ಕಚೇರಿಯಲ್ಲಿ ನಡೆದ ಪ್ರಥಮ ಬಗರ್ ಹುಕುಂ ಸಮಿತಿಯಲ್ಲಿ ಅವರು ಮಾತನಾಡಿದರು. ಗೋಮಾಳ ಜಾಗವನ್ನು ಗುರುತಿಸುವಾಗ ಕಾಫಿ ಖರಾಬು ಜಾಗವನ್ನು ಬಿಟ್ಟು ಗುರುತಿಸಿದ್ದರೆ, ಒಂದಷ್ಟು ಜನರಿಗಾದರೂ ಹಕ್ಕು ಪತ್ರ ಕೊಡಬಹುದಾಗಿತ್ತು. 23 ಗ್ರಾಮದಲ್ಲಿ ಜಾಗವಿಲ್ಲ ಎಂದು ವರದಿ ನೀಡಿರುವುದರಿಂದಲೂ ಹಲವು ಅರ್ಜಿಗಳು ತಿರಸ್ಕೃತವಾಗಿದೆ ಎಂದರು.

ಕಾಫಿ ಖರಾಬು ಜಾಗದಲ್ಲಿ ಅಡಿಕೆ ಅಥವಾ ಬೇರೆ ಬೆಳೆದಿದ್ದರೆ ಸಾಗುವಳಿ ಚೀಟಿ ಕೊಡಬಹುದಾ ಎಂಬುದರ ಬಗ್ಗೆ ಮುಂದಿನ ಸಭೆಯೊಳಗೆ ಮಾಹಿತಿ ನೀಡಬೇಕು. ನಮೂನೆ 57ರ ಅರ್ಜಿಗಳು ತಿರಸ್ಕೃತವಾದರೆ ಯಾರಿಗೆ ಮೇಲ್ಮನವಿ ಸಲ್ಲಿಸಬೇಕು ಎಂಬ ಬಗ್ಗೆಯೂ ಮಾಹಿತಿ ನೀಡಿ. ಫಾರಂ ನಂ50,53 ಅಡಿ ಅರ್ಜಿ ಸಲ್ಲಿಸುವಾಗ 35 ವರ್ಷಗಳ ಹಿಂದೆ ಪಟ್ಟಣದ ವ್ಯಾಪ್ತಿ ಕಿರಿದಾಗಿತ್ತು. ಪ್ರಸ್ತುತ ಪಟ್ಟಣ ಬೆಳೆದಿರುವುದರಿಂದ ಹಲವು ಗ್ರಾಮಗಳು 3 ಕಿ.ಮೀ ವ್ಯಾಪ್ತಿಯೊಳಗೆ ಬರುತ್ತಿವೆ. ನಾಗಲಾಪುರ, ಮೆಣಸೂರು, ಲಿಂಗಾಪುರ ಗ್ರಾಮದಲ್ಲಿ ರೈತರು ತೋಟ, ಗದ್ದೆ ಅಭಿವೃದ್ಧಿ ಪಡಿಸಿಕೊಂಡಿದ್ದಾರೆ. ಕೆಲವರು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಪಟ್ಟಣದ ಹಿಂದಿನ ನಕಾಶೆಯನ್ನು ಪರಿಗಣಿಸಿ ಇವರಿಗೆ ಸಾಗುವಳಿ ಚೀಟಿ ಕೊಡಲು ಸಾಧ್ಯವಾಗುವುದಿಲ್ಲವೇ ಎಂದು ಪ್ರಶ್ನಿಸಿದರು. ಪಟ್ಟಣ ಬೆಳೆಯದೆ ಇದ್ದರೂ ಪಟ್ಟಣದ ಗಡಿ ಮೊದಲೇ ನಿರ್ಧಾರವಾಗಿದ್ದರಿಂದ 3 ಕಿ.ಮೀ ವ್ಯಾಪ್ತಿಯೊಳಗೆ ಹಲವು ಗ್ರಾಮಗಳು ಬರುತ್ತಿವೆ. ಹಳೇ ನಕ್ಷೆ ಪರಿಗಣಿಸಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದರು. ಜಿಲ್ಲೆಯ ಮೂಡಿಗೆರೆ, ಕಡೂರು ಭಾಗಗಳಲ್ಲಿ ಆಗಿರುವಂತೆ ಅಕ್ರಮವಾಗಿ ಯಾವುದೇ ಜಮೀನು ಮಂಜೂರು ಮಾಡಬಾರದು. ಕಾನೂನು ಬದ್ಧವಾಗಿರುವ ಅರ್ಜಿಗಳಿಗೆ ಮಾತ್ರ ಮಂಜೂರಾತಿ ನೀಡಬೇಕು. ಬಗರ್ ಹುಕುಂ ಸಮಿತಿಯ ಅಧ್ಯಕ್ಷರ ಗಮನಕ್ಕೆ ಬಾರದೆ ಯಾವುದೇ ಹಕ್ಕು ಪತ್ರ ವಿತರಿಸಬಾರದು ಎಂದರು. ಫಾರಂ ನಂ 50 ಅಡಿ 6,339 ಅರ್ಜಿಗಳು ಸಲ್ಲಿಕೆಯಾಗಿದ್ದವು.

ಇದರಲ್ಲಿ 1,293 ಅರ್ಜಿಗಳಿಗೆ ಮಂಜೂರಾತಿ ದೊರೆತಿದೆ. 5,046 ಅರ್ಜಿಗಳು ತಿರಸ್ಕೃತವಾಗಿವೆ. ಮೇಲ್ಮನವಿ ಆದೇಶವಾಗಿರುವ 4 ಪ್ರಕರಣಗಳಲ್ಲಿ ಕಡತ ತಯಾರಿಸಲಾಗಿದೆ. 5 ಅರ್ಜಿಗಳ ಕಡತ ತಯಾರಿಸಲು ಬಾಕಿ ಇದೆ. 2 ಅರ್ಜಿಗಳು ಪಟ್ಟಣದಿಂದ 3 ಕಿ.ಮೀ ವ್ಯಾಪ್ತಿಯೊಳಗೆ ಬರುತ್ತದೆ ಎಂದು ತಿರಸ್ಕೃತವಾಗಿವೆ. ನಮೂನೆ 53 ರಲ್ಲಿ 4,620 ಅರ್ಜಿಗಳು ಸ್ವೀಕೃತವಾಗಿದ್ದವು. ಇದರಲ್ಲಿ 1,052 ಅರ್ಜಿಗಳಿಗೆ ಮಂಜೂರಾತಿ ದೊರೆತಿದೆ. 1,901 ಅರ್ಜಿಗಳು ತಿರಸ್ಕೃತವಾಗಿವೆ.1,667 ಅರ್ಜಿಗಳು ಬಾಕಿಯಿದೆ.

ತಂತ್ರಾಂಶದಲ್ಲಿ 207 ಅರ್ಜಿಗಳು ಅಳವಡಿಸಲಾಗಿದೆ. ಅರಣ್ಯ ಗೋಮಾಳವೆಂದು ಕಡತ ತಯಾರಿಸಲು 54 ಅರ್ಜಿಗಳು ಬಾಕಿಯಿದೆ. ತಂತ್ರಾಂಶದಲ್ಲಿ 1,460 ಅರ್ಜಿಗಳು ಅಳವಡಿಸಲು ಬಾಕಿಯಿದೆ. ಫಾರಂ 53ರ ಬಹುತೇಕ ಮೂಲ ಕಡತಗಳು ಲೋಕಾಯುಕ್ತದಲ್ಲಿ ಇರುವುದರಿಂದ ತಂತ್ರಾಂಶದಲ್ಲಿ ಅಳವಡಿಸಿಲ್ಲ. ಇದು ತಿರಸ್ಕೃತವಾಗಿಲ್ಲ ಎಂದು ಅಧಿಕಾರಿ ಸಚ್ಚಿನ್ ಮಾಹಿತಿ ನೀಡಿದರು.

ಫಾರಂ ನಂ 57ರಲ್ಲಿ ಒಟ್ಟು 9,793 ಅರ್ಜಿಗಳು ಸ್ವೀಕಾರವಾಗಿದ್ದು, ಇದರಲ್ಲಿ 8,970 ಅನರ್ಹ ಅರ್ಜಿಗಳನ್ನು ತಿರಸ್ಕರಿಸಲು ಜಿಲ್ಲಾಧಿಕಾರಿ ಅವರಿಗೆ ಕಳುಹಿಸಲಾಗಿದೆ. ಅರಣ್ಯ ಗೋಮಾಳವೆಂದು ಕಡತ ತಯಾರಿಸಲು 738 ಅರ್ಜಿಗಳು ಬಾಕಿ ಉಳಿದಿವೆ ಎಂದು ಅಧಿಕಾರಿ ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

> ಬಗರ್ ಹುಕುಂ ಸಮಿತಿ ಸದಸ್ಯ ಎಸ್. ಪೇಟೆ ಸತೀಶ್ ಮಾತನಾಡಿ, ಬಗರ್ ಹುಕುಂ ನಡಿ ಸಲ್ಲಿಸಿದ ಅರ್ಜಿಗಳು ಕಳೆದು ಹೋಗಿರುವ, ಕಡತಗಳು ನಾಪತ್ತೆಯಾಗಿರುವ ಯಾವುದಾರೂ ಪ್ರಕರಣಗಳು ಇದೆಯೇ ಎಂದು ಪ್ರಶ್ನಿಸಿದರು.

> ಪ್ರಥಮ ಸಭೆಗೆ 16 ಕಡತಗಳು ಸಭೆ ಒಪ್ಪಿಗೆಗಾಗಿ ತಯಾರಿಸಲಾಗಿದ್ದು, ಇದರ ಬಗ್ಗೆ ಆಕ್ಷೇಪಣೆಗಳು ಇರುವುದರಿಂದ ಬಗರ್ ಹುಕುಂ 'ಮಿತಿ ಸದಸ್ಯರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮುಂದಿನ ಸಭೆಯಲ್ಲಿ ತೀರ್ಮಾನಿಸಲಾಗುವುದು. ಕಂದಾಯ ಸಚಿವರನ್ನು ಆಹ್ವಾನಿಸಿ ಸಾಗುವಳಿ ಚೀಟಿ ವಿತರಿಸಲಾಗುವುದು -ಈ.ಸಿ.ಜೋಯಿ

### ಈ ಪ್ರಕ್ರಿಯೆ ಅರ್ಧಕ್ಕೆ ನಿಂತಿರುವುದು ಏಕೆ?

ಅರಣ್ಯ ಇಲಾಖೆಗೆ ಗಿಡಗಳನ್ನು ಬೆಳೆಸಲು ಹಿಂದೆ ನೀಡಿದ್ದ ಗೋಮಾಳ ಜಾಗವನ್ನು ಪುನಃ ಕಂದಾಯ ಇಲಾಖೆಗೆ ಪಡೆದುಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದರು. ಈ ಹಿಂದೆ ಜಮೀನು ಮಂಜೂರಾಗಿದ್ದರೂ ಸಾಗುವಳಿ ಚೀಟಿ ನೀಡಿಲ್ಲ. ಈ ಪ್ರಕ್ರಿಯೆ ಅರ್ಧಕ್ಕೆ ನಿಂತಿರುವುದು ಏಕೆ? ಸಾಗುವಳಿದಾರರು ಪ್ರಶ್ನಿಸಿದರೆ ಉತ್ತರಿಸಲು ಸಾಧ್ಯವಾಗುತ್ತಿಲ್ಲ.

# ಹವಾಮಾನ ವೈಪರೀತ್ಯದಿಂದ ಸ್ಥಗಿತಗೊಂಡಿದ್ದ ಅಮರನಾಥ ಯಾತ್ರೆ ಪುನಾರಂಭ

**ಶ್ರೀನಗರ:** ಕೆಟ್ಟ ಹವಾಮಾನದಿಂದಾಗಿ ಸ್ಥಗಿತಗೊಂಡಿದ್ದ ಅಮರನಾಥ ಯಾತ್ರೆ ಇಂದಿನಿಂದ ಮತ್ತೆ ಆರಂಭವಾಗಿದೆ.ಜಮ್ಮುವಿನಿಂದ 7,908 ಯಾತ್ರಿಕರ ತಂಡವು ಕಾಶ್ಮೀರಕ್ಕೆ ತೆರಳಿದೆ ಕಳೆದ ಜುಲೈ 3 ರಂದು ಪ್ರಾರಂಭವಾದಾಗಿನಿಂದ ಇದುವರೆಗೆ 2.52 ಲಕ್ಷಕ್ಕೂ ಹೆಚ್ಚು ಯಾತ್ರಿಕರು ನಡೆಯುತ್ತಿರುವ ಅಮರನಾಥ ಯಾತ್ರೆಯಲ್ಲಿ ಭಾಗವಹಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**7,908 ಯಾತ್ರಿಕರ ತಂಡವು ಕಾಶ್ಮೀರಕ್ಕೆ**

ಇಂದು ಕಣಿವೆಗೆ ಎರಡು ಬೆಂಗಾವಲು ಪಡೆಯಲ್ಲಿ 7,908 ಯಾತ್ರಿಕರ ಮತ್ತೊಂದು ತಂಡ ಭಗವತಿ ನಗರ ಯಾತ್ರಿ ನಿವಾಸದಿಂದ ಹೊರಟಿದೆ. 2,879 ಯಾತ್ರಿಗಳನ್ನು ಹೊತ್ತ 92 ವಾಹನಗಳ ಮೊದಲ ಬೆಂಗಾವಲು ಪಡೆಯು ಬೆಳಗಿನ ಜಾವ 3.30 ಕ್ಕೆ ಬಾಲ್ಟಾಲ್ ಬೇಸ್ ಕ್ಯಾಂಪ್‌ಗೆ ಹೊರಟಿತು ಮತ್ತು 5,029 ಯಾತ್ರಿಗಳನ್ನು ಹೊತ್ತ 169 ವಾಹನಗಳ ಎರಡನೇ ಬೆಂಗಾವಲು ಪಡೆಯು ಬೆಳಗಿನ ಜಾವ 4.25 ಕ್ಕೆ ನುನ್ವಾನ್ (ಪೆಹಲ್ಗಾಮ್) ಬೇಸ್ ಕ್ಯಾಂಪ್‌ಗೆ ತೆರಳಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜುಲೈ 10 ರಂದು ಪೆಹಲ್ಗಾಮ್‌ನಲ್ಲಿ ಛರಿ ಮುಬಾರಕ್‌ಯ ಭೂಮಿ ಪೂಜೆಯನ್ನು ನಡೆಸಲಾಯಿತು. ಛರಿ ಮುಬಾರಕ್‌ನ ಏಕೈಕ ಪಾಲಕ ಮಹಾಂತ್ ಸ್ವಾಮಿ ದೀಪೇಂದ್ರ ಗಿರಿ ನೇತೃತ್ವದ ಮಠಾಧೀಶರ ಗುಂಪು, ಶ್ರೀನಗರದ ದಶನಾಮಿ ಅಖಾರ ಕಟ್ಟಡದಲ್ಲಿರುವ ಅದರ ಸ್ಥಾನದಿಂದ ಪಹಲ್ಗಾಮ್‌ಗೆ ಚಾರಿ ಮುಬಾರಕ್ ಅನ್ನು ಪೆಹಲ್ಗಾಮ್‌ಗೆ ಕೊಂಡೊಯ್ದಿತು.



ಪೆಹಲ್ಗಾಮ್‌ನಲ್ಲಿ, ಛರಿ ಮುಬಾರಕ್ ಅನ್ನು ಭೂಮಿ ಪೂಜೆ ನಡೆದ ಗೌರಿ ಶಂಕರ್ ದೇವಸ್ಥಾನಕ್ಕೆ ಕೊಂಡೊಯ್ಯಲಾಯಿತು.ನಂತರ ಛರಿ ಮುಬಾರಕ್ ಅನ್ನು ದಶನಾಮಿ ಅಖಾರ ಕಟ್ಟಡದಲ್ಲಿರುವ ಅದರ ಸ್ಥಾನಕ್ಕೆ ಹಿಂತಿರುಗಿಸಲಾಯಿತು. ಇದು ಆಗಸ್ಟ್ 4ರಂದು ಶ್ರೀನಗರದ ದಶನಾಮಿ ಅಖಾರ ದೇವಸ್ಥಾನದಿಂದ ಗುಹಾ ದೇವಾಲಯದ ಕಡೆಗೆ ತನ್ನ ಅಂತಿಮ ಪ್ರಯಾಣವನ್ನು ಪ್ರಾರಂಭಿಸುತ್ತದೆ ಮತ್ತು ಆಗಸ್ಟ್ 9 ರಂದು ಪವಿತ್ರ ಗುಹಾ ದೇವಾಲಯವನ್ನು ತಲುಪುತ್ತದೆ, ಇದು ಯಾತ್ರೆಯ ಅಧಿಕೃತ ಅಂತ್ಯವನ್ನು ಸೂಚಿಸುತ್ತದೆ.

ಈ ವರ್ಷದ ಅಮರನಾಥ ಯಾತ್ರೆಗೆ ಅಧಿಕಾರಿಗಳು ವ್ಯಾಪಕ ಬಹು ಹಂತದ ಭದ್ರತಾ ವ್ಯವಸ್ಥೆಗಳನ್ನು ಮಾಡಿದ್ದಾರೆ, ಏಕೆಂದರೆ ಇದು ಏಪ್ರಿಲ್ 22 ರಂದು ಪೆಹಲ್ಗಾಮ್‌ನ ಬೈಸರನ್ ಹುಲ್ಲುಗಾವಲಿನಲ್ಲಿ ನಂಬಿಕೆಯ ಆಧಾರದ ಮೇಲೆ ಪಾಕಿಸ್ತಾನ ಬೆಂಬಲಿತ ಭಯೋತ್ಪಾದಕರು 26 ನಾಗರಿಕರನ್ನು ಬೇರ್ಪಡಿಸಿ ಕೊಂದ ಹೇಡಿತನದ ದಾಳಿಯ ನಂತರ ನಡೆಯುತ್ತಿದೆ.

## ವರದಕ್ಷಿಣೆ ಕಿರುಕುಳಕ್ಕೆ ನೊಂದು ಗರ್ಭಿಣಿ ಆತ್ಮಹತ್ಯೆ

**ಲಖ್ನೋ:** ಗಂಡನ ಮನೆಯವರ ವರದಕ್ಷಿಣೆ ಕಿರುಕುಳಕ್ಕೆ ನೊಂದ ಗರ್ಭಿಣಿಯಾಗಿದ್ದ ಮಹಿಳೆಯೊಬ್ಬಳು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಗಟನೆ ಉತ್ತರಪ್ರದೇಶದ ರಾತೋಡ್ ಗ್ರಾಮದ ಭಾಗ್ಪತ್‌ನಲ್ಲಿ ನಡೆದಿದೆ. ಮನೀಷಾ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಮಹಿಳೆ. ಆತ್ಮಹತ್ಯೆಗೂ ಮುನ್ನ 3 ನಿಮಿಷ 29 ಸೆಕೆಂಡುಗಳ ಭಾವನಾತಕ ವಿಡಿಯೋವನ್ನು ರೆಕಾರ್ಡ್ ಮಾಡಿ ಎರಡು ಡೆತನೋಟ್ ಬರೆದಿಟ್ಟಿದ್ದಾರೆ. ವಿಡಿಯೋದಲ್ಲಿ ತಮ ಪತಿ ಮತ್ತು ಅತ್ತೆ-ಮಾವಂದಿರು ವರದಕ್ಷಿಣೆಗಾಗಿ ಪೀಡಿಸುತ್ತಿದ್ದು, ದೈಹಿಕ ಕಿರುಕುಳಕ್ಕೆ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ. ಬುಲೆಟ್ ಬೈಕ್ ಮತ್ತು ಪೀಠೋಪಕರಣಗಳಂತಹ ಉಡುಗೊರೆಗಳನ್ನು ನೀಡಿ ತನ್ನ ತಂದೆ 20 ಲಕ್ಷಕ್ಕೂ ಹೆಚ್ಚು ಖರ್ಚು ಮಾಡಿ ಮದುವೆ ಮಾಡಿದ್ದರು. ಆದಾಗ್ಯೂ ಅತ್ತೆ-ಮಾವ ಕಾರು ಬೇಕೆಂದು ಒತ್ತಾಯಿಸುತ್ತಿದ್ದರು. ಇದನ್ನು ವಿರೋಧಿಸಿದ್ದಕ್ಕೆ ತನಗೆ ವಿದ್ಯುತ್ ಶಾಕ್ ನೀಡಲು ಯತ್ನಿಸಿದ್ದರು ಮಹಿಳೆ ತಿಳಿಸಿದ್ದಾರೆ.

## ಟಿಆರ್‌ಎಫ್ ಜಾಗತಿಕ ಭಯೋತ್ಪಾದಕ ಸಂಘಟನೆ: ಅಮೆರಿಕ ಘೋಷಣೆ

ನವದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಯ ಹೊಣೆ ಹೊತ್ತಿರುವ ಲಷ್ಕರ್- ಎ-ತೊಯ್ಬಾ (ಎಲ್‌ಇಟಿ) ಪ್ರಾಕ್ಸಿ ಟಿಆರ್‌ಎಫ್ ಅನ್ನು ಜಾಗತಿಕ ಭಯೋತ್ಪಾದಕ ಸಂಘಟನೆ ಎಂದು ಅಮೆರಿಕ ಘೋಷಿಸಿರುವುದನ್ನು ಭಾರತ ಸ್ವಾಗತಿಸಿದೆ. ದಿ ರೆಸಿಸ್ಟೆನ್ಸ ಫೋರ್ಸ್ (ಟಿಆರ್‌ಎಫ್) ಕುರಿತ ವಾಷಿಂಗ್ಟನ್‌ನ ನಿರ್ಧಾರವನ್ನು ಭಾರತ-ಯುಎಸ್ ಭಯೋತ್ಪಾದನಾ ನಿಗ್ರಹ ಸಹಕಾರದ ಬಲವಾದ ದೃಢೀಕರಣ ಎಂದು ವಿದೇಶಾಂಗ ಸಚಿವ ಎಸ್ ಜೈಶಂಕರ್ ಬಣ್ಣಿಸಿದ್ದಾರೆ. ಪಾಕಿಸ್ತಾನ ಮೂಲದ ಎಲ್‌ಇಟಿಯ ಪ್ರಾಕ್ಸಿಯನ್ನು ನೇಮಿಸಿದ್ದಕ್ಕಾಗಿ ಅವರು ಯುಎಸ್ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರನ್ನು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ವಿಶೇಷವಾಗಿ ಶ್ಲಾಘಿಸಿದ್ದಾರೆ.

ಲಷ್ಕರ್-ಎ-ತೊಯ್ಬಾ (ಎಲ್‌ಇಟಿ) ಪ್ರಾಕ್ಸಿ ಟಿಆರ್‌ಎಫ್ ಅನ್ನು ವಿದೇಶಿ ಭಯೋತ್ಪಾದಕ ಸಂಘಟನೆ (ಎಫ್‌ಟಿಒ) ಮತ್ತು ವಿಶೇಷವಾಗಿ ಗೊತ್ತುಪಡಿಸಿದ ಜಾಗತಿಕ ಭಯೋತ್ಪಾದಕ (ಎಸ್‌ಡಿಜಿಟಿ) ಎಂದು ಗೊತ್ತುಪಡಿಸಿದ್ದಕ್ಕಾಗಿ ಮತ್ತು ಅನ್ನು ಶ್ಲಾಘಿಸಿ. ಏಪ್ರಿಲ್ 22ರ ಪೆಹಲ್ಗಾಮ್ ದಾಳಿಯ ಜವಾಬ್ದಾರಿಯನ್ನು ಅದು ವಹಿಸಿಕೊಂಡಿದೆ ಎಂದು ವಿದೇಶಾಂಗ ಸಚಿವ ಹೇಳಿದರು.

## ಪ್ರತಿ 20 ನಿಮಿಷಕ್ಕೆ ಒಬ್ಬ ವ್ಯಕ್ತಿ ಸೈಬರ್ ವಂಚನೆಗೆ ಬಲಿ: ಶರ್ಮಾ

**ಛತ್ತೀಸ್‌ಗಢ:** ತಂತ್ರಜ್ಞಾನ ಅಭಿವೃದ್ಧಿ ಹೊಂದುತ್ತಿದ್ದಂತೆ ಜನರು ತಂತ್ರಜ್ಞಾನಕ್ಕೆ ವ್ಯಸನಿಯಾಗುತ್ತಿದ್ದಾರೆ. ಈಗ ಡಿಜಿಟಲ್ ವಹಿವಾಟುಗಳು ಜೀವನದ ಒಂದು ಭಾಗವಾಗಿದೆ. ಆದ್ದರಿಂದ ಅಪರಾಧದ ವಿಧಾನವೂ ಬದಲಾಗಿದೆ ಮತ್ತು ದುಷ್ಕರ್ಮಿಗಳು ಜನರನ್ನು ವಂಚಿಸುವ ಮೂಲಕ ಸೈಬರ್ ವಂಚನೆ ಮಾಡುತ್ತಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ, ಸೈಬರ್ ವಂಚನೆ ಪ್ರಕರಣಗಳಲ್ಲಿ ತ್ವರಿತ ಏರಿಕೆ ಕಂಡುಬಂದಿದೆ.

ಛತ್ತೀಸ್‌ಗಢದಲ್ಲಿ, ಪ್ರತಿ ಗಂಟೆಗೆ ಮೂವರು ಜನರು ಸೈಬರ್ ವಂಚನೆಗೆ ಬಲಿಯಾಗುತ್ತಿದ್ದಾರೆ. ಅಂದರೆ ಪ್ರತಿ ಇಪ್ಪತ್ತು ನಿಮಿಷಕ್ಕೆ ಒಬ್ಬ ವ್ಯಕ್ತಿ ಸೈಬರ್ ವಂಚನೆಗೆ ಬಲಿಯಾಗುತ್ತಿದ್ದಾರೆ ಎನ್ನುವ ಮಾಹಿತಿ ಹೊರಬಿದ್ದಿದೆ. ಛತ್ತೀಸ್‌ಗಢದಲ್ಲಿ, ಕಳೆದ ಒಂದೂವರೆ ವರ್ಷಗಳಲ್ಲಿ 1,301 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಬಲಿಪಶುಗಳು 107 ಕೋಟಿ ರೂ.ಗೂ ಹೆಚ್ಚು ನಷ್ಟ ಅನುಭವಿಸಿದ್ದಾರೆ. ಉಪಮುಖ್ಯಮಂತ್ರಿ ವಿಜಯ್ ಶರ್ಮಾ ರಾಜ್ಯ ವಿಧಾನಸಭೆಯಲ್ಲಿ ಈ ಮಾಹಿತಿಯನ್ನು ನೀಡಿದ್ದಾರೆ.

ಈ ಪ್ರಕರಣಗಳಲ್ಲಿ 107 ಪ್ರಕರಣಗಳಲ್ಲಿ ಪೊಲೀಸರು 3.36 ಕೋಟಿ ರೂ.ಗಳನ್ನು ವಸೂಲಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಶರ್ಮಾ ಹೇಳಿದ್ದಾರೆ.

## ಬಿಜೆಪಿ ನಾಯಕ ಧಕಡ್ ಹತ್ಯೆ

**ಭೋಪಾಲ್:** ಮಧ್ಯಪ್ರದೇಶದ ಆಡಳಿತಾರೂಢ ಬಿಜೆಪಿ ನಾಯಕ ಶ್ಯಾಮಲಾಲ್ ಧಕಡ್ ನಿದ್ರೆಯಲ್ಲಿರುವಾಗಲೇ ಹತ್ಯೆ ಮಾಡಲಾಗಿದೆ. ಪಶ್ಚಿಮ ಮಧ್ಯಪ್ರದೇಶದ ಮಂದಸೌರ್ ಜಿಲ್ಲೆಯ ಅವರ ಮನೆಯಲ್ಲಿಯೇ ಈ ಹತ್ಯೆ ಘಟನೆ ನಡೆದಿದೆ. ಅವರ ಮಗ ಚಹಾ ನೀಡಲು ಹೋದಾಗ ಘಟನೆ ಬೆಳಕಿಗೆ ಬಂದಿದೆ. ಒಂದು ಅಂತಸ್ತಿನ ಟೆರೇಸ್ ಮೇಲೆ ನಿರ್ಮಿಸಲಾದ ಕೊಠಡಿಯೊಂದರಲ್ಲಿ ಹಾಸಿಗೆಯ ಮೇಲೆ ಶವವಾಗಿ ಬಿದ್ದಿದ್ದು, ತಲೆಯಿಂದ ತೀವ್ರ ರಕ್ತಸ್ರಾವವಾಗಿದೆ. ಮರಣೋತ್ತರ ವರದಿಯನ್ನು ಕಾಯಲಾಗುತ್ತಿದೆ. ಅಪರಿಚಿತ ದುಷ್ಕರ್ಮಿಗಳು ಧಕಡ್‌ನ ತಲೆಗೆ ಮಾರಕಾಸ್ತ್ರಗಳಿಂದ ಪದೇ ಪದೇ ದಾಳಿ ಮಾಡಿರುವುದಾಗಿ ತೀವ್ರವಾಗಿ ಗಾಯಗೊಂಡು ಅವರು ಸಾವನ್ನಪ್ಪಿರುವುದಾಗಿ ಸ್ಥಳದಲ್ಲಿ ನಡೆಯುತ್ತಿರುವ ತನಿಖೆಗಳು ಹೇಳುತ್ತಿವೆ.

## ಬಿಹಾರದಲ್ಲಿ ಭಾರಿ ಮಳೆ: ಸಿಡಿಲು ಬಡಿದು 33 ಮಂದಿ ಸಾವು


**ಪಾಟ್ನಾ:** ಈ ವಾರ ಬಿಹಾರದಲ್ಲಿ ಭಾರಿ ಮಳೆಯಾಗುತ್ತಿದ್ದು, ಸಿಡಿಲು ಬಡಿದು ಕನಿಷ್ಠ 33 ಜನ ಸಾವನ್ನಪ್ಪಿದ್ದಾರೆ ಮತ್ತು ಡಜನ್‌ಗಟ್ಟಲೆ ಜನ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಬಿಹಾರದಲ್ಲಿ ಬುಧವಾರ ಮತ್ತು ಗುರುವಾರದ ನಡುವೆ ಬಿರುಗಾಳಿ ಸಹಿತ ಭೀಕರ ಮಳೆಯಲ್ಲಿ ಈ ಸಾವುಗಳು ಸಂಭವಿಸಿವೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಇಲಾಖೆಯ ಪ್ರಕಟಣೆ ತಿಳಿಸಿದೆ.

ಸಿಡಿಲು ಬಡಿದು ಮೃತಪಟ್ಟವರಲ್ಲಿ ಹೆಚ್ಚಿನವರು ರೈತರು ಮತ್ತು ಕಾರ್ಮಿಕರಾಗಿದ್ದ, ರಾಜ್ಯದ ಕೆಲವು ಭಾಗಗಳಲ್ಲಿ ಭಾರಿ ಮಳೆ ಮತ್ತು ಮಿಂಚಿನ ಮುನ್ಸೂಚನೆ ನೀಡಲಾಗಿದೆ. ಮಿಂಚಿನ ಬಗ್ಗೆ ಎಚ್ಚರಿಕೆ ನೀಡಿದ ನಂತರ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಜಾಗೃತಿ ಮೂಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ ಎಂದು ಬಿಹಾರ ರಾಜ್ಯ ವಿಪತ್ತು ನಿರ್ವಹಣಾ ಸಚಿವ ವಿಜಯ್ ಕುಮಾರ್ ಮಂಡಲ್ ತಿಳಿಸಿದ್ದಾರೆ.

ಸಿಡಿಲಿನಿಂದ ಸಾವನ್ನಪ್ಪಿದವರ ಕುಟುಂಬಗಳಿಗೆ ರಾಜ್ಯ ಸರ್ಕಾರ ಒಟ್ಟು 4 ಮಿಲಿಯನ್ ರೂಪಾಯಿ(4,600) ಪರಿಹಾರ ಘೋಷಿಸಿದೆ. 2024 ರಲ್ಲಿ ಕನಿಷ್ಠ 243 ಜನ ಸಿಡಿಲಿನಿಂದ ಸಾವನ್ನಪ್ಪಿದ್ದರು ಮತ್ತು ಅದರ ಹಿಂದಿನ ವರ್ಷ 275 ಜನ ಸಾವನ್ನಪ್ಪಿದರು ಎಂದು ರಾಜ್ಯ ಸರ್ಕಾರ ತಿಳಿಸಿದೆ.

● ಉ. ಪ್ರದೇಶದ ಪೊಲೀಸ್ ಇಲಾಖೆ ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಇಡೀ ದೇಶವನ್ನೇ ಬೆಚ್ಚಿಬೀಳಿಸಿವೆ


# ಅಪರಾಧ ಮಾಡಿದ್ರೆ ಹೊಡೆದಾಕ್ತೀವಿ: ತಮ್ಮ ಮಾತು ನಿಜ ಮಾಡಿದ ಯೋಗಿ



**ಲಖನೌ:** ಅಗರ್ ಅಪರಾಧ್ ಕರೆಂಗೆ ತೊ ಠೋಕ್ ದಿಯೇ ಜಾಯೆಂಗೆ.. ಇದು ಯೋಗಿ ಆದಿತ್ಯನಾಥ್ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗ ಹೇಳಿದ ಮಾತು.. ಅಂದ್ರೇ ನೀವು ಅಪರಾಧ ಮಾಡಿದರೆ ನಿಮ್ಮನ್ನು ಹೊಡೆದು ಹಾಕ್ತೀವಿ ಅಂತಾ ಅರ್ಥ.. ಯೋಗಿ ಆದಿತ್ಯನಾಥ್ 2017ರಲ್ಲಿ ನೀಡಿದ ಈ ಖಡಕ್ ಎಚ್ಚರಿಕೆಯನ್ನು ಆಗ ಯಾರು ಗಂಭೀರವಾಗಿ ತೆಗೆದುಕೊಂಡಿದ್ದಿಲ್ಲ.

**ನಿಮ್ಮನ್ನು ಹೊಡೆದು ಹಾಕ್ತೀವಿ**

ಆದರೆ, ಈಗ ಉತ್ತರ ಪ್ರದೇಶದ ಪೊಲೀಸ್ ಇಲಾಖೆ ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಇಡೀ ದೇಶವನ್ನೇ ಬೆಚ್ಚಿಬೀಳಿಸಿವೆ. ಯುಪಿಯಲ್ಲಿ ಅಪರಾಧ ಕೃತ್ಯ ಎಸಗುತ್ತಿದ್ದವರಿಗೆ ಯೋಗಿ ಆದಿತ್ಯನಾಥ್ ಸರ್ಕಾರ ಸಿಂಹಸ್ವಪ್ನವಾಗಿದ್ದು, ಕಳೆದು 8 ವರ್ಷಗಳಲ್ಲಿ ಅಂದ್ರೇ 2017 ರಿಂದ ಇಲ್ಲಿಯವರೆಗೆ ಸುಮಾರು 15,000 ಎನ್‌ಕೌಂಟರ್‌ಗಳು ಉತ್ತರ ಪ್ರದೇಶದಲ್ಲಿ ನಡೆದಿವೆ. ಇದರಲ್ಲಿ ಪೊಲೀಸರ ಗುಂಡೇಟಿಗೆ 238 ಅಪರಾಧಿಗಳು ಸಾವನ್ನಪ್ಪಿದ್ದರೆ, 9,000ಕ್ಕೂ ಹೆಚ್ಚು ಮಂದಿಗೆ ಕಾಲಿಗೆ ಗುಂಡೇಟು ಬಿದ್ದಿದೆ. ಈ ಅಂಕಿ-ಅಂಶಗಳು ಈಗ ದೇಶದಲ್ಲಿ ಹೊಸ ಚರ್ಚೆಯನ್ನು ಹುಟ್ಟುಹಾಕಿದ್ದು, ಇದು ಅಪರಾಧಿಗಳ ವಿರುದ್ಧದ ನಿರ್ಣಾಯಕ ಹೋರಾಟವೇ ಅಥವಾ ನ್ಯಾಯಾಂಗ ವ್ಯವಸ್ಥೆಯನ್ನು ಬದಿಗೊತ್ತಿ ನಡೆಸುತ್ತಿರುವ ಪೂರ್ವ ನಿಯೋಜಿತ ಹತ್ಯೆಗಳೇ ಎಂಬ ಚರ್ಚೆ ಜೋರಾಗಿದ್ದು, ಯೋಗಿ ಆದಿತ್ಯನಾಥ್‌ಗೆ ಎನ್‌ಕೌಂಟರ್ ಮ್ಯಾನ್ ಆಫ್ ದಿ ಯುಪಿ ಅಂತಾ ಕರೆಯಲಾಗುತ್ತಿದೆ. ಹೌದು, ಉತ್ತರ ಪ್ರದೇಶದಲ್ಲಿ ಅಪರಾಧದ ವಿರುದ್ಧ ಶೂನ್ಯ ಸಹಿಷ್ಣುತೆ ಅಂದ್ರೆ ಝೀರೋ ಟೋಲರೆನ್ಸ್ ನೀತಿಯನ್ನು ಯೋಗಿ ಆದಿತ್ಯನಾಥ್ ಸರ್ಕಾರ ಜಾರಿಗೆ ತಂದಿದೆ. ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ್ ಸಿಎಂ ಆದ್ಮೇಲೆ ಅಪರಾಧಿಗಳಿಗೆ ನಡುಕ ಶುರುವಾಗಿದೆ. 2017ರಿಂದ ಇಲ್ಲಿಯವರೆಗೆ ಸುಮಾರು 15,000 ಎನ್‌ಕೌಂಟರ್ ಕಾರ್ಯಾಚರಣೆಗಳನ್ನು ನಡೆಸಿರುವುದಾಗಿ ಉತ್ತರ ಪ್ರದೇಶ ಪೊಲೀಸರು ಅಧಿಕೃತವಾಗಿ ಘೋಷಿಸಿದ್ದಾರೆ.




ಈ ಆಪರೇಷನ್‌ಗಳಲ್ಲಿ 238 ಕುಖ್ಯಾತ ಅಪರಾಧಿಗಳು ಸಾವನ್ನಪ್ಪಿದ್ದರೆ, 9,000ಕ್ಕೂ ಹೆಚ್ಚು ಮಂದಿ ಅಪರಾಧಿಗಳು ಪೊಲೀಸರ ಗುಂಡೇಟಿನಿಂದ ಗಾಯಗೊಂಡಿದ್ದಾರೆ.

**ದಿ ಎನ್‌ಕೌಂಟರ್ ಮ್ಯಾನ್ ಆಫ್ ದಿ ಯುಪಿ**

**ಯೋಗಿ ಆದಿತ್ಯನಾಥ್ ಅವರನ್ನು ಎನ್‌ಕೌಂಟರ್ ಮ್ಯಾನ್ ಆಫ್ ದಿ ಉತ್ತರ ಪ್ರದೇಶ ಎಂದು ಕರೆಯಲಾಗುತ್ತಿದೆ. ಯೋಗಿ ಪೊಲೀಸರಿಗೆ ಫ್ರೀ ಹ್ಯಾಂಡ್ ನೀಡಿದ್ದು, ಅಪರಾಧ ಕೃತ್ಯಗಳನ್ನು ತಡೆಯಲು ಎನ್‌ಕೌಂಟರ್ ಅನ್ನು ತಂತ್ರವಾಗಿ ಬಳಸುತ್ತಿದ್ದಾರೆ. ಪೊಲೀಸ್ ಆಪರೇಷನ್‌ಗಳಲ್ಲಿ ರಾಜಕೀಯ ಹಸ್ತಕ್ಷೇಪ ನಡೆಯುತ್ತಿಲ್ಲ ಎಂದು ಪೊಲೀಸರು ಹೇಳಿದ್ದಾರೆ. 2017ರಿಂದ ಇಲ್ಲಿವರೆಗೂ ಸಾವಿರಾರು ಎನ್‌ಕೌಂಟರ್ ಮಾಡಿದ್ದು, ಅದರ ಕ್ರೆಡಿಟ್ ಅನ್ನು ಪೊಲೀಸರು ಯೋಗಿ ಆದಿತ್ಯನಾಥ್‌ಗೆ ನೀಡುತ್ತಿದ್ದಾರೆ. 20 ಸಾವಿರಕ್ಕೂ ಅಧಿಕ ವಾಂಟೆಡ್ ಕ್ರಿಮಿನಲ್‌ಗಳನ್ನು ಬಂಧಿಸಲಾಗಿದೆ.**

### ಕ್ರೈಂ ಹಾಟ್‌ಸ್ಪಾಟ್‌ಗಳಲ್ಲಿ ಪೊಲೀಸರ ಆಪರೇಷನ್

**ಯೋಗಿ ಆದಿತ್ಯನಾಥ್ ಅವರು ಕ್ಲಿಯರ್ ಆಗಿ ಹೇಳಿದ್ದು, ಅಪರಾಧಿಗಳು ಕ್ರೈಮ್ ಅನ್ನು ಬಿಡಬೇಕು ಅಥವಾ ಉತ್ತರ ಪ್ರದೇಶವನ್ನು ತೊರೆಯಬೇಕು ಎಂದು ಖಡಕ್ ಸಂದೇಶವನ್ನು ಕ್ರಿಮಿನಲ್‌ಗಳಿಗೆ ನೀಡಿದ್ದಾರೆ. ಈ ಹಿನ್ನೆಲೆ ನಾವು ಯೋಗಿ ಆದಿತ್ಯನಾಥ್ ಅವರ ಆದೇಶವನ್ನು ಪಾಲಿಸುತ್ತಿದ್ದೇವೆ ಎಂದು ಪೊಲೀಸರು ಹೇಳಿದ್ದಾರೆ. ಕ್ರೈಂ ಹಾಟ್‌ಸ್ಪಾಟ್‌ಗಳಲ್ಲಿ ಯುಪಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದು, ಡಿಜಿಪಿ ರಾಜೀವ್ ಕೃಷ್ಣ ಅವರ ಪ್ರಕಾರ, ಅತಿ ಹೆಚ್ಚು ಕಾರ್ಯಾಚರಣೆಗಳು ಪಶ್ಚಿಮ ಉತ್ತರ ಪ್ರದೇಶದ ಮೀರತ್ ವಲಯದಲ್ಲಿ ನಡೆದಿವೆ. ಇಲ್ಲಿ 7,969 ಅಪರಾಧಿಗಳನ್ನು ಬಂಧಿಸಲಾಗಿದ್ದು, 2,911 ಮಂದಿ ಪೊಲೀಸರ ಗುಂಡೇಟಿಗೆ ಗಾಯಗೊಂಡಿದ್ದಾರೆ. ಆಗ್ರಾ ವಲಯದಲ್ಲಿ 5,529 ಅಪರಾಧಿಗಳನ್ನು ಬಂಧಿಸಿದ್ದು, 741 ಮಂದಿ ಕಾಲಿಗೆ ಗುಂಡು ಹೊಡೆಯಲಾಗಿದೆ ಎಂದು ಹೇಳಿದ್ದಾರೆ.**


## ಪಾಕಿಸ್ತಾನಕ್ಕೆ ಡೊನಾಲ್ಡ್ ಟ್ರಂಪ್ ಭೇಟಿ ಸುಳ್ಳು ಸುದ್ದಿ ಹಬ್ಬಿಸಿ ಮತ್ತೆ ತಪ್ಪೊಪ್ಪಿಕೊಂಡ ಪಾಕಿಸ್ತಾನದ 2 ಚಾನೆಲ್‌ಗಳು

**ಹೊಸದಿಲ್ಲಿ:** ಡೊನಾಲ್ಡ್ ಟ್ರಂಪ್ ಸೆಪ್ಟೆಂಬರ್‌ನಲ್ಲಿ ಪಾಕಿಸ್ತಾನಕ್ಕೆ ಆಗಮಿಸಲಿದ್ದಾರೆ ಎಂದು ಪಾಕಿಸ್ತಾನದ ಪ್ರಮುಖ ಸುದ್ದಿವಾಹಿನಿಗಳಾದ ಜಿಯೋ ನ್ಯೂ ಹಾಗೂ ಎಆರ್‌ಐ ನ್ಯೂಸ್ ವರದಿ ಮಾಡಿತ್ತು. ಆದರೆ ಈ ಎರಡೂ ಚಾನೆಲ್‌ಗಳು ತಮ್ಮ ಹೇಳಿಕೆಯನ್ನು ಹಿಂದೆ ಪಡೆದಿವೆ, ಮಾಹಿತಿಯನ್ನು ಖಚಿತಪಡಿಸದೇ ಪ್ರಸಾರ ಮಾಡಿರುವುದಾಗಿ ಒಪ್ಪಿಕೊಂಡಿವೆ.

ಅಮೆರಿಕ ವೈಟ್ ಹೌಸ್ ಕಡೆಯಿಂದಲೂ ಮಾಧ್ಯಮಗಳಿಗೆ ಸ್ಪಷ್ಟನೆ ರವಾನಿಸಿದ್ದು, ಇಸ್ಲಾಮಾಬಾದ್ ಭೇಟಿ ಈ ಬಾರಿ ನಿಗದಿಯಾಗಿಲ್ಲ ಎಂದು ಸ್ಪಷ್ಟಪಡಿಸಿದೆ. ಅಲ್ಲದೆ ಪಾಕಿಸ್ತಾನದಲ್ಲಿರುವ ಅಮೆರಿಕ ರಾಯಭಾರಿ ಕಛೇರಿಯಿಂದಲೂ ನಮಗೆ ಘೋಷಣೆ ಮಾಡಲು ಏನೂ ಇಲ್ಲ ಎಂದು ರಾಯಿಟರ್ಸ್ ಗೆ ಹೇಳಿದೆ. ಸುಮಾರು ಎರಡು ದಶಕಗಳಿಂದಲೂ ಅಮೆರಿಕದ ಯಾವ ಹಾಲಿ ಅಧ್ಯಕ್ಷರೂ ಕೂಡಾ ಪಾಕಿಸ್ತಾನಕ್ಕೆ ಭೇಟಿ ನೀಡಿಲ್ಲ. ಕೊನೆಯ ಭೇಟಿ 2006 ರಲ್ಲಿ ಆಗಿನ ಅಧ್ಯಕ್ಷ ಜಾರ್ಜ್ ಡಬ್ಲ್ಯು ಬುಷ್ ಭೇಟಿ ನೀಡಿದ್ದರು.

**ಟ್ರಂಪ್ ಸಪ್ಟೆಂಬರ್‌ನಲ್ಲಿ ಇಂಗ್ಲೆಂಡ್‌ಗೆ ಭೇಟಿ**

ಡೊನಾಲ್ಡ್ ಟ್ರಂಪ್ ಅಮೆರಿಕದ 2ನೇ ಬಾರಿಗೆ ಅಧ್ಯಕ್ಷರಾದ ಬಳಿಕ ಭೇಟಿ ನಿಡುತ್ತಿರುವ ಎರಡನೇ ದೇಶ ಬ್ರಿಟನ್. ಹೌದು ಟ್ರಂಪ್ ಪ್ರವಾಸ ನಿರ್ಣಯ ಆಗಿರೋದು ಪಾಕಿಸ್ತಾನಕ್ಕಲ್ಲ, ಬದಲಾಗಿ ಇಂಗ್ಲೆಂಡ್ ಗೆ ಕಿಂಗ್ ಚಾರ್ಲ್ಸ ಸೆಪ್ಟೆಂಬರ್ 17 ರಿಂದ 19 ರವರೆಗೆ ಯುನೈಟೆಡ್ ಕಿಂಗ್‌ಡಂನಲ್ಲಿ ಅಮೆರಿಕ ಅಧ್ಯಕ್ಷರಿಗೆ ಆತಿಥ್ಯ ನೀಡಲಿದ್ದಾರೆ ಎಂದು ಬಕಿಂಗ್ಹ್ಯಾಮ್ ಅರಮನೆ ಘೋಷಿಸಿದೆ.



### ಅಮೆರಿಕ-ಪಾಕ್ ಸಂಬಂಧ ವೃದ್ಧಿ

**ಪಾಕ್‌ಗೆ ಟ್ರಂಪ್ ಅವರ ಯಾವುದೇ ಅಧಿಕೃತ ಭೇಟಿ ಯೋಜಿತವಾಗಿಲ್ಲ. ಆದರೆ, ಅಮೆರಿಕ-ಪಾಕಿಸ್ತಾನ ಸಂಬಂಧವು ಇತ್ತೀಚೆಗೆ ಸುಧಾರಿಸಿದೆ. ಕಳೆದ ತಿಂಗಳು, ಡೊನಾಲ್ಡ್ ಟ್ರಂಪ್ ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಅವರನ್ನು ವೈಟ್ ಹೌಸ್‌ನಲ್ಲಿ ಆತಿಥ್ಯ ವಹಿಸುವ ಮೂಲಕ ಸುದ್ದಿಯಾಗಿದ್ದರು. ಈ ಹಿಂದೆ ಯಾವುದೇ ಅಮೆರಿಕ ಅಧ್ಯಕ್ಷರು ಈ ರೀತಿ ಮಾಡಿರಲಿಲ್ಲ.**


## ಹಿಂದೂ, ಬೌದ್ಧ, ಸಿಖ್ ಬಿಟ್ಟು ಅನ್ಯ ಧರ್ಮಿಯರ ಎಸ್‌ಸಿ ಪ್ರಮಾಣ ಪತ್ರ ರದ್ದು : ದೇವೇಂದ್ರ ಫಡ್ನವಿಸ್

**ಮುಂಬೈ:** ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಹಿಂದೂ, ಬೌದ್ಧ ಮತ್ತು ಸಿಖ್ ಧರ್ಮವನ್ನು ಹೊರತುಪಡಿಸಿ ಬೇರೆ ಧರ್ಮಕ್ಕೆ ಸೇರಿದ ವ್ಯಕ್ತಿಯೊಬ್ಬರು ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ವಂಚನೆಯಿಂದ ಪಡೆದಿದ್ದರೆ, ಅದನ್ನು ರದ್ದುಗೊಳಿಸಲಾಗುವುದು ಎಂದು ಹೇಳಿದ್ದಾರೆ. ಸರ್ಕಾರಿ ಉದ್ಯೋಗಗಳಂತಹ ಮೀಸಲಾತಿ ಸೌಲಭ್ಯಗಳನ್ನು ಪಡೆದಿದ್ದರೆ ಅಂತಹ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.



ಅಂತಹ ವ್ಯಕ್ತಿ ವಂಚನೆಯಿಂದ ಪಡೆದ ಎಸ್‌ಸಿ ಪ್ರಮಾಣಪತ್ರವನ್ನು ಬಳಸಿಕೊಂಡು ಚುನಾವಣೆಯಲ್ಲಿ ಗೆದ್ದಿದ್ದರೆ, ಅವರ ಆಯ್ಕೆಯನ್ನು ಅನೂರ್ಜಿತವೆಂದು ಘೋಷಿಸಲಾಗುತ್ತದೆ ಎಂದು ಫಡ್ನವೀಸ್ ವಿಧಾನ ಪರಿಷತ್ತಿನಲ್ಲಿ ಭರವಸೆ ನೀಡಿದ್ದಾರೆ. ಗಮನ ಸೆಳೆಯುವ ನಿರ್ಣಯಕ್ಕೆ ಉತ್ತರಿಸುತ್ತಾ, ಬಲವಂತ ಮತ್ತು ವಂಚನೆಯ ಮೂಲಕ ಧಾರ್ಮಿಕ ಮತಾಂತರದ ಪ್ರಕರಣಗಳನ್ನು ಎದುರಿಸಲು ರಾಜ್ಯ ಸರ್ಕಾರ ಬಲವಾದ ನಿಬಂಧನೆಗಳನ್ನು ತರಲು ಉದ್ದೇಶಿಸಿದೆ ಎಂದು ಹೇಳಿದರು. ಅಮಿತ್ ಗೋರ್ಖೆ (ಬಿಜೆಪಿ) ಅವರು ಕ್ರಿಪ್ಟೋ ಕ್ರಿಶ್ಚಿಯನ್ನರು ಧರ್ಮದ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಮತ್ತು ಕೆಲವು ಜನರು ಇತರ ಧರ್ಮಗಳನ್ನು ಪ್ರತಿಪಾದಿಸುವಾಗ ಎಸ್‌ಸಿ ವರ್ಗದ ಅಡಿಯಲ್ಲಿ ಮೀಸಲಾತಿಯಿಂದ ಪ್ರಯೋಜನ ಪಡೆಯುತ್ತಾರೆ ಎಂದು ಹೇಳಿಕೊಂಡಿದ್ದರು. ಕ್ರಿಪ್ಟೋ ಕ್ರಿಶ್ಚಿಯನ್ನರು ಎಂಬುದು ಕಾಗದದ ಮೇಲೆ ಬೇರೆ ಧರ್ಮಕ್ಕೆ ಸೇರಿದ ಕ್ರಿಶ್ಚಿಯನ್ ಧರ್ಮವನ್ನು ವಿವೇಚನೆಯಿಂದ ಅನುಸರಿಸುವ ಜನರಿಗೆ ಸ್ಪಷ್ಟ ಉಲ್ಲೇಖವಾಗಿದೆ. ಮೇಲ್ನೋಟಕ್ಕೆ ಅವರು ಎಸ್‌ಸಿ ಸಮುದಾಯಕ್ಕೆ ಸೇರಿದವರಾಗಿದ್ದು, ಸರ್ಕಾರಿ ಉದ್ಯೋಗಗಳಂತೆ ಮೀಸಲಾತಿ ಸೌಲಭ್ಯಗಳನ್ನು ಪಡೆಯುತ್ತಾರೆ ಎಂದು ಅವರು ಹೇಳಿದ್ದರು. ನವೆಂಬರ್ 26, 2024 ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಲ್ಲಿ, ಪರಿಶಿಷ್ಟ ಜಾತಿ ವರ್ಗದ ಮೀಸಲಾತಿಯನ್ನು ಹಿಂದೂಗಳು, ಬೌದ್ಧರು ಮತ್ತು ಸಿಖ್ಖರು ಮಾತ್ರ ಪಡೆಯಬಹುದು, ಇತರ ಧರ್ಮಗಳಿಗೆ ಸೇರಿದವರು ಅಲ್ಲ ಎಂದು ಸ್ಪಷ್ಟಪಡಿಸಿದೆ ಎಂದು ಫಡ್ನವೀಸ್ ಹೇಳಿದರು.

## ಹೃದಯ ಶಸ್ತ್ರಚಿಕಿತ್ಸೆಗೊಳಗಾಗಿ ಮನೆಗೆ ಬಂದಾತನಿಗೆ ಹೊಡೀತು 1.66 ಕೋಟಿ ರೂ. ಲಾಟರಿ



**ವಾಷಿಂಗ್ಟನ್:** ಅಮೆರಿಕದ ಉತ್ತರ ಕ್ಯಾಲಿಫೋರ್ನಿಯಾದ ಬ್ರನ್ಸ್‌ವಿಕ್ ಕೌಂಟಿಯ ನಿವಾಸಿ ಜಾನ್ ವ್ಯಾಟ್ಸನ್ ಅವರು ಆ ಪ್ರಾಂತ್ಯದಲ್ಲಿ ಹೊಸತಾಗಿ ಶುರುವಾಗಿರುವ ಸ್ಕ್ರಾಚ್-ಆಫ್ ಗೇಮ್ ಎಂಬ ಲಾಟರಿಯ ಮೊದಲ ವಿಜೇತರಾಗಿ ಹೊರಹೊಮ್ಮಿದ್ದಾರೆ. ಬಹುಮಾನವಾಗಿ ಅವರಿಗೆ 200,000 (ಅಂದಾಜು 1.72 ಕೋಟಿ ರೂ.) ಬಂದಿದೆ. ನಗರದಲ್ಲಿರುವ ಎನ್.ಸಿ. ಶಿಕ್ಷಣ ಲಾಟರಿ ಕೇಂದ್ರವನ್ನು ಜುಲೈ 16 ರಂದು ಭೇಟಿ ನೀಡಿದ ಅವರು, ತೆರಿಗೆ ಕಡಿತದ ನಂತರ ತಮಗೆ ಬಂದ 1,43,501 ಡಾಲರ್ ( ರೂ. 1,20 ಕೋಟಿ) ನಷ್ಟು ಹಣವನ್ನು ಪಡೆದರು. ಇದು ಜಾನ್ ಅವರ ಮನೆಯಲ್ಲಿ ದೊಡ್ಡ ಮಟ್ಟದಲ್ಲಿ ಸಂತೋಷದ ವಾತಾವರಣ ನಿರ್ಮಿಸಿದೆ. ಏಕೆಂದರೆ, ಇತ್ತೀಚೆಗಷ್ಟೇ ಜಾನ್ ಅವರು ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಅದಕ್ಕಾಗಿ ಅಪಾರ ಹಣವನ್ನೂ ವ್ಯಯಿಸಿದ್ದರು.

ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಬಂದಿರುವ ಅವರಿಗೀಗ ಲಕ್ಷ್ಮೀ ಕಟಾಕ್ಷ ಒಲಿದಿದೆ. ಈಗ ಬಂದಿರುವ ಹಣವನ್ನು ತಮ್ಮ ಮುಂದಿನ ಆರೋಗ್ಯ ಖರ್ಚುಗಳಿಗೆ ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳುವುದಾಗಿ ಹೇಳಿರುವ ಅವರು, ಇನ್ನು ಮನೆಯ ಬ್ಯುಸಿನೆಸ್ ಗೆ ಅನುಕೂಲವಾಗಲೆಂದು ಒಂದು ಶಕ್ತಿಶಾಲಿ ಟ್ರಕ್ ಖರೀದಿಸುವುದಾಗಿ ಹೇಳಿದ್ದಾರೆ.

**5 ಟೈಮ್ಸ್ ಲಕ್ಕಿ ಟಿಕೆಟ್' ಭಾಗ್ಯ:** ಬ್ರನ್ಸ್‌ವಿಕ್ ಪಟ್ಟಣದ ವೈಟ್‌ವಿಲ್ಲೆ ರಸ್ತೆಯಲ್ಲಿರುವ ಸ್ಕ್ಯಾಚ್‌ಮನ್ ಸಂಸ್ಥೆಯಿಂದ ಖರೀದಿಸಿದ '5 ಟೈಮ್ಸ್ ಲಕ್ಕಿ' ಟಿಕೆಟ್ ಮೂಲಕ ಈ ಅದ್ಭುತ ಫಲಿತಾಂಶ ಸಾದರವಾಯಿತು. ಗೇಮು ಹೊಸದಾಗಿ ಆರಂಭವಾಗಿದ್ದು, ಇನ್ನೂ ನಾಲ್ಕು ಮೇಲು ಬಹುಮಾನಗಳು ಲಭ್ಯವಿವೆ'' ಎಂದು ಲಾಟರಿ ಅಧಿಕಾರಿಗಳು ತಿಳಿಸಿದ್ದಾರೆ.

ಹೃದಯ ಶಸ್ತ್ರಚಿಕಿತ್ಸೆಯವರೆಗೂ ಯಶಸ್ವಿಯಾಗಿ ಚೇತರಿಸಿಕೊಂಡಿರುವ ವ್ಯಾಟ್ಸನ್ ಅವರಿಗೆ ಈ ಬಹುಮಾನ 'ಐಸಿಂಗ್ ಆನ್ ದ ಕೇಕ್' ಎಂದು ಪತ್ನಿ ಲೋಯಿಸ್ ಅತ್ಯಂತ ಸಂತೋಷದಿಂದ ಹೊಸಬಡಿದರು. ಈ ಹಣವನ್ನು ಅವರು ತಮ್ಮ ಆರೋಗ್ಯ ರಕ್ಷಣೆ ಹಾಗೂ ಹೊಸ ಟ್ರಕ್ ಖರೀದಿಗೆ ವಿನಿಯೋಗಿಸುವ ನಿರ್ಧಾರ ಮಾಡಿದ್ದಾರೆ.

## 80 ಸಾವಿರ ನಗ್ನ ಫೋಟೋ, 1000 ಕೋಟಿ ರೂ. ಹಣ

● ಬೌದ್ಧ ಬಿಕ್ಕುಗಳನ್ನೂ ಪಟಾಯಿಸಿದ್ದ ಥಾಯ್ಲೆಂಡಿನ ಮೇನಕೆ ಈಗ ಅರೆಸ್ಟ್

**ಬ್ಯಾಂಕಾಕ್:** ಆಕೆ ಅಂತಿಂಥ ಸುಂದರಿಯಲ್ಲ? ಎಂಥಾ ಸನ್ಯಾಸಿಗಳ ಬಾಯಲ್ಲೂ ನೀರೂರಿಸುವಂಥಳು. ಆಕೆಯ ಹೆಸರು ವಿಲಾವನ್ ಎಮ್ಸಾವಟ್. ಅನೇಕ ಪ್ರಭಾವಿಗಳನ್ನು ಪಟಾಯಿಸುವುದು, ಅವರ ಜೊತೆಗೆ ಹಾಸಿಗೆ ಹಂಚಿಕೊಳ್ಳುವುದು, ಆ ಪ್ರಣಯದ ದೃಶ್ಯಗಳನ್ನು ಗುಟ್ಟಾಗಿ ಫೋಟೋ ತಗೆಯಿಸಿಕೊಳ್ಳುವುದು, ಆನಂತರ ಆ ಫೋಟೋಗಳನ್ನಿಟ್ಟುಕೊಂಡು ಆ ವ್ಯಕ್ತಿಗಳಿಂದ ಹಣ ಸುಲಿಗೆ ಮಾಡುವುದು.

ವಿಲಾವನ್ ಜಾಲಕ್ಕೆ ಸಿಲುಕಿ ವಿಲವಿಲನೆ ಒದ್ದಾಡಿದ ಅನೇಕರಿಂದ ಸುಲಿಗೆ ಮಾಡಿದ ಹಣದಿಂದ ಉತ್ತರ ಬ್ಯಾಂಕಾಕ್ ನಲ್ಲಿ ಐಶಾರಾಮಿ ಜೀವನವನ್ನು ನಡೆಸುತ್ತಿದ್ದಳು ಆಕೆ. ಆದರೀಗ, ಪೊಲೀಸರ ಅತಿಥಿಯಾಗಿದ್ದಾಳೆ. ಈಕೆಯ ಜಾಲವನ್ನು ಭೇದಿಸಿರುವ ಪೊಲೀಸರು ಜು. 17ರಂದು ಆಕೆಯ ಮನೆಯ ಮೇಲೆ ರೈಡ್ ಮಾಡಿ ಆಕೆಯನ್ನು ಅರೆಸ್ಟ್ ಮಾಡಿದ್ದಾರೆ.

ಆಕೆಯ ಮನೆಯನ್ನು ಸರ್ಚ್ ಮಾಡಿದಾಗ ಅಲ್ಲಿ, 80 ಸಾವಿರಕ್ಕೂ ಹೆಚ್ಚು ಫೋಟೋಗಳು ಸಿಕ್ಕಿವೆ. ಜೊತೆಗೆ 100 ಕೋಟಿ ರೂ. ಮೌಲ್ಯದ ಥಾಯ್ಲೆಂಡ್ ಕರೆನ್ಸಿಯೂ ಸಿಕ್ಕಿದೆ. ಆಕೆಗಿನ್ನೂ 30ರ ಪ್ರಾಯ. ಅಷ್ಟರಲ್ಲೇ ದೊಡ್ಡ ಬಂಗಲೆ, ಐಶಾರಾಮಿ ಜೀವನದ ಜೊತೆಗೆ 100 ಕೋಟಿ ರೂ.ಯಷ್ಟು ಹಣ ಇಟ್ಟುಕೊಂಡಿದ್ದಾಳೆಂದರೆ ನೀವೇ ಊಹಿಸಿ?. ಆಕೆ ಎಷ್ಟು ಸಶ್ರಮವಹಿಸಿದ್ದಾಳೆಂದು.

- **ಥಾಯ್ಲೆಂಡಿನಲ್ಲಿ ಅನೇಕ ಸಿರಿವಂತರನ್ನು ಪಟಾಯಿಸಿದ್ದ ಸುಂದರಿ ಅರೆಸ್ಟ್.**
- **ಬೌದ್ಧ ಬಿಕ್ಕುಗಳನ್ನೂ ಬಿಡದೇ ಪಟಾಯಿಸಿದ್ದ ಸುಂದರಿಯ ಹೆಸರು ವಿಲಾವನ್ ಎಮ್ಸಾವಟ್.**
- **ಬ್ಯಾಂಕಾಂಕ್‌ನ ಉತ್ತರದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ ಆಕೆಯ ಮನೆಯಲ್ಲಿದ್ದವು 80,000ಕ್ಕೂ ಹೆಚ್ಚು ನಗ್ನ ಫೋಟೋಗಳು ಹಾಗೂ 1000 ಕೋಟಿ ರೂ. ಹಣ.**

**ಬೌದ್ಧ ಬಿಕ್ಕುಗಳನ್ನೂ ಬಿಟ್ಟಿಲ್ಲವಂತೆ**



### ಆಧುನಿಕ ಮೇನಕೆ

**ಆಸೆಯೇ ದುಃಖಕ್ಕೆ ಮೂಲ ಎಂಬ ಬುದ್ಧನ ಉಪದೇಶವನ್ನು ಅಕ್ಷರಶಃ ಪಾಲಿಸುವಂಥ ಬೌದ್ಧ ಬಿಕ್ಕುಗಳನ್ನೂ ಬಿಟ್ಟಿಲ್ಲವಂತೆ ಈಕೆ. ಹಾಗೆಂದು ಪೊಲೀಸರು ಆರೋಪಿಸಿದ್ದಾರೆ. ಆಕೆ, ಏನಿಲ್ಲವೆಂದರೂ ಕನಿಷ್ಟ 9 ಬೌದ್ಧ ಬಿಕ್ಕುಗಳೊಂದಿಗೆ ಹಾಸಿಗೆ ಹಂಚಿಕೊಂಡಿದ್ದಳೆಂದು ಪೊಲೀಸರು ತಿಳಿಸಿದ್ದಾರೆ. ಅವರ ಫೋಟೋಗಳು ಕೂಡ ಸಿಕ್ಕಿವೆ. ವಿಶ್ವಾಮಿತ್ರನ ತಪೋಭಂಗ ಮಾಡಿದಂತೆ ಬೌದ್ಧ ಬಿಕ್ಕುಗಳನ್ನು ಹಾಸಿಗೆಗೆ ಎಳೆದ ಆಧುನಿಕ ಮೇನಕೆಯೀಕೆ.**

**ಸಾರ್ವಜನಿಕರ ಆಕ್ರೋಶ:** ಈಕೆಯ ಪ್ರಕರಣ ಹೊರಕ್ಕೆ ಬರುತ್ತಿದ್ದಂತೆ, ಸಾರ್ವಜನಿಕ ವಲಯದಲ್ಲಿ ಭಾರೀ ಆಕ್ರೋಶ ವ್ಯಕ್ತವಾಗಿದೆ. ಹೇಳಿಕೇಳಿ ಬೌದ್ಧ ಧರ್ಮವನ್ನು ಹಾಸು ಹೊದ್ದಿರುವ ಸಅಲ್ಲಿನ ಜನರಿಗೆ ಬೌದ್ಧ ಬಿಕ್ಕುಗಳ ಈ ಲೈಂಗಿಕ ಹಗರಣ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

# ಸ್ವಿರಿಡೆಂಕೋ, ಉಕ್ರೇನ್ ನೂತನ ಪಿಎಂ : ರಷ್ಯಾ ಜೊತೆ ಯುದ್ದದ ವೇಳೆ ಅಚ್ಚರಿ

● ಪ್ರಧಾನಮಂತ್ರಿಯನ್ನು ಘೋಷಿಸಿದ ಝೆಲೆನ್ಸ್ಕಿ, ಟ್ರಂಪ್ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಳ್ಳುವಲ್ಲಿ ಯೂಲಿಯಾ ಯಶಸ್ವಿ

**ಕೈವ್ :** ರಷ್ಯಾ ಜೊತೆಗಿನ ಯುದ್ದದ ವೇಳೆಯೇ, ಉಕ್ರೇನ್ ದೇಶದಲ್ಲಿ ಪ್ರಮುಖ ರಾಜಕೀಯ ಬೆಳವಣಿಗೆ ನಡೆದಿದೆ. ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ, ಯೂಲಿಯಾ ಸ್ಟಿರಿಡೆಂಕೊ ಅವರನ್ನು ದೇಶದ ನೂತನ ಪ್ರಧಾನಿಯಾಗಿ ನೇಮಕ ಮಾಡಿದ್ದರೆ ರಾಜತಾಂತ್ರಿಕವಾಗಿ ಇದೊಂದು ಉತ್ತಮ ನಡೆ ಎಂದು ವ್ಯಾಖ್ಯಾನಿಸಲಾಗುತ್ತಿದೆ.

29 ವರ್ಷದ ಯೂಲಿಯಾ ದೇಶದ 19ನೇ ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಖ್ಯಾತ ಅರ್ಥಶಾಸ್ತ್ರಜ್ಞೆಯಾಗಿರುವ ಇವರು, ಈಗಿನ ಪ್ರಧಾನಮಂತ್ರಿ ಶ್ಮಿಹಲ್ ಅವರ ಜಾಗಕ್ಕೆ ನೇಮಕಗೊಂಡಿದ್ದಾರೆ. ಹಾಲೀ ಪ್ರಧಾನಿಯ ವಿರುದ್ಧ ಭ್ರಷ್ಟಾಚಾರದ ಗುರುತರ ಆರೋಪದ ಹಿನ್ನಲೆಯಲ್ಲಿ ಅಧ್ಯಕ್ಷರು ಈ ಬದಲಾವಣೆಗೆ ಮುಂದಾಗಿದ್ದಾರೆ.

1 **ರಷ್ಯಾ ಜೊತೆಗಿನ ಯುದ್ದದ ವೇಳೆ ಹೊಸ ಪ್ರಧಾನಮಂತ್ರಿಯನ್ನು ಘೋಷಿಸಿದ ಝೆಲೆನ್ಸ್ಕಿ**
2 **ಯೂಲಿಯಾ ಸ್ವಿರಿಡೆಂಕೋ ಉಕ್ರೇನ್ ದೇಶದ ಹತ್ತೊಂಬತ್ತನೇ ಪ್ರಧಾನಿಯಾಗಿ ಆಯ್ಕೆ**
3 **ಡೊನಾಲ್ಡ್ ಟ್ರಂಪ್ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಳ್ಳುವಲ್ಲಿ ಯೂಲಿಯಾ ಯಶಸ್ವಿ**

### ಟ್ರಂಪ್ ಆಡಳಿತದೊಂದಿಗೆ ಒಪ್ಪಂದ

**ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ದದ ಸಮಯದಲ್ಲಿ ಯೂಲಿಯಾ ಆಯ್ಕೆ ಮಹತ್ವ ಪಡೆದುಕೊಂಡಿರುವುದಕ್ಕೆ ಕಾರಣ, ಇವರು ಈ ಹಿಂದೆ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದೊಂದಿಗೆ ಒಪ್ಪಂದ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಕಳೆದ ಐದು ವರ್ಷಗಳಲ್ಲಿ ಉಕ್ರೇನ್ ಅಧ್ಯಕ್ಷರು ಮಾಡಿದ ಪ್ರಮುಖ ಬದಲಾವಣೆ ಇದಾಗಿದೆ.**



ಇದರ ಜೊತೆಗೆ ಒಲೆಕ್ಸಿ ಸೊಬೊಲೆವ್ ಮತ್ತು ತಾರಸ್ ಕಚ್ಕಾ ಅವರನ್ನು ನೂತನ ಉಪಮುಖ್ಯಮಂತ್ರಿಯನ್ನಾಗಿಯೂ ಅಧ್ಯಕ್ಷರು ಘೋಷಿಸಿದ್ದಾರೆ. ಇದರ ಜೊತೆಗೆ, ಈಗ ಸರ್ಕಾರದ ಕೃಷಿ ಸಚಿವರಾಗಿರುವ ಓಲ್ಗಾ ಸ್ಟೆಫಾನಿಶಿನಾ ಅವರನ್ನು ನೂತನ ಅಮೆರಿಕಾದ ರಾಯಭಾರಿಯಾಗಿ ನೇಮಿಸಿದ್ದಾರೆ. ಆಂಡ್ರಿ ಸಿಬಿಹಾ, ವಿದೇಶಾಂಗ ಸಚಿವರಾಗಿ ಮುಂದುವರಿಯಲಿದ್ದಾರೆ. ಆ ಮೂಲಕ, ತಮ್ಮ ನಿಷ್ಠಾವಂತರಿಗೆ ಝೆಲೆನ್ಸ್ಕಿ ಮಣೆಹಾಕಿದ್ದಾರೆ.


**ನಿಷ್ಠಾವಂತರಿಗೆ ಝೆಲೆನ್ಸ್ಕಿ ಮಣೆ**

ಡಿಸೆಂಬರ್ 25, 1985ರಂದು ಚೆರ್ನಿಹಿವ್ ನಲ್ಲಿ ಜನಿಸಿದ ಯೂಲಿಯಾ ಸ್ಟಿರಿಡೆಂಕೊ, 2008ರಲ್ಲಿ ಕೈವ್ ನ್ಯಾಷನಲ್ ಯೂನಿವರ್ಸಿಟಿ ಆಫ್ ಟ್ರೇಡ್ ಎಂಡ್ ಎಕಾನಮಿಕ್ಸ್ ನಿಂದ ಮ್ಯಾನೇಜ್ಮೆಂಟ್ ಪದವಿಯನ್ನು ಪಡೆದವರು. ವೃತ್ತಿ ಜೀವನದ ಆರಂಭದಲ್ಲಿ ಇವರು ಖಾಸಗಿ ಸಂಸ್ಥೆಯಲ್ಲಿ ಕೆಲಸವನ್ನು ನಿರ್ವಹಿಸಿದ್ದರು. ಚೀನಾದಲ್ಲಿ ಉಕ್ರೇನಿನ ಏಕೈಕ ಅಧಿಕೃತ ರಾಯಭಾರ ಕಚೇರಿಯಲ್ಲಿ ಕೆಲಸವನ್ನು ನಿರ್ವಹಿಸಿದ ಅನುಭವವೂ ಇವರಿಗಿದೆ. 2015ರಲ್ಲಿ ಯೂಲಿಯಾ, ಸಾರ್ವಜನಿಕ ಸೇವಾಡಳಿತದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಐದು ವರ್ಷಗಳ ಹಿಂದೆ ಯೂಲಿಯಾ ಅವರನ್ನು ಅಧ್ಯಕ್ಷ ಝೆಲೆನ್ಸ್ಕಿ, ಅಧ್ಯಕ್ಷೀಯ ಆಡಳಿತಕ್ಕೆ ನೇಮಿಸಿಕೊಂಡಿದ್ದರು. ನವೆಂಬರ್ 2021ರಲ್ಲಿ ಇವರನ್ನು ದೇಶದ ಮೊದಲ ಉಪ ಪ್ರಧಾನಿಯನ್ನಾಗಿ ಅಧ್ಯಕ್ಷರು ನೇಮಿಸಲಾಗಿತ್ತು.

ಆರ್ಥಿಕ ಅಭಿವೃದ್ದಿ ಸಚಿವರಾಗಿ ಕೆಲಸ ಮಾಡಿದ ಇವರು, ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದೊಂದಿಗೆ ಒಪ್ಪಂದ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಈ ಒಪ್ಪಂದದ ಪ್ರಕಾರ, ಅಮೆರಿಕಾಗೆ ಉಕ್ರೇನ್ ದೇಶದ ಖನಿಜ ಸಂಪತ್ತುಗಳನ್ನು ಬಳಸಿಕೊಳ್ಳಲು ಅವಕಾಶ ಸಿಗುತ್ತದೆ. ಈ ಡೀಲ್ ಕುದರಲು ಯೂಲಿಯಾ ಪಾತ್ರ ಬಹಳ ಮುಖ್ಯವಾಗಿತ್ತು. ರಷ್ಯಾ, ಉಕ್ರೇನ್ ಮೇಲೆ ತನ್ನ ದಾಳಿಯನ್ನು ತೀವ್ರಗೊಳಿಸಿರುವ ಸಂದರ್ಭದಲ್ಲಿ ಇವರ ಆಯ್ಕೆ ಕುತೂಹಲಕ್ಕೆ ಕಾರಣವಾಗಿದೆ.

ಕಳೆದ ಮೂರು ವರ್ಷಗಳಿಂದ ರಷ್ಯಾ ಮತ್ತು ಉಕ್ರೇನ್ ಮೇಲೆ ಯುದ್ದ ನಡೆಯುತ್ತಲೇ ಇದೆ. ಈ ನಡುವೆ, ರಾಜಧಾನಿ ಕೈವ್ ಮೇಲೆ ರಷ್ಯಾದ ದಾಳಿಯು ತೀವ್ರಗೊಳ್ಳುತ್ತಿದೆ.

# ವಿಷ್ಣುಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನಕ್ಕೆ ಮನವಿ



ದಿವಂಗತ ನಟ ಡಾ. ವಿಷ್ಣುವರ್ಧನ್ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡಬೇಕೆಂದು ಅವರ ಅಳಿಯ ಅನಿರುದ್ಧ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಅವರು ಮನವಿ ಪತ್ರ ನೀಡಿದ್ದಾರೆ.

'ನಾನು ಈ ಪತ್ರವನ್ನು ಸಾಹಸಸಿಂಹ ಎಂದು ಹೆಮ್ಮೆಯಿಂದ ಕರೆಯಲ್ಪಡುವ ಕನ್ನಡಿಗರ ಹೃದಯಸಿಂಹಾಸನದಲ್ಲಿ ಸದಾ ಸ್ಥಾನ ಪಡೆದ ದಿಗ್ಗಜ ನಟರಾದ ಡಾ. ವಿಷ್ಣುವರ್ಧನ್ ಅವರ ಕೋಟ್ಯಂತರ ಅಭಿಮಾನಿಗಳ ಪರವಾಗಿ, ಗೌರವದೊಂದಿಗೆ ಹಾಗೂ ಹೃದಯಪೂರ್ವಕ ಮನವಿಯೊಂದಿಗೆ ಬರೆಯುತ್ತಿದ್ದೇನೆ.

ಕನ್ನಡ ಚಲನಚಿತ್ರರಂಗಕ್ಕೂ ಮತ್ತು ನಮ್ಮ ರಾಜ್ಯದ ಸಾಂಸ್ಕೃತಿಕ ಪರಂಪರೆಗೆ ಅವರು ನೀಡಿರುವ ಕೊಡುಗೆ ಅಪರೂಪ ಹಾಗೂ ಅಪಾರ. ಅವರು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿಭಾಯಿಸಿದ ರೀತಿ ಕೂಡ ಅನೇಕರಿಗೆ ಪ್ರೇರಣೆ'.

ಅವರು ನಾಯಕನಟನಾಗಿ 225ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿ, ಹಲವಾರು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡರು. ಅವರು ನಮ್ಮನ್ನು ಭೌತಿಕವಾಗಿ ಆಗಲಿ 15 ವರ್ಷಗಳು ದಾಟಿದರೂ, ಜನರ ಹೃದಯದಲ್ಲಿ ಅವರು ಹೊಂದಿರುವ ಸ್ಥಾನ ಮಾತ್ರ ಅಚಲವಾಗಿದೆ. ಆದರೆ, ಇದುವರೆಗೆ ಅವರಿಗೆ ಭಾರತ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ ಕೂಡ ದೊರಕಿಲ್ಲ. ನಮ್ಮ ರಾಜ್ಯದ ಅತ್ಯುನ್ನತ ಗೌರವವಾದ ಕರ್ನಾಟಕ ರತ್ನ ಪ್ರಶಸ್ತಿಯೂ ಇವರಿಗೆ ಕನಿಷ್ಟಪಕ್ಷ ಮರಣೋತ್ತರವಾಗಿಯಾದರೂ ಇನ್ನೂ ಲಭಿಸಿಲ್ಲ ಎಂಬುದು ವಿಷಾದನೀಯ. ಈ ವರ್ಷದ ಸೆಪ್ಟೆಂಬರ್ 18 ರಂದು ಅವರ 75ನೇ ಜನ್ಮವಾರ್ಷಿಕೋತ್ಸವವಿದೆ. ಈ ವಿಶೇಷ ಸಂದರ್ಭದಲ್ಲಿ, ಅವರ ಅಪಾರ ಸಾಧನೆಗಳನ್ನು ಗೌರವಿಸಿ, ಅಭಿಮಾನಿಗಳ ಹಿತೈಷಿಗಳ ಇಚ್ಛೆ ಈಡೇರಿಸುವಂತೆ, ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ನೀಡಬೇಕೆಂಬ ಮನವಿ ಇದಾಗಿದೆ. ನಮ್ಮವರನ್ನು ಗೌರವಿಸುವುದು ಅಂದರೆ-ನಮ್ಮ ಗುರುತನ್ನು, ಬೇರುಗಳನ್ನು ಮತ್ತು ಬುನಾದಿಯನ್ನು ಗೌರವಿಸುವುದು. ಅವರ ಸಾಧನೆಗಳನ್ನು ನಾವು ಸ್ಮರಿಸಿದರೆ. ಅದು ನಾವು ನಮನ್ನೇ ಗೌರವಿಸುವಂತಾಗುತ್ತದೆ.


# ದಿಢೀರ್ ಆಸ್ಪತ್ರೆಗೆ ವಿಜಯ್ ದಾಖಲು

ತೆಲುಗು ನಟ ವಿಜಯ್ ದೇವರಕೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವರದಿಯಾಗಿದೆ.

ಡೆಂಗ್ಯೂ ಜ್ವರದಿಂದ ನಟ ಆಸ್ಪತ್ರೆಗೆ ದಾಖಲಾಗಿದ್ದು, ಜುಲೈ 20ರ ಒಳಗೆ ಅವರನ್ನ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡುವ ಸಾಧ್ಯತೆಯಿದೆ ವರದಿಗಳು ತಿಳಿಸಿವೆ. ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗುತ್ತಿದೆಯಾದರೂ, ವಿಜಯ್ ದೇವರಕೊಂಡ ಅಥವಾ ಅವರ ತಂಡವು ಆಸ್ಪತ್ರೆ ದಾಖಲಾಗಿರುವ ಬಗ್ಗೆ ಯಾವುದೇ ಅಧಿಕೃತ (ಮಾಹಿತಿ ಹಂಚಿಕೊಂಡಿಲ್ಲ. ಗೌತಮ್ ತಿನ್ನನುರಿ ನಿರ್ದೇಶನದ ನಟ ವಿಜಯ್ ದೇವರಕೊಂಡ ನಟನೆಯ 'ಕಿಂಗ್‌ಡಮ್ ಚಿತ್ರ ಇದೇ ಜುಲೈ 31ರಂದು ಬಿಡುಗಡೆಯಾಗಲಿದೆ. 100 ಕೋಟಿ ಬಜೆಟ್‌ನಲ್ಲಿ ನಿರ್ಮಿಸಲಾದ ಈ ಸ್ಪೈ ಆಕ್ಷನ್ ಥ್ರಿಲ್ಲರ್ ಚಿತ್ರ ಭಾರೀ ನಿರೀಕ್ಷೆ ಮೂಡಿಸಿದೆ. ಆದ್ರೆ ಚಿತ್ರ ರಿಲೀಸ್‌ಗೂ ಮೊದಲೇ ನಟ ಈಗ ಆಸ್ಪತ್ರೆಗೆ ದಾಖಲಾಗಿದ್ದಾರೆ.



# ಬಲರಾಮನ ದಿನಗಳು ಶೂಟಿಂಗ್ ಮುಗಿಸಿದ ವಿನೋದ್



ವಿನೋದ್ ಪ್ರಭಾಕರ್ ಅವರ ಅಭಿನಯದ "ಮಾದೇವ" ಚಿತ್ರ ಭರ್ಜರಿ ಯಶಸ್ಸು ಕಂಡಿದೆ. ಆ ಚಿತ್ರದ ನಂತರ ವಿನೋದ್ ಪ್ರಭಾಕರ್ ಅವರು ನಾಯಕರಾಗಿ ನಟಿಸುತ್ತಿರುವ ಬಲರಾಮನ ದಿನಗಳು ಚಿತ್ರ ಸಹ ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಪ್ರಸ್ತುತ ಬಹು ನಿರೀಕ್ಷಿತ ಈ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ಬೆಂಗಳೂರು, ಮೈಸೂರು, ಶಿವಮೊಗ್ಗ, ಸಕಲೇಶಪುರ ಮುಂತಾದ ಕಡೆ 80 ದಿನಗಳ ಚಿತ್ರೀಕರಣ ನಡೆದಿದೆ. ಸದ್ಯದಲ್ಲೇ ಪೋಸ್ಟ್ ಪ್ರೊಡಕ್ಷನ್ ವರ್ಕ್ ಆರಂಭವಾಗಲಿದೆ.

ಪದ್ಮಾವತಿ ಫಿಲಂಸ್ ಲಾಂಛನದಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಅವರ ಚೊಚ್ಚಲ ನಿರ್ಮಾಣದಲ್ಲಿ ಅದ್ದೂರಿಯಾಗಿ ಮೂಡಿಬರುತ್ತಿರುವ ಈ ಚಿತ್ರವನ್ನು ಆ ದಿನಗಳು ಖ್ಯಾತಿಯ ಕೆ.ಎಂ.ಚೈತನ್ಯ ನಿರ್ದೇಶಿಸುತ್ತಿದ್ದಾರೆ. ಟೈಗರ್ ವಿನೋದ್ ಪ್ರಭಾಕರ್ ಅವರಿಗೆ ನಾಯಕಿಯಾಗಿ ಪ್ರಿಯಾ ಆನಂದ್ ಅಭಿನಯಿಸುತ್ತಿದ್ದಾರೆ. ಹೆಸರಾಂತ ಕಲಾವಿದರಾದ ಅತುಲ್ ಕುಲಕರ್ಣಿ, ಆಶಿಶ್ ವಿದ್ಯಾರ್ಥಿ ಅವರಂತಹ ಅನುಭವಿ ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಬಿಗ್ ಬಾಸ್ ಖ್ಯಾತಿಯ ವಿನಯ್ ಗೌಡ ಸಹ ಈ ಚಿತ್ರದಲ್ಲ ನಟಿಸಿದ್ದಾರೆ. ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿ ಅಭಿನಯಿಸಿರುವ ಖ್ಯಾತ ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದು, ಮುಂದಿನ ದಿನಗಳಲ್ಲಿ ಚಿತ್ರತಂಡ ಈ ಕುರಿತು ವಿವರ ನೀಡಲಿದೆ. 1980ರ ಕಾಲಘಟ್ಟದಲ್ಲಿ ನಡೆಯುವ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಭಾರತದ ಹೆಸರಾಂತ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣನ್ ಸಂಗೀತ ನೀಡುತ್ತಿದ್ದಾರೆ. ಇದು ಸಂತೋಷ್ ನಾರಾಯಣನ್ ಸಂಗೀತ ನೀಡುತ್ತಿರುವ ಮೊದಲ ಕನ್ನಡ ಚಿತ್ರವಾಗಿದೆ. ವೇಣು "ಬಲರಾಮನ ದಿನಗಳು" ಚಿತ್ರಕ್ಕೆ ಛಾಯಾಗ್ರಹಣ ಮಾಡಿದ್ದಾರೆ.

**1980ರ ಕಾಲಘಟ್ಟದಲ್ಲಿ ನಡೆಯುವ ಕಥಾಹಂದರ**



# ವಿಜಯ್ ಸೇತುಪತಿ-ನಿತ್ಯಾ ಮಸ್ತ್ ಮಸ್ತ್!

**ತಲೈವಾನ್-ತಲೈವಿ ಟ್ರೈಲರ್ ರಿಲೀಸ್**

ವಿಜಯ್ ಸೇತುಪತಿ ಹಾಗೂ ನಿತ್ಯಾ ಮೆನನ್ ಅಭಿನಯದ ತಲೈವಾನ್ ತಲೈವಿ ಚಿತ್ರದ ಟ್ರೈಲರ್ ರಿಲೀಸ್ ಆಗಿದೆ. ಟ್ರೈಲರ್ ಪ್ರತಿಯೊಬ್ಬರಿಗೂ ಅತೀಬೇಗ ಕನೆಕ್ಟ್ ಆಗುವ ರೀತಿಯಲ್ಲಿ ಮೂಡಿಬಂದಿದೆ. ಒಬ್ಬ ಮಿಡಲ್‌ಕ್ಲಾಸ್ ಹುಡುಗ ಪುಟ್ಟ ವ್ಯಾಪಾರದಿಂದ ಸಂಸಾರ ಸಾಗಿಸುವ ಹಾದಿಯಲ್ಲಿ ಯಾವೆಲ್ಲ ಸಮಸ್ಯೆಗಳನ್ನ ಎದುರಿಸಬೇಕಾಗುತ್ತೆ. ಆ ಸಮಸ್ಯೆಗಳ ಸರಮಾಲೆಯನ್ನ ಎದುರಿಸಲಾಗದೇ ಮನೆಯನ್ನೂ ತೊರೆಯುವಂತ ಸಂದರ್ಭಗಳು ಕೂಡಾ ಎದುರಾಗುವ ಹಾಗೆ ಕಾಣುತ್ತೆ. ಒಂದು ಕಡೆ ಸಮಸ್ಯೆಗಳಿದ್ದರೂ ಟ್ರೈಲರ್ ಮಾತ್ರ ನೋಡುಗರ ಮನ ಮುಟ್ಟುತ್ತಿದೆ. ಸಿನಿಮಾದಿಂದ ಸಿನಿಮಾಗೆ ಭಿನ್ನ ವಿಭಿನ್ನ ಪಾತ್ರಗಳನ್ನ ಮಾಡುವ ವಿಜಯ್ ಸೇತುಪತಿ ಇಲ್ಲಿ ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇನ್ನು ವಿಜಯ್ ಸೇತುಪತಿಗೆ ನಾಯಕಿಯಾಗಿ ನಿತ್ಯಾ ಮೆನನ್ ಕಾಣಿಸಿಕೊಂಡಿದ್ದಾರೆ. ಈ ಪಾತ್ರಕ್ಕೆ ನಿತ್ಯಾ ಮೆನನ್ ಬಿಟ್ರೆ ಬೇರೆ ಯಾರೂ ಸೂಟ್ ಆಗ್ತಿರಲಿಲ್ಲವೇನು ಎನ್ನುವ ಹಾಗೆ ಅಭಿನಯಿಸಿದ್ದಾರೆ. ಈ ಸಿನಿಮಾದ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ ಪಂಡಿರಾಜು. ಅಂದಹಾಗೆ ಸಿನಿಮಾಗೆ ಸತ್ಯಜ್ಯೋತಿ ಫಿಲಂಸ್ ಹಾಗೂ ತ್ಯಾಗರಾಜನ್ ಪ್ರೆಸೆಂಟ್ಸ್ ಬ್ಯಾನರ್ ಬಂಡವಾಳ ಹೂಡಿ ನಿರ್ಮಾಣ ಮಾಡಿದೆ. ಟ್ರೈಲರ್‌ಗೆ ಎಲ್ಲಾ ಕಡೆಯಿಂದ ಮೆಚ್ಚುಗೆ ವ್ಯಕ್ತವಾಗ್ತಿದೆ.

# ಪುಷ್ಪಾ ಡೈರೆಕ್ಟರ್ ಜೊತೆ ರಾಮ್ ಸಿನಿಮಾ!



**ಚರಣ್ ಅಡ್ಡಾದಿಂದ ಗುಡ್ ನ್ಯೂಸ್**

ಗ್ಲೋಬಲ್‌ಸ್ಟಾರ್ ರಾಮ್‌ಚರಣ್ ಸದ್ಯ ಪೆದ್ದಿ ಸಿನಿಮಾದಲ್ಲಿ ಬ್ಯುಸಿಯಾಗಿದ್ದಾರೆ. ಗೇಮ್ ಚೇಂಜರ್ ಸಿನಿಮಾ ಬಳಿಕ ರಾಮ್‌ಚರಣ್ ತೊಡಗಿಕೊಂಡಿರುವ ಸಿನಿಮಾ. ಸಣ್ಣ ಗ್ಲಿಂಪ್ಸ್‌ನಿಂದಲೇ ಸಖತ್ ಅಟ್ರ್ಯಾಕ್ಟ್ ಮಾಡಿರುವ ಪೆದ್ದಿ ಕಲ್ಟ್ ಆಂಡ್ ಕ್ಲಾಸಿಕ್ ಎಲಿಮೆಂಟ್ಸ್ ರಿವೀಲ್ ಆಗಿದೆ. ಪೆದ್ದಿ ಸ್ಯಾಂಪಲ್ಸ್‌ಗೆ ರಾಮ್ ಚರಣ್ ಫ್ಯಾನ್ಸ್ ಫಿದಾ ಆಗಿದ್ದಾರೆ.

ಬುಚ್ಚಿಬಾಬು ಸನಾ ನಿರ್ದೇಶನ ಮಾಡ್ತಿರುವ ಈ ಸಿನಿಮಾದ ಶೂಟಿಂಗ್ ಭರ್ಜರಿಯಾಗಿ ನಡೆಯುತ್ತಿದೆ. ಈ ಸಿನಿಮಾದಲ್ಲಿ ನಟ ಶಿವರಾಜ್‌ಕುಮಾರ್ ಕೂಡಾ ಮುಖ್ಯ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ಶಿವರಾಜ್‌ಕುಮಾರ್ ಅವರ ಹುಟ್ಟುಹಬ್ಬಕ್ಕೆ ಚಿತ್ರತಂಡ ಜಬರ್‌ದಸ್ತ್ ಪೋಸ್ಟರ್ ರಿಲೀಸ್ ಮಾಡಿತ್ತು. ರಾಮ್‌ಚರಣ್ ಅಡ್ಡಾದಿಂದ ಗುಡ್ ನ್ಯೂಸ್‌ವೊಂದು ಬಂದಿದೆ. ರಾಮ್‌ಚರಣ್ ಪೆದ್ದಿ ಸಿನಿಮಾವನ್ನ ನವೆಂಬರ್ ಮುಗಿಯುವ ಹೊತ್ತಿಗೆ ಕಂಪ್ಲೀಟ್ ಮಾಡಲು ಯೋಜನೆ ಹಾಕಿಕೊಂಡಿದ್ದಾರೆ.

# ಟೀಂ ಇಂಡಿಯಾ ಪರ ಮೂವರು ವಿಕೆಟ್ ಕೀಪರ್ಸ್ ಕಣಕ್ಕೆ

ಭಾರತ ಮತ್ತು ಇಂಗ್ಲೆಂಡ್ ನಡುವಿನ ನಾಲ್ಕನೇ ಟೆಸ್ಟ್ ಪಂದ್ಯಕ್ಕೆ ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್ ಕ್ರಿಕೆಟ್ ಮೈದಾನ ಆತಿಥ್ಯವಹಿಸಲಿದೆ. ಐದು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಹಿಂದುಳಿದಿರುವ ಭಾರತ ತಂಡವು ಈ ಮೈದಾನದಲ್ಲಿ ಗೆಲುವು ಸಾಧಿಸುವ ಮೂಲಕ ಸಮಬಲ ಸಾಧಿಸುವ ಇರಾದೆಯಲ್ಲಿದೆ. ಈ ಮೈದಾನದಲ್ಲಿ ಇದುವರೆಗೆ ಒಂದೇ ಒಂದು ಟೆಸ್ಟ್ ಪಂದ್ಯವನ್ನು ಗೆದ್ದಿರದ ಟೀಂ ಇಂಡಿಯಾ ಇತಿಹಾಸ ಸೃಷ್ಟಿಸಬೇಕೆಂದರೆ ಬಲಿಷ್ಠ ಪಡೆಯನ್ನೇ ಕಟ್ಟಿಕೊಂಡು ಕಣಕ್ಕಿಳಿಯಬೇಕಿದೆ. ಆದರೆ ಮೂರನೇ ಟೆಸ್ಟ್ ಪಂದ್ಯದ ವೇಳೆ ಗಾಯಕ್ಕೆ ತುತ್ತಾಗಿದ್ದ ಸ್ಟಾರ್ ವಿಕೆಟ್ ಕೀಪರ್ ರಿಷಭ್ ಪಂತ್ ಫಿಟ್ನೇಸ್ ಬಗ್ಗೆಯೂ ಆತಂಕ ಮನೆ ಮಾಡಿದೆ. ಒಂದು ವೇಳೆ ಟೆಸ್ಟ್ ಆರಂಭಕ್ಕೂ ಮುನ್ನ ಪಂತ್ ಚೇತರಿಸಿಕೊಳ್ಳದಿದ್ದರೆ, ಟೀಂ ಇಂಡಿಯಾ ಪರ ಮೂವರು 3 ವಿಕೆಟ್ ಕೀಪರ್‌ಗಳು ಕಣಕ್ಕಿಳಿಯುವ ಸಾಧ್ಯತೆಗಳಿವೆ. ಲಾರ್ಡ್ಸ್‌ನಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯದ ಮೊದಲ ದಿನದಂದು ವಿಕೆಟ್ ಕೀಪಿಂಗ್ ಮಾಡುವಾಗ ರಿಷಭ್ ಪಂತ್ ಗಾಯಗೊಂಡರು. ಅವರ ಎಡಗೈ ಬೆರಳಿಗೆ ಗಾಯವಾಗಿದ್ದು, ಇದರಿಂದಾಗಿ ಅವರು ಇಡೀ ಪಂದ್ಯದಲ್ಲಿ ಮತ್ತೆ ವಿಕೆಟ್ ಕೀಪಿಂಗ್ ಮಾಡಲು ಸಾಧ್ಯವಾಗಲಿಲ್ಲ.

ಆದಾಗ್ಯೂ, ಎರಡೂ ಇನ್ನಿಂಗ್ಸ್‌ಗಳಲ್ಲಿ ಬ್ಯಾಟಿಂಗ್ ಮಾಡಿದ ಪಂತ್ ಮೊದಲ ಇನ್ನಿಂಗ್ಸ್‌ನಲ್ಲಿ ಅರ್ಧಶತಕ ಬಾರಿಸಿದರೆ ಎರಡನೇ ಇನ್ನಿಂಗ್ಸ್‌ನಲ್ಲಿ ಬಹುಬೇಗನೇ ಔಟಾದರು. ಆದರೆ ಈ ಇನ್ನಿಂಗ್ಸ್‌ನಲ್ಲಿ ಬ್ಯಾಟಿಂಗ್ ಮಾಡುವಾಗ ಅವರಿಗೆ ಬೆರಳಿನ ನೋವು ಮತ್ತಷ್ಟು ಹೆಚ್ಚಾಗಿ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು.

**ಪಂತ್ ಫಿಟ್ನೆಸ್ ಬಗ್ಗೆ ಕೋಚ್ ಹೇಳಿದ್ದೇನು**

ಆದಾಗ್ಯೂ ಟೆಸ್ಟ್ ಪಂದ್ಯ ಮುಗಿದ ಬಳಿಕ ಮಾತನಾಡಿದ್ದ ನಾಯಕ ಶುಭ್‌ಮನ್ ಗಿಲ್ ಮ್ಯಾಂಚೆಸ್ಟರ್ ಟೆಸ್ಟ್ ವೇಳೆಗೆ ಪಂತ್ ಸಂಪೂರ್ಣವಾಗಿ ಚೇತರಿಸಿಕೊಳ್ಳುವ ವಿಶ್ವಾಸವಿದೆ ಎಂದು ಹೇಳಿದ್ದರು. ಆದರೀಗ ಸಹಾಯಕ ಕೋಚ್ ರಯಾನ್ ಟೆನ್ ಡೋಸ್ಚೇಟ್ ಅವರ ಹೇಳಿಕೆ ಅಭಿಮಾನಿಗಳ ಹೃದಯ ಬಡಿತವನ್ನು ಹೆಚ್ಚಿಸಿದೆ. ನಾಲ್ಕನೇ ಟೆಸ್ಟ್ ಪಂದ್ಯಕ್ಕೂ ಮುನ್ನ ಟೀಂ ಇಂಡಿಯಾ ಬೆಕೆನ್ ಹ್ಯಾಮ್‌ನಲ್ಲಿ ಅಭ್ಯಾಸ ನಡೆಸುತ್ತಿದೆ. ಈ ವೇಳೆ ಮಾತನಾಡಿದ ಕೋಚ್, 'ನಾಲ್ಕನೇ ಟೆಸ್ಟ್ ಆರಂಭಕ್ಕೂ ಮುನ್ನ ಪಂತ್ ಮ್ಯಾಂಚೆಸ್ಟರ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ಮಾಡಲಿದ್ದಾರೆ. ಯಾವುದೇ ಸಂದರ್ಭದಲ್ಲೂ ಪಂತ್ ಅವರನ್ನು ಟೆಸ್ಟ್ ಪಂದ್ಯದಿಂದ ಹೊರಗಿಡಲು ನಾವು ಬಯಸುವುದಿಲ್ಲ. ಹಾಗೆಯೇ ಪಂತ್ ವಿಕೆಟ್ ಕೀಪಿಂಗ್ ಮಾಡಲು ಸಾಧ್ಯವಾಗುತ್ತದೆಯೇ ಎಂದು ನಾವು ಖಚಿತಪಡಿಸಿಕೊಳ್ಳಬೇಕು.



ಏಕೆಂದರೆ ಪಂದ್ಯದ ಮಧ್ಯದಲ್ಲಿ ನಾವು ಮತ್ತೆ ಕೀಪರ್ ಅನ್ನು ಬದಲಾಯಿಸಲು ಬಯಸುವುದಿಲ್ಲ' ಎಂದಿದ್ದಾರೆ.

**3 ವಿಕೆಟ್ ಕೀಪರ್‌ಗಳು ಆಡುತ್ತಾರಾ**

ಮ್ಯಾಂಚೆಸ್ಟರ್ ಟೆಸ್ಟ್ ವೇಳೆಗೆ ರಿಷಭ್ ಪಂತ್ ಸಂಪೂರ್ಣವಾಗಿ ಫಿಟ್ ಆಗಲಿದ್ದು, ಬ್ಯಾಟಿಂಗ್ ಜೊತೆಗೆ ವಿಕೆಟ್ ಕೀಪಿಂಗ್ ಕೂಡ ಮಾಡಲಿದ್ದಾರೆ ಎಂಬ ಭರವಸೆ ಇದೆ ಎಂದು ಕೋಚ್ ಹೇಳಿದ್ದಾರೆ.

ಆದರೆ ಆ ಹೊತ್ತಿಗೆ ಪಂತ್ ಫಿಟ್ ಆಗುತ್ತಾರೋ ಇಲ್ಲವೋ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಪಂತ್ ವಿಕೆಟ್ ಕೀಪಿಂಗ್ ಮಾಡಲು ಫಿಟ್ ಇಲ್ಲದಿದ್ದರೂ ಅವರನ್ನು ಬ್ಯಾಟ್ಸ್‌ಮನ್ ಆಗಿ ಆಡಿಸುವ ಸಾಧ್ಯತೆಗಳಿವೆ. ಏಕೆಂದರೆ ಬ್ಯಾಟ್ಸ್‌ಮನ್ ಆಗಿ ಮಧ್ಯಮ ಕ್ರಮಾಂಕದಲ್ಲಿ ಪಂತ್ ಅವರ ಉಪಸ್ಥಿತಿ ಬಹಳ ಮುಖ್ಯ. ಅಂತಹ ಪರಿಸ್ಥಿತಿಯಲ್ಲಿ, ಅವರು ಬ್ಯಾಟ್ಸ್‌ಮನ್ ಆಗಿ ಮಾತ್ರ ಆಡಿದರೆ, ಟೀಂ ಇಂಡಿಯಾ ವಿಕೆಟ್ ಕೀಪರ್ ಆಗಿ ಬೇರೆ ಯಾರನ್ನಾದರೂ ಆಯ್ಕೆ ಮಾಡಬೇಕಾಗುತ್ತದೆ.

ಭಾರತ ತಂಡಕ್ಕೆ ಕೆಎಲ್ ರಾಹುಲ್ ಮತ್ತು ಧ್ರುವ್ ಜುರೆಲ್ ರೂಪದಲ್ಲಿ ಕೂಡ 2 ಆಯ್ಕೆಗಳಿವೆ. ರಾಹುಲ್ ಈ ಹಿಂದೆ ವಿಕೆಟ್ ಕೀಪಿಂಗ್ ಮಾಡಿದ್ದಾರೆ.

ಆದರೆ ಆರಂಭಿಕ ಆಟಗಾರನಾಗಿ ಅವರ ಅದ್ಭುತ ಪ್ರದರ್ಶನವನ್ನು ಪರಿಗಣಿಸಿ, ಅವರಿಗೆ ವಿಕೆಟ್ ಕೀಪಿಂಗ್ ಜವಾಬ್ದಾರಿಯನ್ನು ನೀಡುವ ನಿರೀಕ್ಷೆಯಿಲ್ಲ. ಅಂತಹ ಪರಿಸ್ಥಿತಿಯಲ್ಲಿ, ಧ್ರುವ್ ಜುರೆಲ್ ಅವರನ್ನು ವಿಕೆಟ್ ಕೀಪರ್ ಆಗಿ ಕಣಕ್ಕಿಳಿಸಬೇಕಾಗುತ್ತದೆ. ಇದರರ್ಥ ಟೀಂ ಇಂಡಿಯಾ ಮ್ಯಾಂಚೆಸ್ಟರ್ ಟೆಸ್ಟ್‌ನಲ್ಲಿ, ತಮ್ಮ ಆಡುವ ಹನ್ನೊಂದರ ಬಳಗದಲ್ಲಿ ಮೂವರು ವಿಕೆಟ್ ಕೀಪರ್-ಬ್ಯಾಟ್ಸ್‌ಮನ್‌ಗಳನ್ನು ಕಣಕ್ಕಿಳಿಸಿದರೂ ಅಚ್ಚರಿ ಪಡಬೇಕಿಲ್ಲ.

# ಟೀಂ ಇಂಡಿಯಾ ಸ್ಟಾರ್ ವೇಗಿಗೆ ಇಂಜುರಿ

**ಕೈಯಿಂದ ರಕ್ತ ಕೂಡ ಚಿಮ್ಮಿದೆ**




ಗೆಲುವಿನ ಸಮೀಪ ಬಂದು ಲಾರ್ಡ್ಸ್ ಟೆಸ್ಟ್‌ನಲ್ಲಿ ಸೋತಿದ್ದ ಟೀಂ ಇಂಡಿಯಾ, ಈಗ ಮುಂದಿನ ಟೆಸ್ಟ್ ಪಂದ್ಯದ ಮೇಲೆ ಕಣ್ಣಿಟ್ಟಿದೆ. ಭಾರತ ಮತ್ತು ಇಂಗ್ಲೆಂಡ್ ನಡುವಿನ ನಾಲ್ಕನೇ ಟೆಸ್ಟ್ ಪಂದ್ಯ ಜುಲೈ 23 ರಿಂದ ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್‌ನಲ್ಲಿ ಪ್ರಾರಂಭವಾಗಲಿದೆ. ಈ ಪಂದ್ಯವನ್ನು ಗೆಲ್ಲುವ ಮೂಲಕ ಗಿಲ್ ಪಡೆ ಸರಣಿಯನ್ನು ಜೀವಂತವಾಗಿರಿಸಲು ಪ್ರಯತ್ನಿಸಲಿದೆ. ಆದರೆ ಈ ಪಂದ್ಯಕ್ಕೆ ಆಡುವ ಹನ್ನೊಂದರ ಬಳಗವನ್ನು ಆಯ್ಕೆ ಮಾಡುವ ಸವಾಲನ್ನು ಎದುರಿಸುತ್ತಿರುವ ಟೀಂ ಇಂಡಿಯಾಕ್ಕೆ ಇದೀಗ ಸ್ಟಾರ್ ಆಟಗಾರನ ಗಾಯ ದೊಡ್ಡ ತಲೆನೋವು ತಂದೊಡ್ಡಿದೆ.ಎಡಗೈ ವೇಗದ ಬೌಲರ್ ಅರ್ಶ್‌ದೀಪ್ ಸಿಂಗ್ ತಮ್ಮ ಎಡಗೈ ಬೆರಳಿಗೆ ಗಾಯ ಮಾಡಿಕೊಂಡಿದ್ದಾರೆ ಎಂದು ವರದಿಯಾಗಿದೆ.

ಮ್ಯಾಂಚೆಸ್ಟರ್ ಟೆಸ್ಟ್ ಗೆಲ್ಲುವ ಸಲುವಾಗಿ ಟೀಂ ಇಂಡಿಯಾ ಈಗಾಗಲೇ ಅಭ್ಯಾಸದಲ್ಲಿ ನಿರತವಾಗಿದೆ. ಕೋಚ್ ಗೌತಮ್ ಗಂಭೀರ್ ಅವರ ಮೇಲ್ವಿಚಾರಣೆಯಲ್ಲಿ ತಂಡವು ನೆಟ್ಸ್‌ನಲ್ಲಿ ಬೆವರು ಹರಿಸುತ್ತಿದೆ. ಲಂಡನ್ ಬಳಿಯ ಬೆಕೆನ್‌ಹ್ಯಾಮ್‌ನಲ್ಲಿ ಟೀಮ್ ಇಂಡಿಯಾ ಅಭ್ಯಾಸ ಮಾಡುತ್ತಿದ್ದು, ಈ ವೇಳೆ ತಂಡದ ವೇಗಿ ಅರ್ಶ್‌ದೀಪ್ ಗಾಯ ಮಾಡಿಕೊಂಡಿದ್ದಾರೆ ಎಂದು ವರದಿಯಾಗಿದೆ,.

**ಅರ್ಶ್‌ದೀಪ್ ಕೈಗೆ ಗಾಯ:** ವರದಿಯ ಪ್ರಕಾರ, ಟೀಂ ಇಂಡಿಯಾ ಅಭ್ಯಾಸದ ಸಮಯದಲ್ಲಿ ಅರ್ಶ್‌ದೀಪ್ ಸಿಂಗ್ ಅವರ ಎಡಗೈಗೆ ಗಾಯವಾಗಿದೆ. ಅರ್ಷ್‌ದೀಪ್ ಸಿಂಗ್ ನೆಟ್ಸ್‌ನಲ್ಲಿ ಸಾಯಿ ಸುದರ್ಶನ್ ಅವರಿಗೆ ಬೌಲಿಂಗ್ ಮಾಡುತ್ತಿದ್ದಾಗ, ಸುದರ್ಶನ್ ಬಾರಿಸಿದ ಚೆಂಡನ್ನು ತಡೆಯಲು ಪ್ರಯತ್ನಿಸುವಾಗ ಅರ್ಶ್‌ದೀಪ್ ಅವರ ಎಡಗೈಗೆ ಗಾಯವಾಗಿದೆ.

# ವಂಶಿ ಆದಾಯದಲ್ಲಿ 40 ಪಟ್ಟು ಹೆಚ್ಚಳ

ಭಾರತ ಅಂಡರ್ 19 ತಂಡದೊಂದಿಗೆ ಇಂಗ್ಲೆಂಡ್ ಪ್ರವಾಸದಲ್ಲಿರುವ 14 ವರ್ಷದ ವೈಭವ್ ಸೂರ್ಯವಂಶಿ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕವೇ ಇಂಗ್ಲೆಂಡ್‌ನಲ್ಲಿ ಸಂಚಲನ ಸೃಷ್ಟಿಸಿದ್ದಾರೆ. ಐಪಿಎಲ್ 2025 ರಲ್ಲಿ ಅದ್ಭುತ ಪ್ರದರ್ಶನ ನೀಡುವ ಮೂಲಕ ಸುದ್ದಿಯಾಗಿದ್ದ




ವೈಭವ್ ಸೂರ್ಯವಂಶಿ ಮೈದಾನದಲ್ಲಿ ಅದ್ಭುತಗಳನ್ನು ಮಾಡುತ್ತಿರುವುದು ಮಾತ್ರವಲ್ಲದೆ, ತಮ್ಮ ಪ್ರತಿಭೆಯ ಮೂಲಕ ಮೈದಾನದ ಹೊರಗೆಯೂ ಸುದ್ದಿಯಾಗುತ್ತಿದ್ದಾರೆ. ಐಪಿಎಲ್‌ಗೂ ಮುನ್ನ ನಡೆದಿದ್ದ ಮೆಗಾ ಹರಾಜಿನಲ್ಲಿ 1 ಕೋಟಿಗೂ ಅಧಿಕ ಮೊತ್ತಕ್ಕೆ ಹರಾಜಾಗಿ ದಾಖಲೆ ಬರೆದಿದ್ದ ವೈಭವ್ ಮೇಲೆ ಇದೀಗ ಹಣದ ಮಳೆಯಾಗುತ್ತಿದೆ. ಆ ಪ್ರಕಾರ ಕಳೆದ ಒಂದು ವರ್ಷದಲ್ಲಿ ವೈಭವ್ ಅವರ ಆದಾಯದಲ್ಲಿ 40 ಪಟ್ಟು ಹೆಚ್ಚಳವಾಗಿದೆ ಎಂದು ವರದಿಯಾಗಿದೆ. ವೈಭವ್ ಸೂರ್ಯವಂಶಿ ಅವರ ನಿವ್ವಳ ಮೌಲ್ಯ 2024 ರಲ್ಲಿ 5 ಲಕ್ಷ ರೂ.ಗಳಾಗಿದ್ದು, ಇದು 2025 ರ ಐಪಿಎಲ್ ನಂತರ ಸುಮಾರು 2 ಕೋಟಿ ರೂ.ಗಳಿಗೆ ತಲುಪಿದೆ. ಇದರರ್ಥ ವೈಭವ್ ಸೂರ್ಯವಂಶಿ ಅವರ ಆದಾಯ ಒಂದು ವರ್ಷದಲ್ಲಿ 40 ಪಟ್ಟು ಹೆಚ್ಚಾಗಿದೆ. ವೈಭವ್ ಪಂದ್ಯ ಶುಲ್ಕ ಮತ್ತು ಜಾಹೀರಾತುಗಳಿಂದಲೂ ಹಣ ಸಂಪಾದಿಸುತ್ತಿದ್ದಾರೆ. ಅವರ ಪ್ರಮುಖ ಆದಾಯದ ಮೂಲಗಳು ಐಪಿಎಲ್, ದೇಶೀಯ ಪಂದ್ಯ ಶುಲ್ಕ ಮತ್ತು ಜಾಹೀರಾತುಗಳಾಗಿದೆ.

# ನಿತೀಶ್ ಕುಮಾರ್ ರೆಡ್ಡಿಗೆ ಒಲಿದ ನಾಯಕತ್ವ

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ನಿರೀಕ್ಷಿತ ಪ್ರದರ್ಶನ ನೀಡದ ನಿತೀಶ್ ರೆಡ್ಡಿ ಅವರಿಗೆ ಆಂಧ್ರ ಪ್ರೀಮಿಯರ್ ಲೀಗ್‌ನಲ್ಲಿ ಭೀಮಾವರಂ ಬುಲ್ಸ್ ತಂಡದ ನಾಯಕತ್ವ ದೊರೆತಿದೆ. ಐಪಿಎಲ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಪರ ಆಡುವ ನಿತೀಶ್ ರೆಡ್ಡಿ 6 ಕೋಟಿ ರೂ. ವೇತನ ಪಡೆಯುತ್ತಿದ್ದಾರೆ. ಏಳು ತಂಡಗಳ ನಡುವೆ ನಡೆಯುವ ಈ ಲೀಗ್ ರೌಂಡ್ ರಾಬಿನ್ ಸ್ವರೂಪದಲ್ಲಿ ನಡೆಯಲಿದ್ದು ಒಟ್ಟು 19 ಪಂದ್ಯಗಳು ನಡೆಯಲಿವೆ.

ಟೀಂ ಇಂಡಿಯಾದ ಆಲ್‌ರೌಂಡರ್ ನಿತೀಶ್ ರೆಡ್ಡಿ ಪ್ರಸ್ತುತ ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿ ಆಡುತ್ತಿದ್ದಾರೆ. ಆದರೆ ಸಿಕ್ಕ ಅವಕಾಶದಲ್ಲಿ ನಿತೀಶ್‌ಗೆ ಮಿಂಚಲು ಸಾಧ್ಯವಾಗಿಲ್ಲ. ಬೌಲಿಂಗ್‌ನಲ್ಲಿ ಒಂದೆರಡು ವಿಕೆಟ್ ಉರುಳಿಸಿದ್ದನ್ನು ಬಿಟ್ಟರೆ, ಬ್ಯಾಟಿಂಗ್‌ನಲ್ಲಿ ಅವರಿಂದ ನಿರೀಕ್ಷಿತ ಪ್ರದರ್ಶನ ಮೂಡಿಬಂದಿಲ್ಲ. ಆದಾಗ್ಯೂ ನಿತೀಶ್ ರೆಡ್ಡಿಗೆ ನಾಯಕತ್ವದ ಪಟ್ಟ ಒಲಿದು ಬಂದಿದೆ. ಆಶ್ಚರ್ಯಪಡಬೇಡಿ, ನಿತೀಶ್ ರೆಡ್ಡಿಗೆ ಟೀಂ ಇಂಡಿಯಾದ ನಾಯಕತ್ವ ಸಿಕ್ಕಿಲ್ಲ. ಬದಲಿಗೆ ಆಂಧ್ರ ಪ್ರೀಮಿಯರ್ ಲೀಗ್ ನಲ್ಲಿ ತಂಡದ ನಾಯಕರಾಗಿದ್ದಾರೆ. 2022 ರಿಂದ ಆರಂಭವಾಗಿರುವ ಆಂಧ್ರ ಪ್ರೀಮಿಯರ್ ಲೀಗ್‌ನಲ್ಲಿ ನಿತೀಶ್ ರೆಡ್ಡಿ ಅವರನ್ನು ಭೀಮಾವರಂ ಬುಲ್ಸ್ ತಂಡದ ನಾಯಕರನ್ನಾಗಿ ಮಾಡಲಾಗಿದೆ.

ಈ ಟೂರ್ನಮೆಂಟ್ ರೌಂಡ್ ರಾಬಿನ್ ಸ್ವರೂಪದಲ್ಲಿ ನಡೆಯಲಿದ್ದು, 7 ತಂಡಗಳ ನಡುವೆ ಒಟ್ಟು 19 ಪಂದ್ಯಗಳು ನಡೆಯಲ್ಲಿವೆ.

**ನಿತೀಶ್ ರೆಡ್ಡಿ ಆಂಧ್ರದ ಸ್ಟಾರ್ ಆಟಗಾರ**

ನಿತೀಶ್ ರೆಡ್ಡಿ ಆಂಧ್ರ ಕ್ರಿಕೆಟ್‌ನಲ್ಲಿ ದೊಡ್ಡ ಹೆಸರು. ಐಪಿಎಲ್‌ನಲ್ಲಿ ಸನ್ ರೈಸರ್ಸ್ ಹೈದರಾಬಾದ್ ಪರ ಆಡುತ್ತಿರುವ ನಿತೀಶ್‌ಗೆ 6 ಕೋಟಿ ರೂ. ವೇತನ ನೀಡಲಾಗುತ್ತಿದೆ. ಐಪಿಎಲ್‌ನಲ್ಲಿ ಮಿಂಚಿದ ನಿತೀಶ್‌ಗೆ ಆ ಬಳಿಕ ಭಾರತ ಟಿ20 ತಂಡದ ಕದ ತೆರೆಯಿತು. ಆ ನಂತರ ಟೆಸ್ಟ್ ತಂಡದಲ್ಲೂ ಆಡುತ್ತಿದ್ದಾರೆ. ನಿತೀಶ್ ರೆಡ್ಡಿ ಪ್ರಸ್ತುತ ಇಂಗ್ಲೆಂಡ್ ಪ್ರವಾಸದಲ್ಲಿದ್ದು, ಇದುವರೆಗೆ ಎರಡು ಪಂದ್ಯಗಳಲ್ಲಿ ಆಡಿದ್ದಾರೆ.

**ಐಪಿಎಲ್‌ನಲ್ಲಿ ಮಿಂಚಿದ ನಿತೀಶ್**



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966